ಅಣ್ಣಪ್ಪ ದೈವ

ಪ್ರೊ|| ಎಸ್.ಕೆ. ರಾಮಚಂದ್ರರಾವ್

ಅಣ್ಣಪ್ಪ ದೈವ

ವಿದ್ಯಾಲಂಕಾರ
ಪ್ರೊ|| ಸಾ. ಕೃ. ರಾಮಚಂದ್ರರಾವ್

ಶಾರದಾ ಪ್ರಕಾಶನ
ಅರಳೆಪೇಟೆ : : ಬೆಂಗಳೂರು-560 053

ANNAPPA DAIVA—written by Vidyalankara Prof. S. K. Ramachandra Rao and Published by Sharada Prakashana, Cottonpet, Bangalore-560 053.

ಚಿತ್ರಗಳು—ಲೇಖಕರೇ ಬರೆದವು

ಪ್ರಥಮ ಮುದ್ರಣ : 1983

© ಎಲ್ಲ ಹಕ್ಕುಗಳು ಲೇಖಕರವು

ಮುದ್ರಣ :
ಎಸ್ ಎಸ್ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು-560 004

ಮೊದಲ ಮಾತು

ಇದೇನು ಕತೆಯೋ ? ಕಾದಂಬರಿಯೋ ? ಪ್ರಬಂಧವೋ ? ಪಾಡ್ದನವೋ ? ಬರೆದವನು ನಾನೇ ಆದರೂ ಅರಿಯೆ. ಬರೆಯಬೇಕೆಂದು ಒಳಗಿಂದ ಒತ್ತಡ ಬಂದು ಒದಗಿತು ; ಬರೆದೆ. ಇದು ಯಾವ ಬಗೆಯ ಬರಹ, ಅದರ ಹುರುಳು ಎಷ್ಟು ಎನ್ನುವುದನ್ನು ಓದಿದವರೇ ಹೇಳಬೇಕು.

ಒಳಗಿಂದ ಬಂದ ಒತ್ತಡ ಏನು ಎನ್ನುವಿರಾ ? ಕಳೆದ ವರ್ಷದ ಕೊನೆಯ ತಿಂಗಳಲ್ಲಿ ಹದಿಮೂರನೆಯ ತಾರೀಖು ಧರ್ಮಸ್ಥಳದಲ್ಲಿದ್ದೆ. ಅಂದಿನ ಸರ್ವ ಧರ್ಮ ಸಮ್ಮೇಳನದ ಉದ್ಘಾಟನೆ ಮಾಡಲೆಂದು ಹೆಗ್ಗಡೆಯವರು ನನ್ನನ್ನು ಕರೆಸಿಕೊಂಡಿದ್ದರು. ಧರ್ಮಸ್ಥಳಕ್ಕೆ ಹೋದಾಗಲೆಲ್ಲ ಅಲ್ಲಿನ ಅಣ್ಣಪ್ಪನ ಬೆಟ್ಟಕ್ಕೆ ಹೋಗಿಬರುವುದು ವಾಡಿಕೆ. ಆ ಬೆಟ್ಟವೆಂದರೆ ನನಗೆ ಏನೋ ಒಂದು ಸೆಳೆತ. ಅಲ್ಲಿನ ವಾತಾವರಣವೋ, ಪರಿಸರವೋ, ಸನ್ನಿಧಾನವೋ ಮತ್ತೇನು ಕಾರಣವೋ ತಿಳಿಯದು. ಈ ಬಾರಿಯೂ ಮುಂಜಾನೆಯೆದ್ದು ಬೆಟ್ಟವೇರಿ ಹೋಗಿ ಅಲ್ಲಿನ ದೈವಸ್ಥಾನಗಳಲ್ಲಿ ಸುತ್ತಾಡಿ ಬರುವಾಗ ಇದ್ದಕ್ಕಿದ್ದಂತೆ ಈ ಬರಹದ ವಸ್ತು ಎಳೆ ಎಳೆಯಾಗಿ ಮನಸ್ಸಿನಲ್ಲಿ ಮೂಡಿಕೊಂಡಿತು. ಆಮೇಲೆ, ಬೆಂಗಳೂರಿಗೆ ಹಿಂದಿರುಗಿ ಬರುವ ದಾರಿಯಾಗಿ ಕುಕ್ಕೇ ಸುಬ್ರಹ್ಮಣ್ಯಕ್ಕೆ ಹೋಗುವಾಗ ಈ ವಸ್ತುವಿಗೊಂದು ಆಕೃತಿ ತೋರಿಕೊಂಡಿತು. ಬೆಂಗಳೂರಿಗೆ ಮರಳಿದ ಮೇಲೆ ಇದನ್ನು ಬರೆದು ಮುಗಿಸುವುದು ಕಷ್ಟವೂ ಆಗಲಿಲ್ಲ, ಬರೆದು ಮುಗಿಸಲು ಹೆಚ್ಚು ಸಮಯವೂ ಹಿಡಿಸಲಿಲ್ಲ. ಬರೆದು ಮುಗಿಸುವವರೆಗೆ ಮತ್ತೆ ಏನನ್ನೂ ಕೈಗೆತ್ತಿಕೊಳ್ಳುವುದಾಗಲಿಲ್ಲ. ಇದು ಒತ್ತಡವೆಂದು ತಾನೆ ಅರ್ಥ ?

ಈ ಬರಹದ ವಸ್ತುವನ್ನು ಕುರಿತು ಎರಡು ಮಾತು. ಇದು ಅಣ್ಣಪ್ಪನನ್ನು ಕುರಿತದ್ದು. ಧರ್ಮಸ್ಥಳದಲ್ಲಿ ತುಂಬ ಕಾರಣಿಕವುಳ್ಳ ದೈವ ಅಣ್ಣಪ್ಪನೆಂದು ಎಲ್ಲರೂ ಬಲ್ಲರು. ಅಲ್ಲಿ ಮಂಜುನಾಥಸ್ವಾಮಿಯ ಲಿಂಗವನ್ನು ಮಂಗ

ಳೂರು ಕದರಿಯಿಂದ ಇಲ್ಲಿಗೆ ಹೊತ್ತುತಂದದ್ದು ಇದೇ ದೈವವಂತೆ. ಉಡುಪಿಯ ಎಂಟು ಮಠಗಳಲ್ಲಿ ಒಂದಾದ ಸೋದೆ ಮಠದ ವಾದಿರಾಜಸ್ವಾಮಿಗಳಿಗೂ ಈ ಭೂತರಾಜನಿಗೂ ಸಂಬಂಧವಿದ್ದುದನ್ನೂ ಐತಿಹ್ಯ ಹೇಳುತ್ತದೆ. ಸೋದೆಯಲ್ಲೂ ಧರ್ಮಸ್ಥಳದಲ್ಲಿರುವಂತೆ ಅಣ್ಣಪ್ಪನಿಗೆ ಆದರದ ಎಡೆಯುಂಟು. ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ದೇವರಾಜ ಹೆಗ್ಗಡೆಯವರು ಧರ್ಮಾಧಿಕಾರಿಗಳಾಗಿರುವಾಗ (1503 ರಿಂದ 1533 ರವರೆಗೆ) ಬಂದು ಮಂಜುನಾಥ ಲಿಂಗವನ್ನು ಅಣ್ಣಪ್ಪಭೂತದ ಕೈಯಿಂದ ತರಿಸಿ ತಾವು ಪೂರ್ವವಿಧಿಯಂತೆ ಪ್ರತಿಷ್ಠೆಮಾಡಿ, ಕುಡುಮವೆಂದು ಹೆಸರಾಗಿದ್ದ ಊರನ್ನು ಧರ್ಮಸ್ಥಳವೆಂದು ಹೊಗಳಿ ಹೋದರಂತೆ. ಆದರೆ ಅದಕ್ಕೂ ಮೊದಲೇ ಕನ್ಯಾಕುಮಾರಿ, ಕಾಳರ್ಕಾಯಿ, ಕಾಳರಾಹು, ಕುಮಾರಸ್ವಾಮಿಯರೆಂಬ ಹೆಸರಿನ ನಾಲ್ವರು ದೈವಗಳು ಬರ್ಮಣ್ಣ ಹೆಗ್ಗಡೆ ಮತ್ತು ಅವರ ಕೈಹಿಡಿದ ಅಮ್ಮುಬಲ್ಲಾಳತಿ ಇವರ ಕಾಲದಲ್ಲಿ ಕುಡುಮಕ್ಕೆ ಬಂದು, ಆ ದಂಪತಿಗಳು ಒದಗಿಸಿದ ಆದರದ ಆತಿಥ್ಯಕ್ಕೆ ಸಂತೋಷಪಟ್ಟು ಇಲ್ಲಿಯೇ ನೆಲೆಸಿದರೆಂದು ಸ್ಥಳ ಪುರಾಣದ ಒಕ್ಕಣೆ.

ಅಂತೂ ಧರ್ಮಸ್ಥಳದ ಹಿರಿಮೆಗೆ ಕಾರಣ ಕುಕ್ಕೇ ಸುಬ್ರಹ್ಮಣ್ಯದಿಂದ ಇಲ್ಲಿಗೆ ಬಂದ ಅಣ್ಣಪ್ಪಭೂತ, ಕನ್ಯಾಕುಮಾರಿಯೇ (ಅಮ್ಮನವರು) ಮೊದಲಾಗಿ ನಾಲ್ಕು ದೈವಗಳು, ಕದರಿಯಿಂದ ಬಂದು ಇಲ್ಲಿ ನೆಲೆಸಿದ ಮಂಜುನಾಥ-ಶಿವ. ಅಲ್ಲಿನ ಹೆಗ್ಗಡೆಯವರು ಎಲ್ಲರೂ ಪೂರ್ವ ಪದ್ಧತಿಯನ್ನು ಬಿಡದೆ, ಕಟ್ಟುಕಟ್ಟಳೆಗಳನ್ನು ಕಡೆಗಾಣಿಸದೆ, ಧರ್ಮವನ್ನು ನಂಬಿ ನಡೆಸುತ್ತಾ ಬಂದಿರುವುದೊಂದು ವಿಶೇಷವೇ. ಇವರು ಯಾವ ಕಾಲದಲ್ಲಿ ಜೈನಧರ್ಮಕ್ಕೆ ಒಲಿದು ಚಂದ್ರನಾಥ ತೀರ್ಥಂಕರನ ಸನ್ನಿಧಿಯನ್ನೂ ಇಲ್ಲಿ ಒದಗಿಸಿದರೋ ತಿಳಿಯದು; ಅಂತೂ ಅದೂ ಸೇರಿಕೊಂಡು ಬಂದಿದೆ. ಆದರೆ ದೈವಗಳ ಹಿಡಿತವೇನು ಸಡಿಲವಾಗಿಲ್ಲ. ಇದನ್ನೆಲ್ಲ ಕುರಿತು ಸ್ವಲ್ಪ ಅಧ್ಯಯನವನ್ನೂ ಹಿಂದೆ ನಾನು ನಡೆಸಿದ್ದುಂಟು. ಅದರ ಫಲವನ್ನು ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಅನುಬಂಧದಲ್ಲಿ ಕೊಂಚಮಟ್ಟಿಗೆ ಕಾಣಬಹುದು.

ನನ್ನ ಮಟ್ಟಿಗೆ ಈ ದೈವಗಳ ನಂಟಿನ ಒಗಟನ್ನು ಒಂದು ಬಗೆಯಾಗಿ ಬಿಡಿಸುವುದಾದದ್ದು ಅಣ್ಣಪ್ಪನ ಬೆಟ್ಟದ ಮೇಲೆ ಕಳೆದ ವರ್ಷ ನಾನು ಸುತ್ತಾ

ಡುತ್ತಿರುವಾಗ. ಈ ಕ್ಷೇತ್ರದ ವಿಚಾರವಾಗಿ ಆವರೆಗೆ ನನ್ನೆದುರು ಮೈದಳೆದು ನಿಂತಿದ್ದ ಹಲವಾರು ಸಮಸ್ಯೆಗಳು ಒಮ್ಮೆಲೆ ಪರಿಹಾರವಾದಂತೆ ತೋರಿತು. ಅಂದು ನಾನು ಅಲ್ಲಿನ ದೈವಸ್ಥಾನಗಳಲ್ಲಿ ಸುಳಿದಾಡುವಾಗ ಈ ಸಮಸ್ಯೆಗಳನ್ನು ಕುರಿತೇನೂ ಚಿಂತಿಸುತ್ತಿರಲಿಲ್ಲ; ಸಮಸ್ಯೆಗಳಿರುವುದೂ ಆಗ ನನ್ನ ಅರಿವಿನಲ್ಲಿರಲಿಲ್ಲ. ಅಣ್ಣಪ್ಪನ ಗುಡಿಯನ್ನು ಸುತ್ತರಿದು ಬಂದೊಡನೆ ನನ್ನ ಮನಸ್ಸಿನಲ್ಲಿ ಅಣ್ಣಪ್ಪ ದೈವದ ಕತೆ ಸುರುಳಿಸುರುಳಿಯಾಗಿ ಬಿಚ್ಚಿಕೊಂಡಿತು; ಆ ಕತೆಯನ್ನು ಹೆರವರಿಗೆ ಹೇಳಲು ಬೇಕಾದ 'ನುಡಿಕಟ್ಟೂ' ಸ್ಥೂಲವಾಗಿ ಸಿದ್ಧವಾಯಿತು.

ಹಿಂದೆ ನಾನು ಈ ವಿಚಾರವಾಗಿ ಮಾಡಿದ ಅಧ್ಯಯನ ಚಿಂತನೆಗಳ ಪ್ರಭಾವ ಇಲ್ಲಿ ಮೂಡಿಬಂದಿರುವುದು ಸಹಜವೇ. ಮನಸ್ಸಿನೊಳಗೆ ಕುದಿ ಇದ್ದರೆ ತಾನೆ ಹೊರಗೆ ಹರಿಯುವುದು? ಆದರೆ ಕುದಿ ಬಂದದ್ದು ಹೇಗೆ ಎನ್ನುವುದು ನನಗೆ ತಿಳಿಯದು. ಬರಹಕ್ಕೆ ಪೂರ್ವಸಿದ್ಧತೆಯಿದ್ದಿತಾದರೂ, ತಕ್ಕಷ್ಟು ಸಾಮಗ್ರಿ ಇದ್ದಿತಾದರೂ, ಅಲ್ಲಿ ಆಗ ಇದ್ದಕ್ಕಿದ್ದಂತೆ ಹೀಗೆ ಹೊರಗೆ ಹರಿದೀತೆಂದು ನಾನೆಣಿಸಿರಲಿಲ್ಲ. ಕೆಲವು ವಿವರಗಳು ಹೊಸತಾಗಿಯೇ ಕಾಣಿಸಿಕೊಂಡುವು. ವಿಚಾರಮಾಡಿದರೆ ಕೆಲವು ಸರಿಯೆನಿಸುತ್ತವೆ, ಕೆಲವು ಸಮರ್ಥನೆ ಮಾಡುವುದು ಕಷ್ಟವೆನಿಸುತ್ತದೆ. ಏನಾದರಿರಲಿ, ನನಗೆ ಅವು ತೋರಿಕೊಂಡಂತೆ ಬರೆದು ಮುಗಿಸಿದ್ದೇನೆ. ಬರೆಯುವುದೇನೋ ಪ್ರಯತ್ನ ಪೂರ್ವಕವಾಗಿಯೇ ನಡೆದದ್ದೆನ್ನಿ.

ಮೇಲಿನ ಮಾತಿಗೆ ಇದನ್ನು ಸೇರಿಸಬೇಕು. ನನಗೆ ಎಳವೆಯಿಂದಲೂ ತುಳು ಪಾಡ್ದನಗಳಲ್ಲಿ ಆಸಕ್ತಿ. ತುಳು ನುಡಿಯ ಪರಿಚಯ ನನಗೆ ಅಷ್ಟಾಗಿ ಇದೆಯೆಂದಲ್ಲ, ಇಲ್ಲವೆಂದರೂ ಒಪ್ಪುತ್ತದೆ. ನಾನು ದಕ್ಷಿಣ ಕನ್ನಡ ಜಿಲ್ಲೆಯ ಸಾಲಿಗ್ರಾಮದವನಲ್ಲ, ಮೈಸೂರು ಕಡೆಯ ಸಾಲಿಗ್ರಾಮದವನು! ನನ್ನ ಮನೆ ಮಾತು ಈ ಕಡೆಯ ಕನ್ನಡವೇ. ಆದರೆ ಮಾಧ್ವಮನೆತನಕ್ಕೆ ಸೇರಿದವನಾಗಿ, ತಾಯಿ ತಂದೆಯರೊಂದಿಗೆ ಹಲವು ಬಾರಿ ಉಡುಪಿಗೆ ಹೋಗುವ ಅವಕಾಶವಾಯಿತು. ಉಡುಪಿ ಮಧ್ವಾಚಾರ್ಯರು ಹುಟ್ಟಿ, ಬೆಳೆದು, ಮರೆಯಾದ ಊರಾಯಿತಲ್ಲ? ಉಡುಪಿಗೆ ಹೋದಾಗ ಸುತ್ತಮುತ್ತಲ ಊರುಗಳಿಗೂ ಹೋಗಿ ಬರುವುದಾಯಿತು. ಆಮೇಲೆ ನನಗೆ ದಕ್ಷಿಣಕನ್ನಡಜಿಲ್ಲೆಯ ಮಿತ್ರರು ಬಹುಮಂದಿ. ಅವರೊಂದಿಗೆ ಅಲ್ಲಿನ ದೈವಸ್ಥಾನಗಳು, ಆಲಡೆಗಳು, ಗರಡಿಗಳು ಇಲ್ಲೆಲ್ಲ

ಸುತ್ತಾಡಿ, ಹಲವು 'ದರ್ಶನ' ಗಳನ್ನು ಕಣ್ಣಾರೆ ಕಂಡು, ಪಾಡ್ದನಗಳನ್ನು ವೇಷ ಕಟ್ಟುವವರಿಂದಲೇ ಕೇಳಿ (ಮಿತ್ರರಿಂದ ಅರ್ಥತಿಳಿದುಕೊಂಡು), ನುಡಿಕಟ್ಟಿನ ಪ್ರಭಾವವನ್ನು ಅನುಭವಿಸಿ, ಕೋಲ-ನೇಮಗಳಾಗುವಾಗ ಇದ್ದು ತುಳುನಾಡಿನ ಭೂತಗಳೊಂದಿಗೆ ನೆಂಟನ್ನು ಬೆಳೆಸಿಕೊಂಡಿದ್ದೇನೆ. ಹೀಗಾಗಿ ಪಾಡ್ದನಗಳೆಂದರೆ ನನಗೆ ತುಂಬ ಮೆಚ್ಚು.

ಪಾಡ್ದನಗಳನ್ನು ನೇರವಾಗಿ ಅರ್ಥಮಾಡಿಕೊಳ್ಳುವ ಸೌಲಭ್ಯ ಇಲ್ಲವಾಗಿ, ಈ ದಿಸೆಯಲ್ಲಿ ಪೂರ್ವಸೂರಿಗಳಾದ ರಂಗನಾಥ ಪೂಂಜರು, ಬಾಡೂರು ಜಗನ್ನಾಥ ರೈಯವರು, ನಂದೊಳ್ಗೆ ಅಮುಣಿಂಜೆ ಗುತ್ತು ಶೀನಪ್ಪ ಹೆಗ್ಡೆಗಳು, ಪಂಜೆ ಮಂಗೇಶರಾಯರು, ಅಮೃತ ಸೋಮೇಶ್ವರರು, ನೇಮಿರಾಜ ಮಲ್ಲರು, ಕನರಾಡಿ ವಾದಿರಾಜ ಭಟ್ಟರು ಮೊದಲಾದವರ ಬರಹಗಳಿಂದ ನೆರವನ್ನು ಪಡೆದುಕೊಂಡಿದ್ದೇನೆ. ನನ್ನ ಮಿತ್ರರು ದಿವಂಗತ ಡಾ|| ಪಾದೂರು ಗುರುರಾಜ ಭಟ್ಟರು ಹಲವಾರು ವಿವರಣೆಗಳನ್ನು ಒದಗಿಸಿದರು. ಹಿರಿಯ ಮಿತ್ರರಾದ ಹೊಸನಗರದ ಸುಬ್ರಹ್ಮಣ್ಯ ಉಡುಪರು, ಪ್ರಾಧ್ಯಾಪಕ ಟಿ. ಕೇಶವಭಟ್ಟರು, ಮೂಲ್ಕಿಯ ವೆಂಕಟರಮಣ ಐತಾಳರು, ಉಡುಪಿಯ ಶ್ರೀಧರ ತಂತ್ರಿಗಳು ಪಾಡ್ದನಗಳ ಸಾಹಿತ್ಯ, ಗೀತ, ಮಿನಿಕೆಗಳನ್ನು ಕುರಿತು ವಿವರಗಳನ್ನು ತಿಳಿಸಿದರು. ಸಾಹಿತೀಮಿತ್ರರಾದ ನಾರಾಯಣ ಜೋಗಿತ್ತಾಯರು ಪಾಡ್ದನಗಳಲ್ಲಿ ಬರುವ ಒಗಟುಗಳಂತಿರುವ ಹಲವು ಮಾತುಗಳಿಗೆ ಅರ್ಥ ಹೇಳಿದರು. ಹೀಗಾಗಿ ಪಾಡ್ದನಗಳ ಸ್ವರೂಪ, ಸ್ವಭಾವ, ಸಂವಿಧಾನಗಳನ್ನು ಸಾಧ್ಯವಾದಷ್ಟು ಅರಿತುಕೊಳ್ಳುವುದಾಯಿತು.

ಅಣ್ಣಪ್ಪಭೂತವನ್ನು ಕುರಿತದ್ದೇ ಪಾಡ್ದನವೊಂದು ಇದೆಯೋ ನನಗೆ ತಿಳಿಯದು ; ನಾನಂತೂ ಕೇಳಲಿಲ್ಲ. ತಿಳಿದವರನ್ನೂ ನೋಡಲಿಲ್ಲ. ಆದರೆ ಪಂಜುರ್ಲಿದೈವದ ಪಾಡ್ದನಗಳಲ್ಲಿ ಅಣ್ಣಪ್ಪನ ಕುರುಹುಗಳು ಕಾಣುತ್ತವೆ. ಪಂಜುರ್ಲಿಯೇ ಅಣ್ಣಪ್ಪಭೂತವೆಂದು ಹೇಳುವುದೂ ಉಂಟು. ಅಬ್ಬಗೆ-ದಾರಗೆಯರಂತೆ, ಬೊಬ್ಬರ್ಯಭೂತದಂತೆ, ಕೋಟಿ-ಚನ್ನಯ್ಯರಂತೆ ಅಣ್ಣಪ್ಪಭೂತವೂ ಮೊದಲು ಮನುಷ್ಯನಾಗಿದ್ದು ತನ್ನ ಸಾಹಸ-ಕೃತ್ಯಗಳಿಂದ ದೈವತ್ವವನ್ನು ಪಡೆದದ್ದೆಂದು ಪ್ರತೀತಿಯೂ ಇದೆ. ಈ ಮೊದಲೇ ಹೇಳಿದಂತೆ, ಧರ್ಮಸ್ಥಳದ ಸ್ಥಳಪುರಾಣ ಕನ್ಯಾಕುಮಾರಿಯೇ ಮೊದಲಾದ ನಾಲ್ವರು ದೈವ

ಗಳಿಗೆ ಅಣ್ಣಪ್ಪಭೂತ ಬಂಟನೆಂದೂ, ಮಂಗಳೂರಿನ ಕದರಿಗುಡ್ಡದಿಂದ ಮಂಜುನಾಥನನ್ನು ಧರ್ಮಸ್ಥಳಕ್ಕೆ ತಂದಿತೆಂದೂ ಹೇಳುತ್ತದೆ.

ಇಷ್ಟನ್ನು ಮೀರಿ ಅಣ್ಣಪ್ಪನ ಕತೆಯನ್ನು ನಾನು ಯಾರ ಬಾಯಲ್ಲೂ ಕೇಳುವುದಾಗಲಿಲ್ಲ. ಇದು ನನ್ನ ಕುತೂಹಲವನ್ನು ಆಗಾಗ ಕೆರಳಿಸುತ್ತಿತ್ತು. ಒಡಲಿನ ಒಳ ಪದರದಲ್ಲಿ ಅಡಗಿದ್ದ ಈ ಕುತೂಹಲವೇ ಬೆಟ್ಟದ ಮೇಲೆ ನನ್ನ ಮನಸ್ಸಿನಲ್ಲಿ ಅಣ್ಣಪ್ಪನ ಕತೆಯನ್ನು ಮೂಡಿಸಿತೋ ಏನೋ! ಅಂತೂ, ಈಗ ನನ್ನ ಬರಹದಲ್ಲಿ ಬಂದಿರುವ ಕತೆಯಲ್ಲಿ ಮೇಲೆ ಕಾಣಿಸಿದ ಕೆಲವು ವಿವರಗಳು ಹೊಂದಿಕೊಂಡಿವೆಯಾದರೂ, ಬಹುಭಾಗ ಕಾಲ್ಪನಿಕವಾದುದೇ. ಎಂದರೆ ಇಲ್ಲಿ ಕಾಣಿಸಿಕೊಳ್ಳುವ ಪ್ರಸಂಗಗಳಿಗೆ ಪಾಡ್ದನಗಳ ಅಥವಾ ಬೇರೆ ಬಗೆಯ ಜಾನಪದ ಕತೆಗಳ ಆಧಾರವೇನೂ ಇರದು. ನನ್ನ ಅಧ್ಯಯನದ ಬೆಂಬಲ ಅಷ್ಟಿಷ್ಟು ಇದ್ದರೂ, ಅನುಭವದ ಪಾಲು ಹೆಚ್ಚಿನ್ನಬಹುದು.

ಇನ್ನು, ಕತೆಯ ಓಟವನ್ನು ಗುರುತಿಸಲು ನಾನೇ ಬರೆದಿರುವ, ಇಲ್ಲಿ ಸೇರಿರುವ, ಚಿತ್ರಗಳ ವಿಚಾರ ಒಂದೆರಡು ಮಾತು. ಕತೆಯನ್ನು ಬರೆಯಲು ತೊಡಗಿದಾಗ ಚಿತ್ರಗಳನ್ನೂ ಸೇರಿಸಬೇಕೆಂಬ ಆಲೋಚನೆಯಿರಲಿಲ್ಲ. ಈವರೆಗೆ ನಾನು ಭೂತಗಳ ಚಿತ್ರಗಳನ್ನು ಬರೆದದ್ದೂ ಇಲ್ಲ. ಆದರೆ ಬರೆಯುತ್ತ ಹೋದಂತೆ, ಮನಸ್ಸಿನಲ್ಲಿ ಭೂತಗಳ ರೂಪು ಮೈದಳೆಯುತ್ತಿತ್ತು, ಆಗಾಗ ಕನಸಿನಲ್ಲೂ ಕಾಣಿಸಿಕೊಳ್ಳುತ್ತಿತ್ತು. ಮನಸ್ಸಿನಲ್ಲಿ ಮೂಡಿಬಂದಂತೆ ಚಿತ್ರಗಳನ್ನು ಬರೆಯಬೇಕೆನಿಸಿತು; ಬರೆದೆ. ಮಾತಿನಲ್ಲಿ ಹೇಳಲಾಗದ ಅದ್ಭುತರಸ ಚಿತ್ರದಲ್ಲಿ ಕಾಣುವುದಾದರೆ ಕತೆಯಲ್ಲಿ ಸ್ವಾರಸ್ಯ ಇದ್ದುದಾದರೆ ಅದು ಹೆಚ್ಚೀತೋ ಎನ್ನುವ ಆಸೆ.

ಈ ಚಿತ್ರಗಳಿಗೆ ಮೂಲ, ಕೋಲ ಮೊದಲಾದ ಸಂದರ್ಭಗಳಲ್ಲಿ ಕಟ್ಟಿದ ಭೂತದ ವೇಷಗಳನ್ನು ನೋಡಿದ ನೆನಪೇ. ಆ ಸಂದರ್ಭಗಳಲ್ಲಿ ಆಗ ನಾನೇನೂ ಚಿತ್ರಗಳನ್ನು ಬಿಡಿಸಿಕೊಳ್ಳುತ್ತಿರಲಿಲ್ಲ; ಆದರೆ ನೋಡಿದ ಆ ನೋಟ ಎಂದಾದರೂ ಮರೆಯುವುದು ಸಾಧ್ಯವೆ? ಮತ್ತೆ ಮೆಕ್ಕೆಕಟ್ಟು (ಬಾರಕೂರು ಹತ್ತಿರ), ಮಾರಣಕಟ್ಟೆ, ನಂದಳಿಕೆ, ಬೈಲೂರು (ಮುರುಡೇಶ್ವರದ ಹತ್ತಿರ) ಈ ಸ್ಥಳಗಳಲ್ಲಿ ಭೂತಗಳ ಮರದ ಗೊಂಬೆಗಳನ್ನು ಬಾಯಿ ಬಿರಿದು ಕಣ್ಣರಳಿಸಿ

ಎವೆಯಿಕ್ಕದೆ ನೋಡಿದ್ದೇನೆ. ಎಂಥ ಕಳೆ ಆ ಪುತ್ಥಳಿಗಳಲ್ಲಿ ! ಒಮ್ಮೊಮ್ಮೆ ದಿಗಿಲಾದುದುಂಟು, ಕನವರಿಸಿಕೊಂಡುದುಂಟು, ನಿದ್ದೆಯಿಂದ ಬೆಚ್ಚಿ ಎಚ್ಚರಗೊಂಡುದುಂಟು. ಆದರೆ ಅವುಗಳ ಆಕರ್ಷಣೆ ಬಲಗುಂದಲಿಲ್ಲ. ಇಲ್ಲಿನ ದೈವಗಳಂತೆಯೇ ಕೇರಳದ ಕಡೆ ತೆಯ್ಯೊಂಗಳೂ ಅದ್ಭುತವಾದ ರೂಪವನ್ನು ತಳೆಯುತ್ತವೆ. ನನ್ನ ಕಲಾವಿದ ಮಿತ್ರರಾದ ಬಾಲನ್ ನಂಬಿಯಾರ್ ಈ ತೆಯ್ಯಂಗಳ ಆಟಗಳನ್ನು ಛಾಯಾ ಚಿತ್ರದಲ್ಲಿ ಹಿಡಿದಿಟ್ಟುಕೊಂಡುದನ್ನು ನನಗೆ ತೋರಿಸಿದ್ದಾರೆ ; ಸಂದರ್ಭಗಳನ್ನೂ ವೇಷಗಳನ್ನೂ ವಿವರಿಸಿದ್ದಾರೆ. ಇವನ್ನೆಲ್ಲ ನೋಡಿದಾಗ ಅದರ ವೈನವಿರೇಳಿಸುವ ರೂಪ ಕಣ್ಣಿಗೆ ಕಟ್ಟಿದಂತೆ ನೆನಪಿನಲ್ಲಿ ಉಳಿದಿರುವುದು ಆಶ್ಚರ್ಯವೇನಲ್ಲ. ಇಂಥ ಅನುಭವವೇ ನನ್ನ ಚಿತ್ರಣದ ಹಿಂದಿರುವ ಸಾಮಗ್ರಿ. ಚಿತ್ರಿಸುವಾಗ ಬೇಕೆಂದು ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದೇನೆ. ಉದಾಹರಣೆಗೆ, ತುಳುನಾಡ ಭೂತಗಳಿಗಿರುವ ಸಿರಿಲಂಗದ ಬದಲು ಕೇರಳದ ಭೂತಗಳಿಗಿರುವಂತೆ ನೆರಿಗೆಯ ಲಂಗ, ಇಲ್ಲಿಯ ಅಗಲವಾದ ಅಣಿಯ ಬದಲು ಅಲ್ಲಿನ ಎತ್ತರವಾದ ಅಣಿ ಇತ್ಯಾದಿ.

ಹಿರಿಯರ ನೆರವಿಲ್ಲದೆ, ಸಂಸ್ಕಾರಗಳ ಸಹಾಯವಿಲ್ಲದೆ, ಒಡಲ ಒತ್ತಾಸೆಯಿಲ್ಲದೆ ಮನುಷ್ಯ ಏನನ್ನು ತಾನೇ ಮಾಡಿಯಾನು ? ಹಿರಿಯರ ಹೆಗಲನ್ನೇರಿಯೇ ಅಲ್ಲವೆ ನಾವು ಎತ್ತರದಲ್ಲಿರುವುದು ? ಸಂಸ್ಕಾರಗಳಿಂದ ತಾನೆ ನಾವು ಬೆಳೆದು ಗಟ್ಟಿಯಾಗಿರುವುದು ? ಒಡಲಲ್ಲಿ ಒತ್ತಾಸೆಯಿರುವಾಗಲೇ ಅಲ್ಲವೆ ಬದುಕು ಹಸನಾಗುವುದು ? ಬದುಕಿಗೊಂದು ಅರ್ಥ ಬರುವುದು ? ದೈವಗಳ ಕಲ್ಪನೆಯ ಹಿನ್ನೆಲೆಯಲ್ಲಿರುವ ಭಾವ ಇದು. ಇದನ್ನು ಜನರಿಗೆ ಮನದಟ್ಟು ಮಾಡಿಕೊಡುವುದೇ ಪಾಡ್ದನಗಳ ಉದ್ದೇಶವೆಂದು ನನ್ನ ಎಣಿಕೆ. ಪಾಡ್ದನಗಳ ಸ್ವಾರಸ್ಯವೆಂದರೆ ಜಾನಪದ ಚೌಕಟ್ಟಿನಲ್ಲಿ ಅಧ್ಯಾತ್ಮದ ಕಳೆಯನ್ನು ಕೂಡಿಸುವುದು ; ವ್ಯಕ್ತಿಯನ್ನೂ ಸಮುದಾಯವನ್ನೂ ಅಲೌಕಿಕವಾದ ನೆಲೆಯಲ್ಲಿ ಒಂದುಗೂಡಿಸುವುದು. ಮಾನವ ಸಂಸ್ಕೃತಿಯ ಮುಂಜಾನೆ ಈ ಕತೆಯ ಸಂದರ್ಭ.

ಇನ್ನು , ಈ ಬರಹದ ಮೌಲ್ಯದ ಬಗ್ಗೆ ನಾನು ಹೇಳುವಂಥದೇನೂ ಇರದು. ಆದರೆ ಇಷ್ಟು ಮಾತ್ರ ಓದುಗರಲ್ಲಿ ಅರಿಕೆ ಮಾಡಿಕೊಳ್ಳಬೇಕು. ಇಲ್ಲಿ ಬಂದಿರುವ ವಿವರಗಳು ಬಹುಮಟ್ಟಿಗೆ ಕಾಲ್ಪನಿಕವಾದುವು. ಅವು ಒದಗಿಬಂದ ಬಗೆಯನ್ನು ಕುರಿತು ಆಗಲೇ ಹೇಳಿದ್ದೇನೆ. ಮತ್ತೆ ಅದನ್ನು ಎತ್ತಿ

ಹೇಳುವ ಕಾರಣವೆಂದರೆ, ಇದನ್ನು ಇತಿಹಾಸವೆಂದಾಗಲೀ ಶೋಧನೆಯೆಂದಾಗಲೀ ಓದುಗರು ಬಗೆಯದಿರಲೆಂದು. 'ನನಗೆ ಹೀಗೆ ಅನಿಸುತ್ತದೆ ಅಥವಾ ಅನಿಸಿತು' ಎಂದಷ್ಟೇ ನನ್ನ ಸಮರ್ಥನೆ. ನನಗೆ ಅನಿಸಿದುದೆಲ್ಲ ದಿಟವೂ ಹೌದು ಎಂದು ಹೇಳುವ ಹೆಡ್ಡತನ ನನಗಿಲ್ಲ!

ಆದರೆ, ಕಡೆಯಲ್ಲಿ ಒಂದು ಅನುಬಂಧವನ್ನು ಸೇರಿಸಿದ್ದೇನೆ. ಅದೇನೋ ಪ್ರಬಂಧವೇ, ನಿಜ. ನಮ್ಮ ಧರ್ಮದ ಹರವಿನಲ್ಲಿ ಆಸಕ್ತಿಯಿರುವವರು, ಇತಿಹಾಸದ ಧೋರಣೆಯನ್ನು ಬಲ್ಲವರು ಇದನ್ನು ಪರಾಂಬರಿಸಬೇಕು; ತಪ್ಪೋ ಸರಿಯೋ ತೂಗಬೇಕು. ಕಲ್ಪನೆಯೇ ಪ್ರಧಾನವಾದ ಈ ಬರಹದೊಂದಿಗೆ ವಿಚಾರಾತ್ಮಕವಾದ ಆ ಅನುಬಂಧವನ್ನು ಸೇರಿಸುವುದೇ ಬಿಡುವುದೇ ಎಂದು ನನ್ನ ಮನಸ್ಸಿನಲ್ಲೇ ತುಯ್ದಾಟವಾಯಿತು. ಕಡೆಗೆ 'ಸೇರಿಸಿಯೇ ಬಿಡುವ ಇರಲಿ' ಎನಿಸಿತು. ಸೇರಿಸಿದ್ದಕ್ಕೆ ಬೇಸರಗೊಳ್ಳುವವರು ಮನ್ನಿಸಬೇಕು. ಬೇಸರಗೊಳ್ಳದವರು ಈ ಭಾಗವೇ ಬೇರೆ ಆ ಭಾಗವೇ ಬೇರೆ ಎನ್ನುವುದನ್ನು ಗಮನಿಸಬೇಕು.

ಬರೆದುದನ್ನು ಕುತೂಹಲದಿಂದ ಓದಿ, ಅದರಲ್ಲಿ ಆದರವನ್ನು ತಾಳಿ, ಅಚ್ಚು ಮಾಡಲು ಮುಂದೆ ಬಂದ ಗೆಳೆಯರು ಶಾರದಾ ಪ್ರಕಾಶನದ ಬಸವರಾಜರು. ಅವರ ಒತ್ತಾಯ ಇರದಿದ್ದರೆ ಇದು ಅಚ್ಚು ಕಾಣುತ್ತಿರಲಿಲ್ಲ. ಒಳಗಿನ ಒತ್ತಡದಿಂದ ಬರೆದು ಮುಗಿಸಿದ ಮೇಲೆ ಅದರ ವಿಚಾರವಾಗಿ ನನ್ನ ಆಸಕ್ತಿ ಇಳಿಮುಖವಾದುದು ಸಹಜವೇ. ಬರೆದುದನ್ನೆಲ್ಲ ಅಚ್ಚುಗಾಣಿಸಬೇಕೆಂಬ ಹಂಬಲವಂತೂ ನನಗಿಲ್ಲ. ಹೀಗಾಗಿ ಇದು ಅಚ್ಚು ಮನೆಯ ಮುಖ ಕಂಡುದಕ್ಕೆ ಶ್ರೀ ಬಸವರಾಜ್‌ರವರಿಗೆ ನನ್ನ ಕೃತಜ್ಞತೆ ಸಲ್ಲಬೇಕು. ಆಸಕ್ತಿಯಿಂದಲೂ ವಿಶ್ವಾಸದಿಂದಲೂ ಅಚ್ಚುಮಾಡಿದ ಮಿತ್ರರು ಎಮ್‌ಎಮ್ ಪ್ರಿಂಟಿಂಗ್ ವರ್ಕ್ಸ್‌ನ ಶ್ರೀ ನಾಗರಾಜ್ ಅವರು. ಅವರಿಗೂ ನನ್ನ ಕೃತಜ್ಞತೆ ಸಲ್ಲುತ್ತದೆ.

ಬರಹವೆಲ್ಲ ಮುಗಿದು ಅಚ್ಚು ಮನೆಯನ್ನು ಮುಟ್ಟುವಮೊದಲು, ಇದರ ವಿಚಾರ ಕೇಳಿದ ಧರ್ಮಸ್ಥಳದ ಸನ್ಮಾನ್ಯ ಹೆಗ್ಗಡೆಯವರು ಬರಹವನ್ನು ತರಿಸಿಕೊಂಡು ಆದರದಿಂದ ಅದರ ಮೇಲೆ ಕಣ್ಣಾಡಿಸಿದರು. ಅನಂತರ ಅದರಲ್ಲಿ

ಬಂದ ಕೆಲವು ವಿವರಗಳನ್ನು ಕುರಿತು ನನ್ನೊಂದಿಗೆ ವಿಶ್ವಾಸದಿಂದ ಮಾತನಾಡಿದರು ; ಹಲವಾರು ಹೊಸ ವಿವರಗಳನ್ನು ತಿಳಿಯಹೇಳಿದರು. ನನ್ನ ಬರಹದಲ್ಲಿ ಬಂದಿರುವ ಕೇವೊಂದು ಸಂಗತಿಗಳು ಅಲ್ಲಿನ ಸಂಪ್ರದಾಯದ ಒಕ್ಕಣೆಗೆ ಸರಿಹೊಂದುವುದಿಲ್ಲವೆಂದೂ ತಿಳಿಸಿದರು, ನಿದರ್ಶನಕ್ಕೆ ಅಣ್ಣಪ್ಪ, ಪಂಜುರ್ಲಿ ಬೇರೆ ಬೇರೆ ದೈವಗಳೋ ಒಂದೇ ದೈವವೋ ಎಂಬುದು. ಕೆಲವು ಮಾತುಗಳಿಗೆ ಅರ್ಥ ಸ್ಪಷ್ಟವಾಗದಿರುವುದನ್ನೂ ಎತ್ತಿತೋರಿಸಿದರು. ಉದಾಹರಣೆಗೆ 'ಬೀಡು' ಎಂಬ ಮಾತನ್ನು ಈ ಕಡೆಯ ಜನವಸತಿ ಎಂಬರ್ಥದಲ್ಲಿ ಬಳಸಿದ್ದೇನೆ ; ಅಲ್ಲಿ ಬೀಡೆಂದರೆ ಹೆಗ್ಗಡೆಯವರ ಅರಮನೆಯೇ ; ಅದನ್ನು ನಾನು ಇಲ್ಲಿ ಚಾವಡಿಯೆಂದು ಕರೆದಿದ್ದೇನೆ. ಅವರ ಸೂಚನೆಗಳೆಲ್ಲ ಸರಿಯೆಂದು ನನಗೆ ತೋರಿದವು.

ಆದರೆ ಈ ಬರಹವನ್ನು ಮುಗಿಸಿದೊಡನೆ ನನ್ನ ಗಮನವೆಲ್ಲ ನನ್ನ ಎಂದಿನ ಕೆಲಸವಾದ 'ಆಯುರ್ವೇದ ವಿಶ್ವಕೋಶ'ದ ಸಿದ್ಧತೆಯ ಕಡೆಗೇ ಹರಿದುದರಿಂದ, ಸನ್ಮಾನ್ಯ ಹೆಗ್ಗಡೆಯವರು ಸೂಚಿಸಿದ ಮಾರ್ಪಾಟುಗಳ, ತಿಳಿಯಹೇಳಿದ ಹೊಸ ವಿವರಗಳ ಚೌಕಟ್ಟಿನಲ್ಲಿ ನನ್ನ ಬರಹವನ್ನು ತಿದ್ದುವುದಾಗಲಿಲ್ಲ. ಇದಕ್ಕಾಗಿ ಅವರ ಕ್ಷಮೆಯನ್ನು ಬೇಡುತ್ತ, ಅವರ ಸೌಜನ್ಯವನ್ನು ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತ ಬೇರೆ ದಾರಿಕಾಣದೆ ಬರಹವನ್ನು ಇದ್ದಂತೆಯೇ ಉಳಿಸಿದ್ದೇನೆ. ಹೇಗೂ ಇದು ಕಲ್ಪನೆಯೇ ಮುಖ್ಯವಾದ ಕತೆಯಷ್ಟೆ ? ಅಣ್ಣಪ್ಪನನ್ನು ಕುರಿತ ಪ್ರಬಂಧವೊಂದನ್ನು ಮುಂದೆ ಬರೆಯುವ ಬಯಕೆಯೇನೋ ಇದೆ.

— ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ಅಣ್ಣಪ್ಪ ದೈವ

(1)

ಕೊರಗರ ದೇರೆಯುದು ಕುಡುಮದ ಅಡವಿಯ ನಡುವೆ ಒಂಟಿಯಾಗಿ ಬಾಳುತ್ತಿದ್ದ ಬಡಜೀವ. ಕೊರಗರ ಕೇರಿಯಿಂದ ದೂರವಾಗಿ, ಕಾಣದ ಎಡೆಯಲ್ಲಿ ತರಗೆಲೆಗಳಿಂದ ಮುಚ್ಚಿದ ಕೊಪ್ಪವೊಂದರಲ್ಲಿ ಅವನು ಸೇರಿಕೊಂಡು,



ಹೊರಗೆ ತಲೆಹಾಕದೆ ಹಲವು ದಿನಗಳಾಗಿದ್ದುವು. ಅವನ ಬದುಕಿನ ಬೇಸರ ದಿನದಿನಕ್ಕೆ ಗಳಿಗೆಗಳಿಗೆಗೆ ಮಳೆಗಾಲದ ಮೋಡದಂತೆ ಬೆಳೆಯುತ್ತಿತ್ತು. ಕೊಪ್ಪದೊಳಗೆ ಕೂತು ದೃಷ್ಟಿಯಿಲ್ಲದ ಕಣ್ಣನ್ನು ಹೊರಹಾಯಿಸಿದಾಗ ಎದುರಿಗೆ ಎದ್ದು

ಕಾಣುತ್ತಿದ್ದ ಎತ್ತರವಾದ ಬೆಟ್ಟವೂ ಅವನ ಬೇಸರದೆದುರು ಕುಗ್ಗಿ ಸಣ್ಣದೊಂದು ಗುಡ್ಡವಾಗುತ್ತಿತ್ತು. ಮೈಯು ಉಸಿರಾಟವೇನೋ ತನ್ನಂಕೆಯಿಲ್ಲದೆ, ತನ್ನರಿವಿಲ್ಲದೆ ನಡೆಯುತ್ತಿತ್ತು. ಹಾಗೆಂದೇ ಅವನು ಸಾಯದೆ ಉಳಿದುಕೊಂಡಿದ್ದ. ಬದುಕಬೇಕೆಂಬ ಬಯಕೆ ಅವನ ಒಡಲಿಂದ ಕದಲಿಹೋಗಿ ಹಲವು ದಿನಗಳಾಗಿದ್ದುವು. ಬದುಕಿ ಮಾಡಬೇಕಾದುದಾದರೂ ಏನು? ಯಾರಿಗಾಗಿ ಬದುಕುವುದು?

ಯಾರಿಗಾಗಿ ಬದುಕುತ್ತ ಹಾಯಾಗಿದ್ದನೋ ಆ ಹೆಣ್ಣು ಹಿಂದಿರುಗದ ಹಾದಿಯನ್ನು ಹಿಡಿದು ತಿಂಗಳೇ ಆಗಿತ್ತು. ಅವಳು ಮತ್ತೆ ಬಂದಾಳೆಂದು ಅವಳ ದಾರಿಯನ್ನೇ ಕಾಯುತ್ತ ಕೊಪ್ಪದೊಳಗೇ ಹತ್ತಾರು ದಿನಗಳು ಕುಳಿತ್ತಿದ್ದ. ಇನ್ನು ಬಂದಾಳೋ ಬಾರಳೋ ಎಂದು ತಿಳಿಯದೆ ಕೆಲವು ದಿನಗಳು ಕಳೆದುವು. ಇನ್ನು ಬಾರಳೆಂದು ಗಟ್ಟಿಯಾದ ಮೇಲೆ ಬದುಕು ಬಟ್ಟ ಬಯಲಾದಂತೆ ತೋರಿತು. ಇನ್ನು ಯಾರಿಗಾಗಿ ಬದುಕುವುದು?

ಅವನ ಮನಸ್ಸನ್ನು ಸೂರೆಗೊಂಡು ಬಾಳಿನಲ್ಲೊಂದು ದಿಕ್ಕು ಕಾಣಿಸಿದ್ದ ಆ ಹೆಣ್ಣು ಕಣ್ಣೆದುರು ಮೈಯಿಂದ ಇರದಿದ್ದರೂ, ಅವನ ಕನಸಿನಲ್ಲಿ ಆಗಾಗ ಕಾಣಿಸಿಕೊಳ್ಳುವಳು. ಕಾಣಿಸಿಕೊಂಡಾಗ ಅವನಿಗೆ ಹೊಸ ಹುರುಪು; ಅಂದು, ಹಿಂದೆ, ಮುಂದೆಗಳನ್ನೆಲ್ಲ ಓರಣವಾಗಿ ಹೆಣೆದು ಸಿಂಬಿಯೊಂದನ್ನು ಮಾಡಿ ಅವನ ತಲೆಗೆ ಸುತ್ತುವಳು. ಎಚ್ಚರ ತಿಳಿದೆದ್ದ ಮೇಲೆ ಕೂಡ ಈ ಕನಸಿನ ಮುಟ್ಟಾಳೆ ಅವನ ತಲೆಯಿಂದ ಆಚೀಚೆ ಕದಲುತ್ತಿರಲಿಲ್ಲ!

ಅಮಾಯಕನಾದ ಕೊರಗ ಆಕೆಯ ಹೆಣವನ್ನು ತರಗೆಲೆಗಳಿಂದ ಮುಚ್ಚಿ, ನೆಟ್ಟಗಿರುವ ಬಿದಿರಿಗೆ ಬಿಗಿದು ಕರಿಯ ಕಂಬಳಿಯಿಂದ ಮರೆಮಾಡಿ, ತನ್ನ ಕೊಪ್ಪದ ಹತ್ತಿರವೇ ಹೊಂಡ ತೋಡಿ, ಹುಗಿದು, ದೂಪೆಮಾಡಿ, ಸೀಯಾಳ ವಿರಿಸಿ ಬಂದುದುಂಟು. ಯಾಕೆ ಹಾಗೆ ಮಾಡಿದನೋ ಅವನಿಗೇನು ತಿಳಿಯದು. ಗುರಿಕಾರ, ಎಂದೂ ಇಲ್ಲದೆ ಅಂದು ಅಲ್ಲಿಗೆ ಬಂದವನು, ಹಾಗೆ ಮಾಡೆಂದು ಹೇಳಿದ; ಇವನು ಮಾಡಿದ ಅಷ್ಟೆ. ಆದರೆ ಆ ಹೆಣ್ಣು ಸತ್ತಿತೆಂದಾಗಲೀ, ಇನ್ನು ಹಿಂದಿರುಗಿ ಬಾರಳೆಂದಾಗಲೀ ಅವನು ಬಗೆಯುಲಿಲ್ಲ.

ಇರುತ್ತಿದ್ದುದು ಅವರಿಬ್ಬರೇ. ಕೊಪ್ಪದ ಹತ್ತಿರವೂ ನೆರೆಯಿಲ್ಲ. ಬೇರೆಯವರ ನೆರವನ್ನು ಕುರಿಯುವ ಅವಸರ ಅವರಿಗೆಂದೂ ಬಂದಿರಲಿಲ್ಲ. ಬೇರೆಯವರೊಂದಿಗೆ ಬೆರೆಯಬೇಕೆಂಬ ಬಯಕೆಯೂ ಅವರಿಗಿರಲಿಲ್ಲ. ಕೊಪ್ಪದೊಳಗೆ ಇರುಳಲ್ಲಿ ಇರುತ್ತಿದ್ದುದು ಅವರಿಬ್ಬರೇ; ದಿನವೆಲ್ಲ ಅಡವಿಯಲ್ಲಿ ಜೊತೆಯಾಗಿ ಓಡಾಡುತ್ತಿದ್ದುದೂ ಅವರಿಬ್ಬರೇ. ಅವರ ಅಲೆದಾಟವೂ ಎತ್ತರವಾದ ಬೆಟ್ಟದ, ಆಳವಾದ ಕವುರಿಗಳ ನಡುವೆ; ಯಾವ ಮನುಷ್ಯನೂ ಸುಳಿಯದೆಡೆ. ಆಗಾಗ ಗುರಿಕಾರ ಕಾಣಿಸಿಕೊಳ್ಳುವನು; ಆದರೆ ಅವನೊಂದಿಗೂ ಮಾತುಕತೆಯೇನಿಲ್ಲ. ಮನುಷ್ಯರೊಂದಿಗೆ ಅವರು ಮಾತನಾಡಿ ವರ್ಷಗಳೇ ಆಗಿದ್ದುವೋ ಏನೋ! ಜನರ ನಡುವೆ ಇದ್ದು ಬೆಳೆದವರಿಗೆ ಸಹಜವಾಗಿ ಒದಗುವ ಅರಿವು ಅವರಿಗೆ ಬರುವುದು ಹೇಗೆ? ಸಾವನ್ನು, ನೋವನ್ನು ಅವರು ಅರಿತವರೇ ಅಲ್ಲ; ಹುಟ್ಟೆಂಬುದನ್ನೂ ಕಂಡರಿಯರು. ಇವನ್ನೆಲ್ಲ ಹೇಳುವ ಜನರನ್ನಾಗಲೀ ಎಂದೂ ಕಂಡವರಲ್ಲ. ಹೆಣ್ಣು ಸತ್ತದ್ದು ಗುರಿಕಾರನಿಗೆ ಹೇಗೋ ತಿಳಿದು, ಅವನು ಕೊರಗರ ದೇರೆಯ ಕೊಪ್ಪಕ್ಕೆ ಬಂದು, ಹೆಣವನ್ನು ಹುಗಿಯುವಂತೆ ಹೇಳಿಹೋದ.

ಕೊರಗರ ದೇರೆಯೂ ಅವನ ಹೆಣ್ಣೂ ಎಳವೆಯಿಂದಲೂ ಒಂದೇ ಕೊಪ್ಪದಲ್ಲಿ ಇದ್ದವರು. ಅವರಿಬ್ಬರು ಒಬ್ಬರನ್ನೊಬ್ಬರು ಗಂಡು ಹೆಣ್ಣುಗಳಂತೆ ಕಂಡುಕೊಂಡುದೂ ತೀರ ಎಳೆಯ ಪ್ರಾಯದಲ್ಲೇ. ಹಾಗೆ ಕಂಡುಕೊಂಡ ಮರುಗಳಿಗೆಯಲ್ಲೇ ಕೂಡಿಕೊಂಡರು. ಅವರಿಬ್ಬರು ಒಂದೇ ಓರಗೆಯವರು, ಒಂದೇ ರೂಪಿನವರು. ಒಡಹುಟ್ಟಿದವರೋ ಅದೂ ತಿಳಿಯದು! ಗುರಿಕಾರನೇನೋ ಒಮ್ಮೆ ಹಾಗಂದುದುಂಟು. ಇವರಿಬ್ಬರಲ್ಲಿ ನೆನಪೆಂಬುದು ಮೈದಳೆಯುವ ಮೊದಲೇ ಅವರ ಹುಟ್ಟಿಗೆ ಕಾರಣರಾದವರು ಕಣ್ಮರೆಯಾಗಿದ್ದರು. ತಮ್ಮದು ಯಾವ ಕುಲವೋ, ಯಾವ ಮೂಲವೋ, ಯಾವ ಬಳಿಯೋ ಅವರಿಗಂತೂ ತಿಳಿದಿರಲಿಲ್ಲ. ಅದನ್ನು ತಿಳಿಸಿಕೊಡುವಂಥ ನೆಂಟರೂ ಅವರ ಬಳಿ ಸುಳಿದಿರಲಿಲ್ಲ. ಅಂತೂ ಎಳವೆಯಿಂದ ಒಡನಾಡುತ್ತಿದ್ದವರೇನೋ ಹೌದು.

ಒಟ್ಟಿಗೆ ಅಲೆದಾಡುತ್ತ, ಆಟವಾಡುತ್ತ ಬೆಳೆದರು. ಮೈಯ, ಮನಸ್ಸಿನ ಆಸರು-ಬೇಸರಗಳನ್ನು ಒಟ್ಟಿಗೆ ತಣಿಸಿಕೊಂಡರು. ಬೆಳೆದು ನಿಂತ ಗಿಡಮರಗಳ ನಡುವೆ, ಓಡಾಡಿ ಹಾರಾಡುವ ಪಶುಪಕ್ಷಿಗಳ ನಡುವೆ, ಕಣ್ಣಿಗೆ ಕಾಣದ ದೈವ

ಭೂತಗಳ ನಡುವೆ ಅವರಿಬ್ಬರೇ ಹೆಣ್ಣುಗಂಡುಗಳು. ಅಣ್ಣತಂಗಿಯರಾಗಿದ್ದವರು ಕೂಡಿಕೊಂಡು ಗಂಡಹೆಂಡಿರಾದರೋ ತಿಳಿಯದು. ಅವರು ಕೂಡಿಕೊಂಡರೆಂದರೆ ಕೊರಗರ ದೇರೆಯೇನು ಬತ್ತದ ಮುಡಿಯ ಮೇಲೆ ಕೂರಲಿಲ್ಲ ; ಗುರಿಕಾರನೇನು ಬಂದು ಹೆಣ್ಣಿನ ತಲೆಯ ಮೇಲೆ ಮೂರ್ತದ ಅಕ್ಕಿಕಾಳನ್ನು ಸುರಿಯಲಿಲ್ಲ, ಅವರಿಬ್ಬರಿಗೆ ಮದುವೆಯ ಬಿಡುನೀರನ್ನು ಎರೆಯಲಿಲ್ಲ ; ಜನರಿಗೆ ನೊರೆನೊರೆಯ ಕಳ್ಳಿನ ಊಟವೇನು ದೊರೆಯಲಿಲ್ಲ. ಇದ್ದವರು ಅವರಿಬ್ಬರೇ ತಾನೆ ?

ಎಳವೆಯಿಂದಲೂ ಅವರಿದ್ದುದು ಕೇರಿಯಿಂದ ದೂರವಾಗಿ, ಬಿಡಿಯಾಗಿ ನಿಂತಿದ್ದ ಕೊಪ್ಪದಲ್ಲಿಯೇ. ಹೆಚ್ಚುಕಡಮೆ ಮೂಕಪ್ರಾಣಿಗಳಂತೆಯೇ ಬೆಳೆದರು. ಆವರೆಗೆ ಅವರು ಕಲಿತಿದ್ದ ಹತ್ತಾರು ಮಾತುಗಳನ್ನು ಬಿಟ್ಟರೆ ಅವರಿಬ್ಬರ ನಡುವೆ ಕಣ್ಣುಸನ್ನೆ, ಕೈಯಾಟ, ಮುಖಮುದ್ರೆಗಳಿಂದಲೇ ವ್ಯವಹಾರ. ಮೈಮನಸ್ಸುಗಳು ಹಿಡಿದು ಹೊರಳಾಡಿ ಹೊಂದಿಕೊಂಡೇ ಇರುವಾಗ ಭಾಷೆಯದೇನು ಹಂಗು ?

ಹೀಗಿರಲು, ಒಂದು ಸಂಜೆ ಕೊರಗರ ದೇರೆಯೂ ಅವನೊಡಗೂಡಿದ ಹೆಣ್ಣೂ ಗೊತ್ತುಗುರಿಯಿಲ್ಲದೆ ಅಲ್ಲಲ್ಲಿ ಅಲೆದಾಡುತ್ತ, ಬೆಟ್ಟಗುಡ್ಡಗಳನ್ನು ಏರಿ ಇಳಿಯುತ್ತ, ನದಿ ತೊರೆಗಳಲ್ಲಿ ಈಜಾಡುತ್ತ, ಹಣ್ಣುಹಂಪಲನ್ನು ಅರಸುತ್ತ, ಗೆಡ್ಡೆಗೆಣಸುಗಳನ್ನು ಆಯುತ್ತ, ದಣಿದ ಮೈಮನಸ್ಸುಗಳನ್ನು ತಣಿಸಿಕೊಳ್ಳುತ್ತ, ಚಂದವಾಗಿ ಕಾಣುತ್ತಿದ್ದ ಒಂದು ಬೆಟ್ಟದ ತಂಪಾದ ತಪ್ಪಲಲ್ಲಿ ಕಾಲಿಟ್ಟರು. ಹಿಂದೆಂದೂ ಅವರು ಅಂಥ ಕಡೆ ಬಂದಿರಲಿಲ್ಲ ; ಅಲ್ಲಿ ಒಂದೊಂದು ಮರವೂ ಮುಗಿಲುದ್ದಕ್ಕೆ ಬೆಳೆದು ನಿಂತಿತ್ತು ; ಒಂದೊಂದು ಮರವನ್ನೂ ಒಲವಿನ ಓರಣದಿಂದ ಒತ್ತಾಗಿ ಬಳಸಿಬಂದಿದ್ದ ಬಳ್ಳಿಗಳು ಬಗೆಬಗೆಯ ಹೂಗಳಿಂದ ತುಂಬಿಕೊಂಡು ಗಮಗಮಿಸುತ್ತಿದ್ದುವು ; 'ಬಂಗಾರ ಕುಲಕ್ಕೆ ಸಿಂಗಾರವಾದಂಥ ಭೂತ' ಎನ್ನುವಂತೆ. ಕೊರಗರ ದೇರೆಯ ಮತ್ತು ಅವನ ಹೆಣ್ಣಿನ ಮನಸ್ಸು ಅಲ್ಲಿಯವರೆಗೆ ಹಿರಿಹಿಗ್ಗಿ ಮಿಡಿಯುತ್ತಿದ್ದುದು ಇದ್ದಕ್ಕಿದ್ದಂತೆ ನಿಂತಿತು ; ಮೂಕವಾದ ದುಡಿಯಂತೆ. ಅವರ ಮೈಮೇಲೆ ಪರಿವೆಯೇ ಇಲ್ಲದಂತಾಯಿತು. ಆ ತಾಣದ

ಮರಗಿಡಗಳಂತೆ ಅವರೂ ಬೇರುಬಿಟ್ಟಂತಾಯಿತು ; ಕೊರಗರ ದೇರೆ ಮರವಾದರೆ, ಅವನ ಹೆಣ್ಣು ಅವನನ್ನು ಬಳಸಿ ನಿಂತ ಬಳ್ಳಿಯಾದಳು.

ಒಂದು ಗಳಿಗೆ ಹೀಗೆ ಅವರು ನಿಂತಾಗ, ಗಾಳಿ ಕೂಡ ಅಲ್ಲಿ ಸುಳಿದಾಡಲಿಲ್ಲ. ಮರಗಳ ಕೊಂಬೆಗಳು, ಗಿಡಗಳ ಎಲೆಗಳು, ಬಳ್ಳಿಗಳ ಹೂಗಳು, ಪಟದಲ್ಲಿ ಬರೆದಂತೆ ಕಂಡುವು. ಏನೊಂದು ಸದ್ದೂ ಇಲ್ಲ; ಯಾವೊಂದು ಜೀವಿಯೂ ಕಾಣಿಸದು. ಉಸಿರಾಡುತ್ತಿದ್ದವರು ಇವರಿಬ್ಬರೇ ; ಇವರ ಉಸಿರೂ ತಡೆದು ತಡೆದು ಆಡುತ್ತಿತ್ತು. ಎದುರಿಗೇ ಇದ್ದ ಬಂಡೆಯೊಂದು ಇದ್ದಕ್ಕಿದ್ದಂತೆ ಇವರ ಕಡೆ ಕೈಚಾಚಿ ಕರೆದಂತೆ ತೋರಿತು. ಆಗ ಇವರಿಗೆ ಇದೇನು ಸೋಜಿಗವೆನಿಸಲಿಲ್ಲ ; ಅವರ ಒಡಲಲ್ಲಿ ದಿಗಿಲೂ ಮೂಡಿಕೊಳ್ಳಲಿಲ್ಲ, ಅವರ ಮೆದುಳಿನಲ್ಲಿ ಕುತೂಹಲವೂ ಕೆರಳಲಿಲ್ಲ. ಬಂಡೆಯ ಕಡೆ ಅವರ ಕಾಲುಗಳು ಅವರನ್ನು ದೂಡಿದವು. ಹೀಗೆ ಬಂಡೆಯತ್ತ ಅವರು ನಡೆದು ಹೋಗುತ್ತಿರುವಾಗ ಅದು ಅವರಿಂದ ದೂರ ದೂರ ಸರಿಯುತ್ತಿತ್ತು ! ಇವರೂ ಹಿಡಿದ ಹಾದಿಯನ್ನು ಬಿಡದೆ, ಹಿಂದೆಗೆಯದೆ, ಮುಂದರಿದು, ಕಡೆಗೆ ಬಂಡೆಯ ಬಳಿ ಬಂದರು.

ಬಂದವರು ಹಿಂದೆಮುಂದೆ ನೋಡದೆ ಬಂಡೆಯ ಮೇಲೆ ಏರಿದರು ; ಒಬ್ಬರನ್ನೊಬ್ಬರು ಬಿಡದೆ ಅದರ ಮೇಲೆ ಕುಳಿತರು. ಅವರು ಕುಳಿತೊಡನೆ ಬಂಡೆ ಕದಲಿತು ; ಮೆಲ್ಲಗೆ ಸರಿಯತೊಡಗಿತು. ಆ ಗಳಿಗೆಯಲ್ಲಿ ಅವರಿಬ್ಬರ ಒಡಲಲ್ಲೂ ಅಂಜಿಕೆ ಅರಳಿಕೊಂಡಿತು. ಕೂಡಲೆ ಇಬ್ಬರೂ ಬಂಡೆಯಿಂದ ಕೆಳಗೆ ಹಾರಿ, ನಾಲ್ಕು ಹೆಜ್ಜೆ ಹಿಂದೆ ಸರಿದು ಬಂಡೆಯಿಂದ ಕಣ್ಣನ್ನು ತೆಗೆಯಲಾಗದೆ ಕದಲಿಸಲಾಗದೆ ಅದನ್ನೇ ದಿಟ್ಟಿಸಿ ನೋಡುತ್ತ ನಿಂತರು.

ನಿಂತು ನೋಡಿದಾಗ, ಅವರನ್ನು ಕೈಬೀಸಿ ಕರೆದ, ಅವರು ಏರಿಕೊಂಡ ಬಂಡೆ ದಿಟವಾಗಿ ದೊಡ್ಡದೊಂದು ಹಂದಿ ! ಸಣ್ಣ ಕುದುರೆಗೆ ದೊಡ್ಡ ಹೊಟ್ಟೆಯಿರುವಂತೆ ಕಾಣುತ್ತಿದ್ದ ಆ ಆನೆಮೈ ಕಾಡುಹಂದಿ ದಡಕ್ಕನೆ ಎದ್ದು ನಿಂತಿತು. ಅದರ ಕರಿಯ ಮೈ, ಮೈಗಿಂತಲೂ ಕಾಳಕಪ್ಪಿನ ಮೋರೆ, ಮೋರೆಯಲ್ಲಿ ಬೆಳ್ಳಗೆ ಹೊಳೆಯುತ್ತಿದ್ದ ಕೋರೆದಾಡೆ, ಕೋರೆದಾಡೆಗಳ ತುದಿಗಳಲ್ಲಿ ಮಿರುಗುತ್ತಿದ್ದ ಸಣ್ಣ ಕಣ್ಣುಗಳು, ಕಣ್ಣುಗಳಿಂದ ಹೊರಸಿಡಿಯುತ್ತಿದ್ದ ಬೆಂಕಿಯ

ಕಿಡಿಗಳು ! ಹಂದಿ ಇವರ ಕಡೆಗೆ ಮೋರೆಯನ್ನು ತಿರುಗಿಸಿ ಗುರುಗುರುಗುಟ್ಟಿತು ; ಸದ್ದಿಲ್ಲದ ಆ ಕಾಡಿನ ನಡುವೆ ಈ ಮೊರೆತ, ಬೇಸಗೆಯ ಸಿಡಿಲಂತೆ, ಮುಗಿಲು ಮುಟ್ಟಿತು, ಕಾಡಿನಲ್ಲಿ ಎಲ್ಲೆಲ್ಲೂ ಹರಡಿಕೊಂಡಿತು. ಹಂದಿ ಮತ್ತೆ ಮೋರೆಯನ್ನು ಅತ್ತ ತಿರುಗಿಸಿ ದೂರ ಸರಿಯತೊಡಗಿತು. ಅದರಡಿಯಿಂದ ಎರಡು ಹಂದಿಯ ಮರಿಗಳು ಹೊರಕ್ಕೆ ಹಾರಿದುವು.



ಇದ್ದಕ್ಕಿದ್ದಂತೆ ಕೊರಗರ ದೇರೆಯ ಹೆಣ್ಣಿಗೆ ಆ ಹಂದಿಯ ಮರಿಗಳ ಮೇಲೆ ಎಂದೂ ಇಲ್ಲದ ಆಸೆ ಊರಿತು ; ಅವುಗಳ ಮೇಲೆ ಒಡಲಿಂದ ಒಲವು ಚಿಮ್ಮಿ ಹರಿಯಿತು. ಅವನ್ನು ಹಿಡಿದು ತರಲು ಅವಳ ಕಾಲುಗಳು ಮುಂದರಿದುವು. ಕೊರಗರ ದೇರೆ ಬೇಡೆಂದು ತಡೆಯುವುದನ್ನೂ ಕಡೆಗಾಣಿಸಿ, ಕೈ ಚಾಚಿ, ಹಂದಿಯ ಮರಿಗಳ ಕಡೆ ಅಡಿಯಿಟ್ಟಳು. ಅತ್ತ ಮೋರೆ ತಿರುಗಿಸಿದ್ದ ಹಂದಿ ಮತ್ತೆ ಅವಳ ಕಡೆ ಮೋರೆಯನ್ನು ತೋರಿಸಿತು. ಅದರ ಕೆರಳಿದ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಸಿಡಿಯುತ್ತಿದ್ದುವು. ಆ ಗಳಿಗೆಯಲ್ಲಿ ಮುಗಿಲೊಳಗಿಂದ ಎದೆ ನಡುಗಿಸುವಂಥ ದೊಡ್ಡ ಸಿಡಿಲು ಕೇಳಿತು. ಗರಬಡಿದು ಹೆಣ್ಣು ಅರಿವು ತಪ್ಪಿ ಕೆಳಗುರುಳಿದಳು.

ಕೊರಗರ ದೇರೆ ಅಚ್ಚರಿಗೊಂಡು, ಮೈಮರೆತು ನೋಡುತ್ತ ನಿಂತಿದ್ದಂತೆ ಆನೆಯು ಮೈಯು ಹಂದಿ ಎಲ್ಲಿಯೋ ಮರೆಯಾಯಿತು ; ಹಂದಿಯ ಮರಿಗಳೂ ಹಾಗೆಯೇ ಮಾಯವಾದುವು. ಹೆಣ್ಣು ಮಾತ್ರ ನೆಲದ ಮೇಲೆ ಅರಿವಿಲ್ಲದೆ ಬಿದ್ದುಕೊಂಡಿದ್ದಳು ; ಮುಖ ಕಾಣಿಸುವ ಕನ್ನಡಿ ಕೈತಪ್ಪಿ ನೆಲದ ಮೇಲೆ ಬಿದ್ದಂತೆ. ಉಸಿರಾಡದೆ ಮರವಾಗಿದ್ದ ಅವಳ ಮೈಯನ್ನು ಕೊರಗರ ದೇರೆ ತನ್ನ ಹೆಗಲ ಮೇಲೆ ಹೊತ್ತು, ಅಲ್ಲಿಂದ ಬಡಬಡನೆ ನಡೆದು, ತನ್ನ ಕೊಪ್ಪಕ್ಕೆ ತಂದ. ಕೊಪ್ಪದ ಎದುರು ಅದನ್ನು ಇರಿಸಿದಾಗಲೇ ದೂರದಿಂದ ಗುರಿಕಾರ ನೋಡಿ, ಹತ್ತಿರ ಬಂದು, ಹೆಣ್ಣಿನ ಮೈಯನ್ನು ಮುಟ್ಟಿ, ಅವಳನ್ನು ಒಪ್ಪ ಮಾಡುವಂತೆ ತಿಳಿಸಿ ಹೋದದ್ದು.

ಹೋಗುವಾಗ, "ಅದು ದೈವದ ತಾಣವೆಂಬುದನ್ನು ಅರಿಯೆಯಾ, ದೇರೆ ? ಅಲ್ಲಿಗೆ ಕಾಲಿಡಬಾರದು ; ದೈವ ಮುನಿಯುವುದು" ಎಂದು ಎಚ್ಚರಿಸಿದ.

(2)

ಕೊರಗರ ದೇರೆ ಒಂಟಿಯಾದುದು ಹೀಗೆ. ಹೊಲಿಯುವ ಸೂಜಿಯ ಕಣ್ಣು ಸಿಡಿದು ಹೋಯಿತು ; ಕಣ್ಣಿಲ್ಲದ ಸೂಜಿಯು ಮೊನೆಯಷ್ಟೇ ಉಳಿಯಿತು ! ಮೊದಮೊದಲು, ಹೆಣ್ಣಿಲ್ಲದೆ ಒಂಟಿಯಾದ ಬೇಸರ, ಬಂದಾಳೆಂಬ ಭರವಸೆಯಲ್ಲಿ ಕರಗುತ್ತಿತ್ತು. ಆದರೆ ಬರುಬರುತ್ತ ಅವನ ಒಂಟಿತನದ ಅರಿವು ಅವನಲ್ಲಿ ಆಳಗೊಳ್ಳುತ್ತಬಂತು. ಮೊದಲು ಕೈಹಿಡಿದು ನಗುನಗುತ್ತ ಚೆಲ್ಲಾಟವಾಡುತ್ತಿದ್ದ ಹೆಣ್ಣು ಈಗ ಆಗೊಮ್ಮೆ ಈಗೊಮ್ಮೆ ಕನಸಿನಲ್ಲಿ ಕಾಣಿಸಿಕೊಳ್ಳುವಳು ; ಎಚ್ಚರವಿದ್ದಾಗಲಂತೂ ಅವನ ಮನಸ್ಸಿನಿಂದ ಅರೆಗಳಿಗೆಯೂ ಅವಳ ನೆನಪು ಮರೆಯಾದುದಿಲ್ಲ. ಆದರೂ ಮೈಗೆ ಮೈ ತಾಗಿಸುತ್ತ, ತನ್ನಿಂದ ಹೊರಗಾದರೂ ತನಗೆ ಹತ್ತಿರವಾಗಿಯೇ ಇದ್ದವಳು, ಈಗ ಹತ್ತಿರ ಇಲ್ಲವೆಂಬ ದುಗುಡ ಅವನ ಒಂಟಿ ಒಡಲನ್ನು ಮತ್ತೆಮತ್ತೆ ಕದಡುತ್ತಿತ್ತು. ತನ್ನ ಮನದನ್ನೆಯನ್ನು ಹುಡುಕುತ್ತ, ಅವನು ಹಗಲಿರುಳೂ ತನ್ನ ಮೈಯ ಪರಿವೆಯೂ ಇರದೆ ಕಾಡೊಳಗೆ ಅಲೆದಾಡುತ್ತಿದ್ದ.

ಅವನ ಎಡೆಬಿಡದ ಅಲೆದಾಟದಲ್ಲಿ ಒಂದೆಡೆ ಮಾತ್ರ, ಮನಸ್ಸು ಅವನ ನಡೆಯನ್ನು ಮೀಟುವುದು, ಕಾಲು ಮಾತ್ರ ಹಿಂದೆಗೆಯುವುದು. ಅದು ಗುರಿ

ಕಾರ ತನ್ನನ್ನು ಎಚ್ಚರಿಸಿ ಹೇಳಿದ ದೈವದ ತಾಣ. ಇದ್ದಕ್ಕಿದ್ದಂತೆ, ಗರಬಡಿದು ತನ್ನ ಹೆಣ್ಣು ಅರಿವು ತಪ್ಪಿ ಕೆಳಗುರುಳಿದುದು ಅಲ್ಲಿಯೇ ! ಚೆಂದವಾದ ತನ್ನ

ಕಣ್ಣರಳಿಸಿ ನೋಡುವ ಅವಳ ಮೋರೆಯನ್ನು ಕೊರಗರ ದೇರೆ ಕಡೆಯ ಸಲ ಕಂಡದ್ದು ಅಲ್ಲಿಯೇ. ಹಿಂದೆ ಎಂದೆಂದೂ ಎಲ್ಲಿಯೂ ಕಾಣದ ಆನೆಯಂಥ ದೊಡ್ಡ ಹಂದಿ ಕಾಣಿಸಿಕೊಂಡುದು ಅಲ್ಲಿಯೇ. ಹಂದಿ ಮರಿಗಳು ಹುಟ್ಟಿ ಹರಿದಾಡಿದ್ದು ಅಲ್ಲಿಯೇ. ಆಗಲೇ ಅಂಜಿಕೆಯ ಮುಂಜಿನಲ್ಲೂ ಅಪುರೂಪದ ಆ ಹಂದಿಯನ್ನು ಮತ್ತೊಮ್ಮೆ ಕಾಣಬೇಕೆಂಬ ಬಯಕೆ ಅವನಿಗೆ ಆಗಲೇ ಇದ್ದಿತು. ಈ ಬಯಕೆ ಬರುಬರುತ್ತ ಬೇರೂರಿಕೊಂಡಿತು. ದೈವದ ತಾಣದಲ್ಲಿ ಹಂದಿಗೇನು ಕೆಲಸವೋ ?

ಹಂದಿಯನ್ನು ಕಂಡಾಗ ತನ್ನ ಹೆಣ್ಣು ಕೆಳಗೆ ಉರುಳಿಬಿದ್ದ ನೆಲದ ಮೇಲೆ ತಾನು ಮತ್ತೆ ಕಾಲಿಟ್ಟು ಬರಬೇಕೆಂದು ಅವನು ಹಂಬಲಿಸುತ್ತಿದ್ದ. ಆದರೆ, ಗುರಿಕಾರ ಅಲ್ಲಿಗೆ ಕಾಲಿಡಬಾರದೆಂದು ಹೇಳಿದನಲ್ಲ ? ಕೇರಿಯ ದೊರೆಯಂತೆ ಗುರಿಕಾರ ; ಅವನ ಮಾತನ್ನು ಮೀರಲುಂಟೆ ? ದೈವದ ತಾಣವಾದುದರಿಂದ ಮನುಷ್ಯರು ಅಲ್ಲಿಗೆ ಹೋಗಬಾರದೆಂದು ಅವನ ಮಾತಿನ ಅರ್ಥವೇ ? ದೈವದ ತಾಣವೆಂದರೇನು ? ಆ ಹಿರಿ ಹಂದಿಯೇ ದೈವವೋ ? ದೈವವೇನು ಕಾಪಿಡುವುದೋ ಕಾಡುವುದೋ ? ಬಾಳಿಸುವುದೋ ಮಡಹುವುದೋ ? ದೈವವೆಂದರೇನು ಮೈವೆತ್ತಿ ಬರುವುದೋ, ಮಾಯದಿಂದ ಸುಳಿವುದೋ ? ತಾವು ಬಂಡೆಯೆಂದು ಬಗೆದದ್ದು ಹಂದಿಯಾಗಿ ತೋರಿಕೊಂಡಿತು, ಎದ್ದು ಅಡ್ಡಾಡಿದೊಡನೆ ಕಾಣದಾಯಿತು ! ಅದು ಕಣ್ಣುಗಳಿಂದ ಕೆಂಡ ಕಾರಿದ್ದು ದಿಟ, ಆಗಲೇ ಮುಗಿಲಿಂದ ಮಿಂಚು ಬಡಿದದ್ದೂ ದಿಟ, ತನ್ನ ಹೆಣ್ಣು ನೆಲದ ಮೇಲೆ ಬಿದ್ದುಕೊಂಡದ್ದೂ ದಿಟ. ಇವೆಲ್ಲ ಒಂದಕ್ಕೊಂದು ಹೆಣೆದುಕೊಂಡ ಕೊಂಡಿಯೋ, ಇಲ್ಲವೇ ಬೇರೆ ಬೇರೆ ಎಳೆಗಳೋ ?

ತನ್ನ ಹೆಣ್ಣು ಈಗ ಕಾಣದಾದ್ದಕ್ಕೆ ಆಗ ತಾವು ಕಂಡುಕೊಂಡ ಹಂದಿಯೇ ಕಾರಣವಿದ್ದೀತೆ ? ಹಾಗೆ ಇರುವುದಾದರೆ ತನ್ನ ಕೈಯಿಂದ ಹೆಣ್ಣನ್ನು ಕಿತ್ತುಕೊಂಡ ಹಂದಿಯೇ ತನ್ನ ಬವಣೆಗೆ ಮರುಗಿ, ಮರಳಿ ತನ್ನ ಹೆಣ್ಣನ್ನು ತನಗೆ ಕೊಡುವುದು ಆಗಲಾರದೇ ? ಕಣ್ಣಲ್ಲಿ ಕೆಂಡವಿದ್ದ ಮಾತ್ರಕ್ಕೆ ಒಡಲಲ್ಲಿ ಕರುಣೆಯಿರಲಾರದೇ ? ಇದು ಕೊರಗರ ದೇರೆಯ ಮನಸ್ಸನ್ನು ಕೊರೆಯುತ್ತಿದ್ದ ಕೀಟ.

ಒಂಟಿಜೀವದ ಮೆದುಳು ಸುಮ್ಮನಿರಲಾರದು. ಜನರ ನಡುವೆ ಇದ್ದವರಾದರೆ ಅವರಿವರ ಮಾತುಕತೆಯು, ನಡೆನೋಟದ ಮೋಡಿಗೆ ಮರುಳಾಗಿ, ಮತ್ತುಬಂದಂತೆ ಸುಮ್ಮನಿರುತ್ತಾರೆ. ಹೆರವರ ಅನಿಸಿಕೆಗಳನ್ನೆಲ್ಲ

ತಮ್ಮದಾಗಿಸಿಕೊಂಡು, ಅವರಿವರು ನಡೆದು ನೇರಮಾಡಿದ ಹಾದಿಯಲ್ಲೇ ತಾವೂ ಅಡಿಯಿರಿಸಿ ಸಾಗುವುದಾದರೆ ಮನಸ್ಸಿಗೇನು ದಣಿವು ? ಹಾಗೆ ದಣಿವಾಗಬಾರದೆಂದು ತಾನೆ ಜೀವ ಹಾತೊರೆಯುವುದು ? ಹಿಂದಿನಿಂದ ಬಂದ ಪದ್ಧತಿಗಿರುವ ಬಲ ಇದೇ ! ಆಚಾರವೆಂದರೆ ವಿಚಾರಮಾಡುವ ಅಗತ್ಯವನ್ನು ಬದಿಗೆ ಸರಿಸುವ ಒಂದು ಉಪಾಯ. ತಾಯ ಮಡಿಲಿಂದ ಕೆಳಗುರುಳಿ, ಅಳತೊಡಗಿ, ಕಣ್ಣುತೆರೆದು, ಅತ್ತಿತ್ತ ಹರಿದಾಡುವ ಎಳವೆಯಿಂದ ಹಿಡಿದು ಮೈಬಗ್ಗಿ, ಮುಪ್ಪಡರಿ, ಕೊರಗಿ, ಸೊರಗಿ ಸಾಯುವವರೆಗೂ ಆಚಾರಗಳ ಹಂದರದಲ್ಲೇ ತಾನೆ ಮನುಷ್ಯನ ಬದುಕು ? ಅನುಕರಣೆ, ಅನುಸರಣೆಗಳೇ ತಾನೆ ಅವನ ನೆಮ್ಮದಿಯ ಬುತ್ತಿ ?

ಕೊರಗರ ದೇರೆಗೆ ಈ ಬುತ್ತಿಯ ಬಲವೆಲ್ಲಿ ಬಂತು ? ಮೊದಲಿಂದ ಅವನಿಗೆ ಹೆರವರ ನಡೆನುಡಿಯ ಅರಿವಿರದು. ಆಚಾರವನ್ನು ಅವನಲ್ಲಿ ಉತ್ತು ಬಿತ್ತಿ, ಬೆಳೆಯುವವರು ಯಾರೂ ಇರಲಿಲ್ಲ. ಬೇರೆಯವರನ್ನು ವಿಚಾರದ ಬಿಸಿಲ ಬೇಗೆಯಿಂದ ಕಾಪಿಡುವ ಹನೆಗರಿಯ ಕೊಡೆ ಕೊರಗರ ದೇರೆಯ ಕೈಯಲ್ಲಿರಲಿಲ್ಲ. ಹೀಗಾಗಿ ಅವನ ಮೆದುಳೊಳಗೆ ದುಡಿಯೊಂದು ಅಡಗಿಕೊಂಡು ಎಡೆಬಿಡದೆ ನುಡಿಯುತ್ತಿತ್ತು ; ಅವನ ಎದೆಯೊಳಗೆ ನೂರಾರು ಹಾವುಗಳು ಹರಿದಾಡುವ ಹುತ್ತವೊಂದು ಬೆಳೆದಿತ್ತು. ಹೊರಗೊಂದು ಕಾಡಾದರೆ ಒಳಗಿನ್ನೊಂದು ಕಾಡು ! ಗುರಿಕಾರ ಎಚ್ಚರಿಸಿದ ದೈವದ ತಾಣ ಹೊರಗೋ ಒಳಗೋ ?

ಕೊರಗರ ದೇರೆಯ ಒಡಲೊಳಗೆ ಹೀಗೆ ಮೊದಲಿದ್ದುದಿಲ್ಲ. ತನ್ನೊಂದಿಗೆ ಒಡನಾಡುತ್ತಿದ್ದ ಹೆಣ್ಣು ಮೈನೆತ್ತು ಹೊರಗಿದ್ದಾಗ ಅವಳ ಮಾತಿನ ಮೋಡಿಯೋ, ಅವಳ ನಗೆಯ ಬಲೆಯೋ, ಅವಳ ಚೆಲುವಿನ ಕೈಕೋಳವೋ ಏನೋ ಅಂತೂ ಅವನ ಒಡಲಲ್ಲಿ ಇದ್ದಿರಬಹುದಾದ ಹಾವುಗಳು, ಹುಳುಗಳು ತೆಪ್ಪಗಿರುತ್ತಿದ್ದುವು. ಈಗಿನಂತೆ ಕಾಲಿಗೆ ಗಗ್ಗರಗೆಜ್ಜೆ ಕಟ್ಟಿಕೊಂಡು ಕುಣಿದಾಡುವ ತುಂಟ ಕುದುರೆಯಾಗಿರಲಿಲ್ಲ ಅವನ ಮನಸ್ಸು. ಮೈಗೆ ಮೈ ತಾಕಿದಾಗ, ಮಾತಿಗೆ ಮಾತು ಮಲೆತಾಗ, ನೋಟಕ್ಕೆ ನೋಟ ನಾಟಿಕೊಂಡಾಗ, ಮೈಯೊಳಗಿನ ನೆತ್ತರು ಕಾವೇರಿ ಅದೊಂದು ಮರುಳು ಗುಂಗಿನಲ್ಲಿ ಇರುತ್ತಿದ್ದ.

ಈಗ ಅವಳು ಮೈಕಳೆದುಕೊಂಡು, ತನ್ನೊಳಗೇ ನೆನಪಿನ ನೆರಳಾಗಿ ಸೇರಿಕೊಂಡಮೇಲೆ, ಕೊರಗರ ದೇರೆ ಒಂಟಿಯಾಗಿ ಉಳಿಯಬೇಕಾಯಿತು. ತನ್ನ ಆತುರದ ಮಾತಿಗೆ ಇನ್ನು ಇನಿತಾದ ಮಾರ್ದನಿ ಕೇಳಿಸದು; ಕಾತರದ ತನ್ನ ನೋಟಕ್ಕೆ ಅವಳ ನಲುಮೆಯ ನೋಟ ಎದುರಾಗದು! ಎಲ್ಲೆಲ್ಲಿಯೂ ಇವರಿಬ್ಬರನ್ನು ಆದರದಿಂದ ಕೈಚಾಚಿ ಕರೆಯುತ್ತಿದ್ದ ಕಾಡು ಈಗ ಒಂಟಿಯಾದ ದೇರೆಯನ್ನು ಕಂಡು ಬೇಸರದಿಂದ ತನ್ನ ಕೈಮುದುರಿಕೊಂಡು ಕೂತಂತೆ ತೋರಿತು. ಅವನ ಮೈಯೊಳಗಿನ ನೆತ್ತರು ಕಾವಾರಿ, ಮುಖ ಕಪ್ಪಿಟ್ಟಿತು. ಉಸಿರಾಡುತ್ತಲೇ ಇರುವಾಗ ಒಡಲು ಬಡವಾದರೆ ಮೆದುಳು ಮುಪ್ಪರಿಗೊಳ್ಳದಿರದು. ಆಗಲೇ ಒಳಗೆ ಅಡಗಿದ್ದ ಹಾವುಗಳು, ಹುಳುಗಳು ಗರಿಕೆದರಿ ಹೊರಗೆ ಹರಿದಾಡತೊಡಗುವುವು.

ಆದರೆ ಮೆದುಳೇನು ಒಡಲೇನು ತೀರ ಬೇರೆ ಬೇರೆ ಬಣಗಳೇ? ಒಂದೇ ಮೈಯೊಳಗಷ್ಟೆ ಎರಡೂ ಇರುವುದು? ಒಂದೇ ಜೀವದ ಎರಡು ಝುರಿಗಳು ತಾನೆ? ಒಂದಕ್ಕೆ ಇನ್ನೊಂದರ ನೆಂಟೂ ಉಂಟು, ನೆರವೂ ಉಂಟು. ಒಂದು ಸೊರಗಿದರೆ ಇನ್ನೊಂದು ನಿಮಿರಿಕೊಳ್ಳುವುದು; ಒಂದರ ಕೊರೆಯನ್ನು ಇನ್ನೊಂದು ಪೂರಯಿಸುವುದು. ಒಡಲೊಳಗೆ ತೋರಿಕೊಳ್ಳುವ ಬೇಗೆ ತಟ್ಟನೆ ಮುಟ್ಟುವುದು ಮೆದುಳನ್ನೇ. ಮೆದುಳೊಳಗೆ ತುಯ್ದಾಟವಿದ್ದರೆ ಅದು ತೋರಿಕೊಳ್ಳುವುದು ಒಡಲಲ್ಲೇ. ಒಡಲಲ್ಲೊಂದು ಮೆದುಳು; ಮೆದುಳಲ್ಲೊಂದು ಒಡಲು!

ಒಂಟಿತನದ ಬೇಸರ ಕೊರಗರ ದೇರೆಯ ಒಡಲಲ್ಲಿ ಬೇರೂರಿ, ಬೆಳೆದು, ಒಡಲು ಒಡೆದೀತೆಂಬ ದಿಗಿಲು ಮೇಲೆದ್ದುಕೊಂಡಾಗ ಅವನ ಮೆದುಳು ಇನ್ನು ಸುಮ್ಮನಿರಬಾರದೆಂದು ಮುಂದಾಯಿತು. ಗುರಿಕಾರನ ಮಾತನ್ನು ಮೀರಬಾರದೆಂದು ಒಡಲಿನ ಅಳುಕು; ಆದರೆ ಅವನು ಹೇಳಿದ ದೈವದ ತಾಣವೆಂದರೆ ಏನೆಂದು ಅರಿಯಬೇಕೆಂಬ ಬಯಕೆ ಮೆದುಳನ್ನು ಮಿಡಿಯುವುದು. ಮೆದುಳೊಳಗೆ ಒಡಲಿನ ಕರೆಯೊಂದು, 'ನಿನ್ನ ಹೆಣ್ಣನ್ನು ಕಳೆದುಕೊಂಡ ತಾಣ ಅದೆ'ಂದು ದನಿಗೂಡಿಸಿತು. ಒಡಲೊಳಗೆ ಮೆದುಳು 'ಗುರಿಕಾರನ ಮಾತನ್ನು ಮೀರಿದರೂ ಚಿಂತೆಯಿಲ್ಲ'ವೆಂದು ಬೆನ್ನು ತಟ್ಟಿತು.

ಅವನ ಅರಿವಿಲ್ಲದೆ ಅಂಕೆಯಿಲ್ಲದೆ ಅವನ ಕಾಲುಗಳು ಅವನ ಮೈಯನ್ನು ದೈವದ ತಾಣವೆಂದು ಗುರಿಕಾರ ಕಾಣಿಸಿದೆಡೆ ಒಯ್ದುವು; ಮನಸ್ಸಂತೂ ಆಗಲೇ ಅಲ್ಲಿಗೆ ಓಡಿದ್ದಿತು. ಒಡಲೂ, ಮಿದುಳೂ ಅಡ್ಡಿ ಮಾಡಲಿಲ್ಲ. ಆದರೆ ತಾಣದ ಹತ್ತಿರ ಹತ್ತಿರ ಬರುತ್ತ ಅವನ ಕಾಲುಗಳು ಹಿಂದೆಗೆಯತೊಡಗಿದುವು. ಗುರಿಕಾರನ ಮಾತು ಮೊದಲು ಮಿದುಳನ್ನು ಮೆಟ್ಟಿ ನಿಂತಿತ್ತು; ಒಡಲ ಅಳಲು ಈಗ ಅದನ್ನು ಹಿಂದೆ ಸರಿಸಿತ್ತು. ಆದರೆ ಅದು ಮೈಯೊಳಗೆ ಇಳಿದು ಕಾಲುಗಳನ್ನು ಕಟ್ಟುವುದೆಂದು ಮಿದುಳಾಗಲೀ ಒಡಲಾಗಲೀ ಅರಿತಿರಲಿಲ್ಲ. ಈಗ ಕಾಲುಗಳ ಹಿನ್ನಡೆ, ಮಿದುಳಿನ ಮುನ್ನೋಟ ಇವೆರಡರ ನಡುವೆ ಒಡಲ ಪರದಾಟ!

ಇದ್ದಕ್ಕಿದ್ದಂತೆ, ಸುತ್ತಲೂ ಕವಿದ ಕಾರ್ಮೋಡದಿಂದ ಬೆಳ್ಳಿಕೋಲ ಮಿಂಚು ಹೊಳೆಯುವಂತೆ, ತಾಣದಲ್ಲಿ ಹೆಣ್ಣನ್ನು ಕಾಣಬಹುದೆಂಬ ಹಂಬಲ ಅವನ ಜೀವವನ್ನೆಲ್ಲ ಒಮ್ಮೆಲೆ ಕ್ಷಣಕಾಲ ಬೆಳಗಿತು. ಒಡಲು ಮಿದುಳುಗಳ ತುಯ್ದಾಟ ನಿಂತಿತು; ಒಳಗಿನ ಪರದಾಟ ಮರೆಯಾಯಿತು; ಗುರಿಕಾರನ ಮಾತು ದೂರ ಸರಿದು ಅಡಗಿತು; ಒಳಗು-ಹೊರಗು ಎನ್ನುವ ಅಂತರ ಹರಿಯಿತು. ಕೊರಗರ ದೇರೆ ಸೆಟೆದುಕೊಂಡು ನಿಂತ; ಯಾವ ಮರವೂ ಅವನ ಎತ್ತರವನ್ನು ಮುಟ್ಟುವಂತಿರಲಿಲ್ಲ; ಯಾವ ಬೆಟ್ಟವೂ ಅವನಷ್ಟು ಗಟ್ಟಿಯಾಗಿ ತೋರಲಿಲ್ಲ. ಅವನ ಕಣ್ಣೆದುರು ಇದ್ದ ಎಲ್ಲವೂ ಮಂಜಿನಂತೆ ಕರಗಿಹೋಯಿತು. ಇದ್ದುದೆಲ್ಲ ಅವನೊಬ್ಬನೇ! ಅವನ ಬಾಳಿನ ಬಯಕೆ ದೈವದ ತಾಣವಷ್ಟೇ! ಅವನಿಗೂ ದೈವದ ತಾಣಕ್ಕೂ ನಡುವೆ ಯಾವ ಅಡ್ಡಿಯೂ ಉಳಿದುಕೊಳ್ಳಲಿಲ್ಲ. ಇಷ್ಟಾದಮೇಲೆ ಅಂಜಿಕೆ ಏನು? ಕಾಲುಗಳು ಸರಸರನೆ ಅವನ ಮೈಯನ್ನೆತ್ತಿ ದೈವದ ತಾಣವೆನಿಸಿದ ಕಡೆ ಒಯ್ದುವು.

(3)

ಗುಡ್ಡವೇರಿ, ಇನ್ನೇನು ತಾಣವನ್ನು ಮುಟ್ಟಬೇಕೆನ್ನುವಷ್ಟರಲ್ಲಿ, ಕೊರಗರ ದೇರೆಯ ಕಣ್ಣುಗಳಿಗೆ ಅಡ್ಡಕಟ್ಟುವಂತೆ ಅತ್ತ ಕಡೆಯಿಂದ ಬಂಟವೀರ

ನೊಬ್ಬ ಕುದುರೆಯೇರಿ ಬರುತ್ತಿರುವುದು ಕಂಡಿತು. ಹೆಣ್ಣನ್ನು ಕಾಣುವ ಹಂಬಲದಿಂದ ಮತ್ತೇನನ್ನೂ ಕಾಣದೆ ಮರಗಟ್ಟಿದ್ದ ಅವನ ಕಣ್ಣುಗಳು ಪಟ ಪಟನೆ ಮಿಡಿದುಕೊಂಡುವು. ಕಣ್ಣೆದುರು ಕಾಣುವುದೆಲ್ಲ ಈ ಕುದುರೆಯೇರಿದ ವೀರಬಂಟನೇ ! ದೈವದ ತಾಣವನ್ನೂ ಹಿಂದಕ್ಕೆ ಸರಿಸಿ, ಅದರ ಮುಂದೆ ತಾನೇ



ದೊಡ್ಡದಾಗಿ ತೋರಿಕೊಂಡ ಕುದುರೆ, ಆ ಕುದುರೆಯನ್ನೇರಿ ಮೆರೆಯುತ್ತಿರುವ ವೀರ ! ಕೊರಗರ ದೇರೆಯ ಕಾಲುಗಳು ಮುಂದರಿಯದಾದುವು ; ಅಂಗಾಲು

ನೆಲದಲ್ಲೇ ಮರನಾಗಿ ಊರಿಕೊಂಡಿತು. ಒಡಲೊಳಗೆ ನಾಡಿ ಮಿಡಿಯುವುದೂ ಅಡಗಿದಂತೆ ಆಯಿತು. ಎಲ್ಲಿಂದಲೋ ಕಾಳಕತ್ತಲೆ ಸುತ್ತರಿದು ಬಂದು ಮೈಯೊಳಗೆ ತುಂಬಿಕೊಂಡಿತು.

ತಾನು ಇರುತ್ತಿದ್ದ ಕಡೆ ಮನುಷ್ಯರ ಸಂಚಾರವನ್ನೇ ಅರಿಯದಿದ್ದ ಕೊರಗರ ದೇರೆಗೆ ಇದು ಸೋಜಿಗವೆನಿಸಿತು. ಗುರಿಕಾರನೇನೋ ಒಮ್ಮೆ ಮಾತ್ರ ತನ್ನ ಕೊಪ್ಪದವರೆಗೆ ಬಂದಿದ್ದ—ದೈವದ ತಾಣವೆಂದು ಎಚ್ಚರಿಸಲು. ಮತ್ತೆ ಅವನೂ ದೇರೆಯೆದುರು ತೋರಿಕೊಳ್ಳಲಿಲ್ಲ. ಆದರೆ ಅವನಾಡಿದ ಅಡ್ಡಿಮಾತು ದೇರೆಯ ಒಡಲೊಳಗೆ ಬೀಡು ಬಿಟ್ಟಿದ್ದಿತು. ಈಗ ಕುದುರೆಯೇರಿ ಬರುತ್ತಿರುವವನು ಗುರಿಕಾರನೇ ಇರಬಹುದೋ ಎಂದು ಅವನಿಗೆ ಒಮ್ಮೆ ಅನಿಸಿತು. ದೈವದ ತಾಣಕ್ಕೆ ಕಾಲಿಡಬಾರದೆಂಬುದನ್ನು ಮತ್ತೆ ಎಚ್ಚರಿಸಲು ಬಂದನೋ ಎಂದುಕೊಂಡ. ಆದರೆ ಗುರಿಕಾರ ಕುದರೆಯೇರಿ ಬರುವುದುಂಟೆ ?

ಗುರಿಕಾರನೂ ಕೊರಗನೇ ತಾನೆ ? ಕೊರಗರಿಗೆಲ್ಲಿಯ ಕುದುರೆ ? ಹಿಂದೆ ಎಂದೋ, ಕೊರಗರ ದಣಿಯಾಗಿದ್ದ ಮುಟ್ಟಾಳೆ ಅರಸು ಗಟ್ಟದ ಮೇಲಿಂದ ಸೇನೆಯೊಂದನ್ನು ತಂದು ಮಂಜೇಶ್ವರದ ಅರಸನ ಮೇಲೆ ಬಿದ್ದು ಅವನನ್ನು ಕಾಳಗದಲ್ಲಿ ಸೋಲಿಸಿದನಂತೆ. ಆಗ ಕೊರಗರ ಕೈ ಮೇಲಾಯಿತು. ಅವರು ಊರ ಪೇಟೆಯಲ್ಲಿರುತ್ತಿದ್ದರು, ಕುದುರೆಯನ್ನೇರಿ ಅಡ್ಡಾಡಿದರು ; ವೈಭವದಲ್ಲಿ ಓಲಾಡಿದರು. ಆದರೆ ಆ ಸಮಯದ ಕೊರಗರ ಗುರಿಕಾರ ನೆರೆಯ ಅರಸನ ಮಗಳನ್ನು ಮೋಹಿಸಿ, ಆ ಅರಸನನ್ನೂ ಅಲ್ಲಿನ ಪೇಟೆಯವರನ್ನೂ ಸಿಟ್ಟಿಗೆಬ್ಬಿಸಿದ. ಅಲ್ಲಿಯ ಜನರೆಲ್ಲ ಕೂಡಿಕೊಂಡು, ಕಲ್ಲುರ್ಟಿಭೂತಕ್ಕೆ ಹರಕೆ ಹೊತ್ತು, ಕೊರಗರ ಬೀಡಿನ ಮೇಲೆ ಬಿದ್ದು, ಕೈಗೆ ಸಿಕ್ಕವರನ್ನು ಕೊಂದು ಉಳಿದವರನ್ನು ದೂರದ ಕಾಡಿಗಟ್ಟಿದರು. ಅಂದಿನಿಂದ ಕೊರಗರು ಕಾಡಾಡಿಗಳು ; ಪೇಟೆಯ ಕಡೆ ಅವರು ಸುಳಿಯುವುದೂ ಕಡಮೆಯಾಯಿತು. ಕಾಡೊಳಗೆ ಕೊರಗರ ಕೇರಿಯಲ್ಲಿ ಕುದುರೆಯೆಲ್ಲಿ ಬಂತು ?

ಗುರಿಕಾರನೊಬ್ಬನ ಮಿತಿಮೀರಿದ ಕಾಮಕ್ಕೆ ಕೊರಗರೆಲ್ಲರೂ ಬಲಿಯಾಗಬೇಕಾಯಿತೆಂದು ಅಂದಿನಿಂದ ಕೊರಗರಿಗೆ ತಮ್ಮ ಗುರಿಕಾರನ ಮೇಲೆ ಮುನಿಸು.

ಮಾಡಬಾರದುದನ್ನು ಮಾಡಿ ಆಗಬಾರದುದನ್ನು ಆಗಿಸಿದನಲ್ಲ ಈ ಹಿರಿಯ ? ತನ್ನ ಚಕ್ಕಂದದಾಟಕ್ಕೆ ತನ್ನ ಕಡೆಯವರೆಲ್ಲ ಕಾಡುಪಾಲಾದರೂ ಅವನಿಗಂತೂ ವಿವೇಕ ಬರಲಿಲ್ಲ. ತನ್ನ ಕಾಮದ ಕಪ್ಪನ್ನು ತನ್ನವರಿಗೆಲ್ಲ ಹಚ್ಚಿಹೋದ ; ತನ್ನ ಒಬ್ಬನ ಒಡಲಿನ ಕೊಳೆಯನ್ನು ತನ್ನನ್ನು ನಂಬಿದ್ದವರ ಮೇಲೆಲ್ಲ ಬಳಿದ ! ಆದರೆ ಗುರಿಕಾರನೆಂಬ ಹಿರಿತನ ಮರೆಯಾಗಲಿಲ್ಲ. ತನ್ನನ್ನು ಕಾಡಿದ ಕಲ್ಲುರ್ಟಿ ಭೂತವನ್ನೇ ಹೇಗೋ ತಣಿಸಿ, ಅದರ ಬಲ್ಮೆಯಿಂದ ತನ್ನ ಓಲಗವನ್ನು ಉಳಿಸಿಕೊಂಡ. ಅವನ ಮಾತು ಮೀರಿ ಅವನಿಗೆ ಎದುರಾದರೆ ಭೂತ ಸುಮ್ಮನಿರದೆಂದು ಕೊರಗರು ಗುರಿಕಾರನಿಗೆ ಮುನಿಸು ಬಾರದಂತೆ ಮಣಿಯುವರು. ಆದರೆ ಭೂತವೇನು ದಿಟವಾಗಿ ಅವನಿಗೆ ಒಲಿಯಲಿಲ್ಲವೆಂದು ಬಗೆದು ಅವನನ್ನು ಕಂಡರೆ ಒಳಗೊಳಗೆ ಅಸಡ್ಡೆಯೂ ಉಂಟು. ತಮಗೆ ಬಾರದ ಕುದುರೆಯನ್ನು ಇವನು ಏರುವುದೇಕೆ ? ಹೀಗೆಂದು ಅಡ್ಡಿ ಮಾಡಿದರು. ಅಂದಿನಿಂದ ಕೊರಗರ ಗುರಿಕಾರ ಕುದುರೆಯೇರಿ ಹೋಗಲಾರ.

ಮತ್ತೆ, ಎದುರಿಗೆ ಕುದುರೆಯೇರಿ ಬರುತ್ತಿರುವ ಬಂಟ ಯಾರು ? ಕೊರಗರ ದೇರೆ ನಿಂತಲ್ಲಿಂದಲೇ ಎವೆಯಿಕ್ಕದೆ ದಿಟ್ಟಿಸಿ ನೋಡಿದ. ಅವನು ನೋಡುತ್ತಿರುವಂತೆ, ತನ್ನೆಡೆಗೆ ಓಡಿ ಬರುತ್ತಿದ್ದ ಕುದುರೆ ಓಡುವುದನ್ನು ಬಿಟ್ಟು ನಡೆಯತೊಡಗಿತು ; ನಡೆಯುವುದನ್ನೂ ಬಿಟ್ಟು ನಿಂತಿತು. ದೂರವಿದ್ದರೂ ಅದನ್ನು ಅವನು ದಿಟ್ಟಿಸಿ ನೋಡಿದ. ಕುದುರೆಯ ಬೆನ್ನ ಮೇಲೆ ಗತ್ತಿನಿಂದ ಕೂತ ಬಂಟ ಅಷ್ಟು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಅವನ ತಲೆಯ ಮೇಲಿನ ಮುಂಡಾಸು, ಅವನ ನಡುವಿಗೆ ಬಿಗಿದಿದ್ದ ತುಂಡು, ಸೊಂಟಪಟ್ಟಿಗೆ ಸಿಕ್ಕಿಸಿದ್ದ ನೋರೆಕತ್ತಿ, ಇಷ್ಟನ್ನು ಬಿಟ್ಟು ಉಳಿದುದೆಲ್ಲ ಮಂಜುಮಾಸಲು. ಕುದುರೆಯ ಕರಿಯ ಮೈ ಎದ್ದು ಕಾಣುವಂತಿದ್ದರೂ, ಸವಾರನ ಮೈಯಾಗಲೀ ಮೋರೆಯಾಗಲೀ ಕೊರಗರ ದೇರೆಯ ಕಣ್ಣಿಗೆ ಬೀಳಲಿಲ್ಲ.

ಆದರೆ "ಇದು ದೈವದ ತಾಣವೆಂಬುದನ್ನು ಅರಿಯೆಯಾ, ದೇರೆ ? ಇಲ್ಲಿಗೆ ಕಾಲಿಡಬಾರದು" ಎಂದು ತನಗೆ ಗುರಿಕಾರ ಹೇಳಿದ ಮಾತುಗಳೇ ಈ ಮಾಯದ ಮನುಷ್ಯನ ಮೊಗದಿಂದ ಮೊಳಗುತ್ತಿರುವಂತೆ ಕೇಳಿಸಿತು ಅವನಿಗೆ. ಇವನು

ದಿಟವಾಗಿ ಗುರಿಕಾರನೋ ? ಅಲ್ಲವಾದರೆ ಅದೇ ಮಾತು ಹೇಗೆ ? ಹೌದಾದರೆ ಕುದುರೆಯೇರಿರುವುದು ಹೇಗೆ ? ಮೈಮೋರೆಗಳು ಕಾಣಿಸದಿರುವುದು ಹೇಗೆ ? ತನ್ನ ಹೆಣ್ಣು ಅರಿವು ತಪ್ಪಿ ಮರವಾಗಿ ತನ್ನ ಕೊಪ್ಪದಲ್ಲಿ ಬಿದ್ದಿರುವಾಗ ತನ್ನನ್ನು ಕಾಣಲು ಬಂದವನು, ತನ್ನನ್ನು ದೈವದ ತಾಣವೆಂದು ಎಚ್ಚರಿಸಿ ಹೋದವನು



ದಿಟವಾಗಿ ಗುರಿಕಾರನೋ ? ಈ ಮಾಯದ ಮನುಷ್ಯನೇ ಆಗ ಗುರಿಕಾರನಂತೆ ಮೈದಳೆದು ಬಂದವನೋ ? ತಾವಿಬ್ಬರು ದೈವದ ತಾಣಕ್ಕೆ ಬಂದುದನ್ನು ಗುರಿ

ಕಾರ ಕಂಡುದು ಹೇಗೆಂಬ ಸಂಶಯು ಕೊರಗರ ದೇರೆಯ ಮನಸ್ಸಿನೊಳಗೆ ಆಗಾಗ ಸುಳಿದು ಬರುತ್ತಿದ್ದುದೇನೋ ಉಂಟು. ಎಂದೂ ಬಾರದ ಗುರಿಕಾರ ಅಂದು ತನ್ನ ಕೊಪ್ಪದ ಹತ್ತಿರ ಬಂದುದು ದೇರೆಗೆ ಸೋಜಿಗವೆನಿಸಿದ್ದೂ ಉಂಟು. ಆದರೆ ತನ್ನ ಹೆಣ್ಣಿನ ಚಿಂತೆಯಲ್ಲಿ ಗುರಿಕಾರನನ್ನು ಕುರಿತ ಯೋಚನೆ ಬೆಳೆಯ ಲಿಲ್ಲ ; ಉಳಿಯಲೂ ಇಲ್ಲ.

ಕೊರಗರ ದೇರೆ ಕಣ್ಣು ಅರಳಿಸಿ ನೋಡುತ್ತಿದ್ದಂತೆ, ಕುದುರೆಯೇರಿದ ಬಂಟನ ಸುತ್ತ ಪರಿವಾರವೊಂದು ನೆರೆಯಿತು. ಆ ಮೊದಲು ಈ ಪರಿವಾರ ವನ್ನು ಅವನು ಕಂಡುದಿಲ್ಲ. ಎಲ್ಲಿಂದ ಬಂದು ನೆರೆಯಿತು ಈ ಪರಿವಾರ ಎಂದು ಅಚ್ಚರಿಪಡುತ್ತಿರುವಾಗಲೇ, ಪರಿವಾರದಲ್ಲಿ ಕೆಲವರು ಈರಣದೋಲು ಉಜ್ಜುತ್ತ, ಕೆಲವರು ಗಂಟೆ ಬಾಜಿಸುತ್ತ, ಕುಣಿಯುತ್ತಿರುವುದು ಕಂಡಿತು. ನಡುನಡುವೆ ದೊಂದಿಗಳನ್ನು ಎತ್ತಿ ಹಿಡಿದವರು ; ಅಲ್ಲಲ್ಲಿ ಕಹಳೆ ಊದುವವರು, ಕೊಳಲು ನುಡಿಸುವವರು. ನೆರೆದವರ ನಡುವೆ ಸಡಗರವೋ ಸಡಗರ ! ಈ ಸಡಗರದ ಕಾರಣವೇನು, ಯಾರಿಗಾಗಿ ಇಷ್ಟು ಓಲಗ ಎಂದು ದೇರೆ ಅಂದುಕೊಳ್ಳುತ್ತಿರು ವಷ್ಟರಲ್ಲೇ, ಮರುಗಳಿಗೆಯಲ್ಲೇ ಅಷ್ಟೂ ಮರೆಯಾಗಿಬಿಟ್ಟಿತು !

ತಾನು ಕಂಡಿದ್ದೇನು ಕಂಡಿತವೋ, ಬರಿಯ ಮೆದುಳಿನ ಆಟವೋ ಅವನಿಗೆ ತಿಳಿಯದಾಯಿತು. ಕನಸು ಕಾಣುತ್ತಿಲ್ಲವೆಂದು ಗಟ್ಟಿಮಾಡಿಕೊಳ್ಳಲು ಬಲ ವಾಗಿ ಮೈ ಪರಚಿಕೊಂಡ ; ನೆತ್ತರು ಹರಿಯಿತಾಗಿ ಕನಸಂತೂ ಅಲ್ಲ. ಆದರೆ ಎಚ್ಚರ ಇರುವಾಗ ಕನಸು ಇರಬಾರದೆಂದು ನಿಯಮ ಉಂಟೆ ? ಕನಸೂ ಒಂದು ಬಗೆಯ ಎಚ್ಚರವೇ ತಾನೆ ? ಎಚ್ಚರವಾದರೂ ಕನಸಲ್ಲವೆಂದು ಹೇಳು ವುದು ಹೇಗೆ ? ಮೆದುಳು ಕನಸೆಂದುದನ್ನು ಒಡಲು ಎಚ್ಚರವೆಂದು ಬಗೆಯು ವುದೂ ಉಂಟಷ್ಟೆ ?

ಎಚ್ಚರವೋ ಕನಸೋ, ಹಿಂದಿನ ಗಳಿಗೆ ಕಣ್ಣಿಗೆ ಕಟ್ಟಿದಂತೆ ಕಾಣುತ್ತಿ ದ್ದುದು ಈಗಂತೂ ಇರದು. ಸಡಗರದ ಪರಿವಾರ ಮರೆಯಾಯಿತು ; ಕುದುರೆ ಯೇರಿ ಕುಳಿತಿದ್ದ ಬಂಟವೀರನೂ ಕಾಣದಾದ. ಅವನ ಮೈಯೇನು ಮೊದಲೇ ಕಾಣುತ್ತಿರಲಿಲ್ಲ. ತಲೆಯ ಮೇಲೆ ಎಂಬಂತಿದ್ದ ಮುಂಡಾಸು ಮೊದಲು ಮರೆ

ಯಾಯಿತು ; ಸೊಂಟಪಟ್ಟಿಯಂತೆ ಕಾಣುತ್ತಿದ್ದುದೂ ಕಣ್ಮರೆಯಾಯಿತು. ನಡುವಿಗೆ ಸಿಕ್ಕಿಸಿದ್ದೆಂಬಂತೆ ಇದ್ದ ನೋರೆಕತ್ತಿ ಒಂದೆರಡು ಬಾರಿ ಅಲುಗಾಡಿ ಮಾಯವಾಯಿತು. ಕುದುರೆಯ ಕರಿಯ ಮೈ ಹಿಂದಿನಿಂದ ಕರಗುತ್ತ ಬಂದು, ಮೈ ಮರೆಯಾಗಿ, ಈಗ ಮೋರೆ ಮಾತ್ರ ಮೆರೆಯುತ್ತಿತ್ತು.



ಒಮ್ಮೆ ಬಾಯರಳಿಸಿ ಭೂಮಿ ನಡುಗುವಂತೆ ಕುದುರೆ ಕೆನೆಯಿತು. ಹರಡಿಕೊಂಡಿದ್ದ ಮೂಗಿನ ಹೊಳ್ಳೆಯಿಂದ ಬುಸುಗುಟ್ಟುತ್ತ ಹೊಗೆಯ ಅಲೆ ಎದ್ದಿತು. ಮರುಗಳಿಗೆ, ಮೋರೆಯೂ ಮೂಗಿನಿಂದ ಮೇಲೆ ಮರೆಯಾಗುತ್ತ ಬಂದು, ಕಣ್ಣುಗಳಷ್ಟೇ ಉಳಿದುಕೊಂಡವು. ನಿಗಿನಿಗಿ ಉರಿಯುವ ಕೆಂಡಗಳನ್ನೇ ಕಾರುವಂತೆ ಕೆಂಬಣ್ಣದ ಕಣ್ಣು ದೇರೆಯನ್ನೇ ದಿಟ್ಟಿಸಿ ನೋಡುತ್ತಿತ್ತು. ದೈವದ

ತಾಣದೊಳಗೆ, ಅಂದು, ತನ್ನ ಹೆಣ್ಣನ್ನು ಆ ಮಾಯದ ಹಂದಿ ದುರುಗುಟ್ಟಿ ನೋಡಿದುದು ಒಡನೆಯೇ ಅವನ ನೆನಪಿಗೆ ಬಂದಿತು. ಅಂದು ಹಂದಿ, ಇಂದು



ಕುದುರೆ—ಎರಡೂ ಮಾಯದವು ತಾನೆ ? ಅಂದು ಆಕೆ, ಇಂದು ನಾನೋ ? ಹಂದಿಯ ಕಣ್ಣು ಆಕೆಯ ಮೇಲೆ ಬಿದ್ದೊಡನೆ ಆಕೆ ಅರಿವು ತಪ್ಪಿ ನೆಲದ ಮೇಲೆ ಉರುಳಲಿಲ್ಲವೇ ? ಈ ನೆನಪು ದೇರೆಯ ಮನಸ್ಸಿನಲ್ಲಿ ಮಿರಿಮಿರಿ ಮಿಂಚಿತು.

ಅದನ್ನು ನೆನೆಸಿಕೊಂಡೊಡನೆ ಒಡಲು ಗಡಗಡ ನಡುಗಿತು ; ಕೈಕಾಲು ಗಳು ಸೊರಗಿದವು ; ಕಣ್ಣು ಮಂಜಾಯಿತು. ಕಾಣದ ಕಣ್ಣ ಎದುರಿಗೇ ಸಾವು ನಿಂತಂತೆ ಆಯಿತು ; ಅದರ ಮೋರೆ ಎಮ್ಮೆಯದು. ಅದರ ತಲೆಯ ಮೇಲಿನ ಕೇದಗೆಯ ಮುಂದಲೆ ಕೊರಗರ ದೇರೆಯನ್ನು ಎಳೆದು ತನ್ನೆಡೆಗೆ ಸೆಳೆದು ಕೊಂಡಂತೆ ಆಯಿತು. ಮುಂದಲೆಯ ಮೇಲಿದ್ದ ಸಿರಿಮುಡಿಯಿಂದ ಸಿಂಗಾರದ ಹೂವೊಂದು ಹಾರಿ ತನ್ನೆಡೆಗೆ ಬಂದಂತೆ ಆಯಿತು. ಸಾಯುವ ಸಮಯ ಈಗಲೇ ಸಂದಿತೆಂದು ದೇರೆಗೆ ಕಂಡಿತವಾಯಿತು. ಆದರೆ ಅವನಲ್ಲಿ ಅಂಜಿಕೆಗೆ ಬದಲು, ಆಸೆಯೊಂದು ಚಿಗುರೊಡೆಯಿತು. ಆಗ ತನ್ನ ಹೆಣ್ಣಿನಂತೆ ಈಗ ತಾನೂ ಅರಿವು ತಪ್ಪಿ ಕೆಳಗೆ ಬಿದ್ದರೆ, ಆಕೆಯನ್ನು ಎಲ್ಲಿಯಾದರೂ ಎಂತಾದರೂ ಕಾಣಲಾ ದೀತೋ ? ಕುದುರೆಯ ಕಣ್ಣುಗಳ ಕಾವು ಇದ್ದಕ್ಕಿದ್ದಂತೆ ಆರಿತು ; ತಂಪು ತೋರಿ ಕೊಂಡಿತು. ಅಷ್ಟರಲ್ಲಿ ಕುದುರೆಯ ಕಣ್ಣುಗಳು ಮರೆಯಾಗಿಬಿಟ್ಟುವು !

ಮಂಜುಮಾಸಿದ ಕಣ್ಣುಗಳಿಂದಲೇ ಕೊರಗರ ದೇರೆ ಮೈಮರೆತು ಮರುಳಾಗಿ ದಿಟ್ಟಿಸಿ ನೋಡುತ್ತಿದ್ದ. ತನ್ನ ಕಣ್ಣೆದುರು ಕಾಡುತ್ತಿದ್ದ ಕುದುರೆಯ ಕಣ್ಣು ಗಳು ಮರೆಯಾದಮೇಲೆ, ಅವನಿಗೆ ಹಿಂದೆಂದೂ ಇರದಂಥ ದಿಗಿಲು ಬಂದಿತು. ಮನಸ್ಸಿನ ಮೇಲುಗಡೆಯ ಮಾಡಿನಲ್ಲಿ ಎಲ್ಲೋ ಸಣ್ಣಗೆ ಮೂಡಿಕೊಂಡ ದಿಗಿಲು ಮೈಯೊಳಗಿಳಿದು ತೊರೆತೊರೆಯಾಗಿ ಹರಿಯುತ್ತ, ನರಗಳನ್ನೆಲ್ಲ ತೋಯಿಸಿ, ಹೊರಗೆ ತುಂತುರು ಕಣಗಳಾಗಿ ಸಿಡಿಯಿತು. ಮೈಯೊಳಗೆ ದಿಗಿಲಲ್ಲದೆ ಬೇರೇನೂ ಇರದು ! ಹಿಂದೆ ತಾನು ಅಡವಿಯಲ್ಲಿ ಅಲೆದಾಡುತ್ತಿದ್ದಂತೆ, ಈಗ ತನ್ನ ಮೈಯೊ ಳಗೆ ಅಂಜಿಕೆ ಹರಿದಾಡುತ್ತಿದೆ ! ಮಾಯದ ಕುದುರೆಯನ್ನು ಕಣ್ಣೆದುರು ಹೊರಗೆ ಕಂಡಂತೆಯೇ, ಮೈಯೊಳಗಿನ ಅಂಜಿಕೆಯನ್ನೂ ಇವನು ಹೊರಗಿರುವಂತೆ ಎದುರಿಗೇ ಕಂಡ. ಕುದುರೆಯೂ ಅದರ ಮೋರೆಯೂ ಮರೆಯಾದ ಹಾಗೆ ದಿಗಿಲೂ ಹೋಯಿತು, ಅದರ ನಡುಕವೂ ಹೋಯಿತು.

ಆದರೆ ಮೈಯೊಳಗೆ ಇರುವ ಮೂಳೆಗಳೆಲ್ಲ ಗಳಗಳನೆ ಅಳ್ಳಾಡಿದುವು. ಮೂಳೆಗಳ ಮೇಲೆ ಬಲೆಯಾಗಿ ಹೆಣೆದುಕೊಂಡಿದ್ದಂಥ ಮಾಂಸಖಂಡಗಳು ತಣಿವುಹೋಗಿ ಸೆಟೆದು ನಿಂತುವು ; ಮಾಂಸಖಂಡಗಳ ಮೇಲೆ ಬಲವಾಗಿ ಬಿಗಿದು ಕಟ್ಟಿದ್ದ ನರಗಳೆಲ್ಲ ಬಲ ಅಡಗಿ ಸಡಿಲವಾದುವು ; ನರಗಳೊಳಗೆ ಹರಿಯುವ ನೆತ್ತರು ಬೆಂಕಿಯಲ್ಲಿ ಬತ್ತಿದಂತಾಯಿತು ; ಮೇಲೆ ಬರುತ್ತಿದ್ದ ಉಸಿರು ಕಟ್ಟಿದಂತಾಯಿತು. ನೆತ್ತರಿಗೂ ಉಸುರಿಗೂ ಆಸರೆಯಾಗಿರುವ ಅರಿವು ಜಾರುವುದೋ ಎನಿಸಿತು. ನಿಂತಿರಲು ಬಲ ಸಾಲದೆ, ಕಣ್ಣು ಕತ್ತಲೆ ಕವಿದು, ಕೊರಗರ ದೇರೆ ಅಲ್ಲಿಯೇ ನೆಲದ ಮೇಲೆ ಒರಗಿದ. ಅವನೀಗ ಸತ್ತವನೂ ಅಲ್ಲ, ಬದುಕಿದ್ದವನೂ ಅಲ್ಲ ; ಅರಿವುಂಟು, ಎಚ್ಚರವಿರದು.

(4)

ಎಷ್ಟು ಹೊತ್ತು ಹಾಗೆ ಬಿದ್ದಿದ್ದನೋ ತಿಳಿಯದು. ಮೈಯಲ್ಲಿ ಅರಿವೇನು ತಪ್ಪಿರಲಿಲ್ಲ ; ಆದರೆ ಹೊರಗೆ ಹರಿಯುವ ಆತುರ ಅದಕ್ಕೆ ಇರಲಿಲ್ಲ. ನೆಲದ ಮೇಲೆ ಬೆಂಡಾಗಿ ಬಿದ್ದುಕೊಂಡಿರುವ ಮೈ ತನ್ನದೋ ? ತಾನೇನು ಅದರೊಳಗೆ ಇರುವವನೋ ? ಹಿಂದೆ, ದೂರದ ತನ್ನ ಕೊಪ್ಪದಲ್ಲಿ, ಇರುಳು ಹೊತ್ತು ಅಡಗಿಕೊಂಡುಇರುತ್ತಿದ್ದಂತೆ ಈಗ ಈ ಮೈಯೊಳಗೆ ತಾನು ! ಕಣ್ಣುಗಳು ತೆರೆದಿದ್ದರೂ ಯಾವೊಂದು ನೋಟವೂ ಇರದು. ಯಾವ ಸದ್ದೂ ಕಿವಿಗೆ ತಾಕದು. ನಾಲಗೆಯಿಂದ ಮಾತೊಂದೂ ಹೊರಡದು. ಇಷ್ಟಾದರೂ ಮೈಯೊಳಗೆ-ಮೈಹೊರಗೆ ಎಂಬ ಅರಿವು ಮಾತ್ರ ಇದ್ದಿತು. ಮೈಯೊಳಗೆ ಎಚ್ಚರವೇ ; ಹೊರಗಿನದಕ್ಕೆ ಎಚ್ಚರವಿರದು. ಒಳಗೊಂದು ಕಾಡು ; ಹೊರಗೊಂದು ಕಾಡು. ಎರಡರ ನಡುವೆ ಮೈಯೊಂದು ಅಡ್ಡಗೋಡೆ. ಅಡ್ಡಗೋಡೆ ಅತಿಯಾಗಿ ಎತ್ತರವಾದರೆ ಒಳಕಾಡಿಂದ ಹೊರಕಾಡಿಗೆ ಹಾಯುವುದು ಕಷ್ಟ. ಎಚ್ಚರವಾಗಿರುವಾಗ ಈ ಅಡ್ಡಗೋಡೆ ಹೀಗೆಯೇ. ಆದರೆ ಕೊರಗರ ದೇರೆಯ ಪಾಲಿಗೆ ಈಗ ಅಡ್ಡಗೋಡೆ ಮುರಿದು ಬಿದ್ದಿದೆ. ಒಳಗು ಹೊರಗುಗಳು ಒಂದಕ್ಕೊಂದು ತಾಕಿಕೊಂಡು ನಿಂತಿವೆ. ಇನ್ನು ಒಳಗಿಂದ ಅರಿವು ಹೊರಗೆ ಹಾರಿ ಹೋಗಲು ಅಡ್ಡಿಯೇನು ?

ಅಡ್ಡಿಯೇನು ಇರದಿದ್ದರೂ ಅರಿವಿಗೆ ಆತುರ ಇರಬೇಕಲ್ಲ? ಇಷ್ಟು ದಿನ ಒಳಗೇ ಇದ್ದುಕೊಂಡು ತನ್ನ ಇರವು ಒಳಗಲ್ಲದೆ ಹೊರಗಲ್ಲ ಎಂಬ ಎಣಿಕೆ ಅದಕ್ಕೆ. ಮೈಯಲ್ಲಿ ಸುಖವಿರಲಿ, ಕಷ್ಟವಿರಲಿ, ನೆಮ್ಮದಿ ಮೂಡಲಿ ಒಡೆಯಲಿ, ಮೈಯಂತೂ ತನ್ನದೇ ತಾನೆ? ಈ ಮೈಯೇ ತನ್ನ ಮನೆ ತಾನೆ? ಇದನ್ನು ಬಿಟ್ಟು ಎಂದಾದರೂ ಎಲ್ಲಿಯಾದರೂ ಹೋದುದುಂಟೋ? ದಿಟ, ಇರುಳ ನಿದ್ರೆಯಲ್ಲಿ ಅರಿವು ಮೈಯ ಪರಿವೆಯಿಲ್ಲದೆ ಹೊರಗೆ ಹಾದು ಎಲ್ಲೆಲ್ಲೋ ಅಲೆದಾಡುವುದು. ಆದರೆ ಆ ಅಲೆದಾಟದ ಅರಿವು ಅದಕ್ಕೆ ಉಂಟೆ? ಅರಿವಿನ ಹರವು ಇರುವುದು ಎಚ್ಚರದಲ್ಲೇ. ಎಚ್ಚರದ ಹೊದಿಕೆಯನ್ನು ಈಗ ಮೈಯಿಂದ ಜಾರಿಸಿ, ಅರಿವು ಬರಿಮೈಯಾದುದು ದೇರೆಗೆ ಇದೇ ಮೊದಲು. ಹೀಗಾಗಿ ಹೊರಗೆ ಹಾರಿ ಹೋಗುವುದು ಸುಲಭವಾದರೂ ಅವನ ಅರಿವು ಮುಂದರಿಯಲು ಹಿಂದೆ ಮುಂದೆ ನೋಡಿತು; ಹಾತೊರೆಯಲಿಲ್ಲ.

ಆದರೆ ಎಚ್ಚರದ ತುಂಡನ್ನು ಸೊಂಟದಿಂದ ಕಳಚಿ ಬೆತ್ತಲೆಯಾಗಿದ್ದ ದೇರೆಯ ಅರಿವು ಹಿಂದೆಂದೂ ಹೀಗೆ ಹಗುರವಾಗಿರಲಿಲ್ಲ. ನೆಲಕ್ಕಾಗಲೀ ಮೈಗಾಗಲೀ ಅಂಟಿಕೊಂಡೇ ಇರಬೇಕಾದ ಅಗತ್ಯ ಈಗ ಅದಕ್ಕಿರಲಿಲ್ಲ. ಗೂಡಿನಿಂದ ಹಕ್ಕಿ ಹೊರಗೆ ಹಾರಿ ಹೋಗುವಂತೆ ಅರಿವು ಮೈಯಿಂದ ಹೊರಗೆ ಹೋದರೆ, ಎಲ್ಲಿಯಾದರೂ ಹಾರಾಡಬಹುದು; ಕಾಲಿಂದಲೇ ನಡೆಯಬೇಕಾದುದಿಲ್ಲ. ಹಿಂದೆಯೂ ಮನಸ್ಸಿನೊಂದಿಗೆ ಹೀಗೆಯೇ ಹಾರಾಡುವುದಿದ್ದಿತಾದರೂ, ಈಗ ಇದೊಂದು ಹೊಸ ಅನುಭವ. ಮೇಲಾಗಿ ತನ್ನ ಹೆಣ್ಣನ್ನು ಕಾಣುವ ಹಂಬಲ ಅವನ ಅರಿವಿನೊಂದಿಗೆ ಬೆರೆತು ಹೋಗಿದ್ದಿತು. ಹೊರ ಕಾಡಿನಲ್ಲಿ ಹಾರಾಡಿದರೆ ಆಕೆಯನ್ನು ಎಲ್ಲಿಯಾದರೂ ಕಾಣಬಹುದೇನೋ? ಈ ಬಯಕೆ ಮೇಲೇರಿದಾಗ, ಆಸೆ ಕೈಬೀಸಿ ಕರೆದಾಗ ದೇರೆಯ ಅರಿವು ಮೈಯಿಂದ ಜಿಗಿದು ಹೊರಗೆ ಬಂದಿತು. ಒಂದು ಗಳಿಗೆ ಹೊರಗೇ ನಿಂತು, ತನ್ನ ಮೈಯನ್ನೇ ದಿಟ್ಟಿಸಿ ನೋಡಿತು. ಬಿಡಲಾರದೆ, ಬಿಟ್ಟು ಹೋಗಲಾರದೆ ಮತ್ತೆ ಅದರೊಳಗೇ ನುಸುಳಿಕೊಂಡಿತು.

ಹೀಗೆ ಒಂದಲ್ಲ ಹಲವು ಸಲ ನಡೆದು ಮೈಯೊಳಗೆ ಬೇಕೆಂದಾಗ ಸೇರಿಕೊಳ್ಳುವುದು ಸುಲಭವೆಂದು ಕಂಡಿತವಾದಾಗ, ದೇರೆಯ ಅರಿವು ದೂರ ಹಾರಿ

ಹೋಗಲು ಸಿದ್ಧವಾಯಿತು. ಮೂಡುಗಡೆ ಬೆಳ್ಳಿ ಮೂಡುವಾಗಲೇ ಹಾಸಿಗೆಯಿಂದ ಎದ್ದು ತನ್ನ ಹೆಣ್ಣಿನೊಡಗೂಡಿ ಬೀಡಿನಿಂದ ಹೊರಬಿದ್ದು ಕಾಡಿನಲ್ಲೆಲ್ಲ ಅಲೆದಾಡಿ, ಬೆಟ್ಟಗುಡ್ಡಗಳನ್ನೆಲ್ಲ ಏರಿ ಇಳಿದು, ಹಸಿವು ಆಸರುಗಳನ್ನು ನೀಗಿಸಿಕೊಳ್ಳುತ್ತ, ಗೊತ್ತುಗುರಿಯಿಲ್ಲದೆ ಮನಬಂದಂತೆ ಅಲೆದಾಡಿ ದಣಿವಾಗಲು ಸಂಜೆಯಿಂದು ತನ್ನ ಕೊಪ್ಪಕ್ಕೆ ತೆರಳಿ ಅದರಲ್ಲಿ ಸೇರಿಕೊಳ್ಳುವುದು ಅವನ ನೆನಪಿನಲ್ಲಿದ್ದಿತು. ಹಗಲೆಲ್ಲ ಕೊಪ್ಪದ ಹೊರಗೆ, ಇರುಳು ಕೊಪ್ಪದ ಒಳಗೆ. ರಾತ್ರಿಯಲ್ಲಿ ತೆಪ್ಪಗೆ ತಂಗಲು ಕೊಪ್ಪ ; ಅಡ್ಡಾಡಿ, ಉಂಡು, ನಲಿದು ಬರಲು ಅಡವಿ. ಕತ್ತಲೆ ಕವಿದರೆ ಒಳಗೆ ; ಬೆಳಕು ಹರಿದರೆ ಹೊರಗೆ.

ಹಿಂದೆ ಕೂಡ ಕೊಪ್ಪ ಅವನಿಗೊಂದು ಸಮಯದ ನೆಲೆಯಷ್ಟೆ. ಕೊಪ್ಪ ತನ್ನದೆಂಬ ಅಭಿಮಾನವಾಗಲೀ, ಅದರಲ್ಲೇ ಉಳಿದುಕೊಂಡಿರಬೇಕೆಂಬ ಹಟವಾಗಲೀ ಅವನಿಗಿರಲಿಲ್ಲ. ಹೊರಗಣ ಕಾಡು ಕೊಪ್ಪದಂತೆಯೇ ಅವನಿಗೆ ಇನ್ನೊಂದು ಸಮಯದ ನೆಲೆ. ಹಾಗೆ ನೋಡಿದರೆ, ಅವನ ಒಲುವು ಕೊಪ್ಪಕ್ಕಿಂತ ಕಾಡಿನ ಮೇಲೇ ಹೆಚ್ಚು. ಕೊಪ್ಪದಲ್ಲಾದರೆ ಕತ್ತಲೆಯಲ್ಲಿ ಮೈ ಮರೆತು ಮಲಗಿರಬೇಕು. ಕಾಡಿನಲ್ಲಾದರೆ ಎಚ್ಚರವಿದ್ದು ನಲಿದಾಡಬಹುದು. ಕೊಪ್ಪವನ್ನು ಬಿಟ್ಟು ಹೊರಗೆ ಹೋಗುವುದೆಂದರೆ ಅವನಿಗೆ ಎಂದೆಂದಿಗೂ ಹುಮ್ಮಸವೇ.

ಈಗ ಮೈಯೆಂಬ ಕೊಪ್ಪದಿಂದ ಹೊರ ಹೊರಡಲು ಸಿದ್ಧವಾದ ಅರಿವು ಮೈಯೊಳಗೆ ತಾನಿರದಿದ್ದರೆ ಕತ್ತಲೆಯೆಂಬುದನ್ನು ಕಂಡುಕೊಂಡಿತು. ಹೊರಗೆ ಎಲ್ಲೆಲ್ಲೂ ಬೆಳಕು ಹರಡಿಕೊಂಡಿರುವುದನ್ನು ನೋಡಿತು. ಬೆಳಕಿನ ಬಲೆಯಲ್ಲಿಯೇ ನೆಲ, ಬೆಟ್ಟ, ಗುಡ್ಡ, ಗಿಡ, ಮರ ಎಲ್ಲವೂ ತೂಗಾಡುತ್ತಿರುವಂತೆ ಕಂಡಿತು. ಮೊದಲು ಗಟ್ಟಿಯಾಗಿರುವಂತೆ ಕಂಡ ಪದಾರ್ಥಗಳೆಲ್ಲ ಈಗ ಹತ್ತಿ ಹಿಂಜಿದಂತೆ ಹರಡಿಕೊಂಡಿದ್ದುವು. ಅವುಗಳ ಒಳಗೆಲ್ಲ ಬೆಳಕು ಬೇಕಾದಂತೆ ತೂರಾಡುತ್ತಿದ್ದಿತು. ಗಟ್ಟಿಯಾಗಿರುವಲ್ಲಿ ನೆರಳು ; ಟೊಳ್ಳಾಗಿರುವುದರಲ್ಲಿ ಬೆಳಕು. ಹಗಲು ಇರುಳುಗಳ ಗುಟ್ಟು ಇಷ್ಟೇನೆ ? ತನ್ನ ಮೈಯೊಳಗೆ ತಾನಿರುವಾಗ ಬೆಳಕೇ ಆದರೂ ಅದು ಹೊರಗಣ ಬೆಳಕಿನಂತೆ ಹೊಳೆ ಹೊಳೆಯುವುದಲ್ಲ. ಮಣ್ಣಿನ ಮೈಗಿಂತ ಗಟ್ಟಿಯಾದುದು ಮನಸ್ಸಿನ

ಅಭಿಮಾನ ; ಬೆಳಕಿರುವ ಮೈಯೊಳಗೆ ಕತ್ತಲೆಯನ್ನು ಕವಿಸುವುದು ಈ ಅಭಿಮಾನವೇ. 'ನನ್ನ ಮೈ', 'ಮೈಯೊಳಗೆ ನಾನು' ಎಂಬ ಅಭಿಮಾನ ಕೊರಗರ ದೇರೆಗೆ. ಉಳಿದಿದ್ದಷ್ಟು ಸಮಯವೂ ಮೈಯೊಳಗೆ ಕತ್ತಲೆಯೇ. ಅದನ್ನು ಅವನು ಕೊಪ್ಪವೆಂದು ಕಾಣುತ್ತಿರಲಿಲ್ಲ. ಗುಡ್ಡದಂತೆ ಗಟ್ಟಿಯೆಂದು ತಿಳಿದಿದ್ದ.

ಮಾಯದ ಕುದುರೆಯ ಕಣ್ಣು ತನ್ನನ್ನು ದಿಟ್ಟಿಸಿದಾಗಲೇ, ದಿಟವಾಗಿ ತನ್ನ ಮೈಯೊಂದು ಕೊಪ್ಪವೇ ಎಂದು ಅವನಿಗೆ ತೋರಿದುದು. ಮತ್ತೆ, ಎಮ್ಮೆಯ ಮೋರೆಯುಳ್ಳ ಸಾವಿನ ಸಿರಿಮುಡಿಯಿಂದ ಸಿಂಗಾರದ ಹೂ ಹಾರಿಬಂದು ತನ್ನನ್ನು ತಾಗಿದೊಡನೆ ಈ ಮೈಕೊಪ್ಪ ತನ್ನದೆಂಬ ಅಭಿಮಾನ, ತಾನು ಅಲ್ಲಿಯೇ ಇರಬೇಕೆಂಬ ಹಂಬಲ ಎರಡೂ ಒಡನೆಯೇ ಅಡಗಿದುವು. ಹೀಗೆಂದೇ ಅವನ ಅರಿವು ಆ ಮೈಯಿಂದ ಹೊರಹೊರಡಲು ಸಿದ್ಧವಾಯಿತು. ಇರುಳು ಕಳೆದು ಬೆಳಕು ಹರಿದಂತೆ ಆಯಿತು. ಹೊರಗೆ ಹೊರಡಲು ಸಿದ್ಧನಾದ ಅವನ ಅರಿವನ್ನು ಮೈಯೇನು ತಡೆಯಲಿಲ್ಲ. ಹಿಂದೆ ತಾನು ಇರುಳನ್ನು ಕೊಪ್ಪದಲ್ಲಿ ಕಳೆದು ಮುಂಜಾನೆ ಹೊರಗೆ ಹೊರಟಾಗ, ಕೊಪ್ಪವೇನು ಎಂದಾದರೂ ಅವನ ಕೈಕಟ್ಟಿ, ಕಾಲು ತಡೆದಿದ್ದಿತೆ ? ಹೊರಗೆ ಹೊರಟಾಗ ಬೇಡವೆಂದಿದ್ದಿತೆ ? ಒಳಗೆ ಬಂದಾಗ ಬಾ ಎಂದು ಕರೆದಿದ್ದಿತೆ ? ಈಗ ಮೈಯೆಂಬ ಕೊಪ್ಪವೂ ಹಾಗೆಯೇ. ಹೊರಹೊರಟು ನಿಂತ ಅವನ ಅರಿವನ್ನು ಅದು ತಡೆಯಲಿಲ್ಲ.

ಮೇಲಾಗಿ, ಮೈಯಿಂದ ಹೊರಹೊರಟು ನಿಂತ ಅವನ ಅರಿವಿಗೆ ಇದು ಒಳಗು ಇದು ಹೊರಗು, ಇದು ಇರುಳು ಇದು ಬೆಳಗು, ಇದು ಆಳ ಇದು ನಿರಾಳ ಎನ್ನುವ ಹೊಸದೊಂದು ಎಚ್ಚರ ಒದಗಿತು. ಹೊರಗೆ ನಿರಾಳವಾಗಿ ಬೆಳಕಿನಲ್ಲಿ ಹಾರಾಡುವುದೇ ಅರಿವಿಗೆ ಸಹಜವಾದುದೆಂದು ಈಗ ಅರಿವಿಗೆ ಬಂತು. ಮೈಯೊಳಗೆ, ಕತ್ತಲ ಆಳದಲ್ಲಿ ಅಡಗಿಕೊಂಡಿರುವುದು ಬೇಡ ಎನಿಸಿತು.

ಕೊರಗರ ದೇರೆ ತೀರ ಸಣ್ಣವನಿದ್ದಾಗ ಕೇರಿಯಲ್ಲಿ ಹಿರಿಯರು ಮಾಡುತ್ತಿದ್ದ ಕೆಲಸವನ್ನು ಕಂಡಿದ್ದ ನೆನಪು. ಬಿದಿರನ್ನು ಕಡಿದು, ಸಿವುರನ್ನು ಸೆಳೆದು, ಉಜ್ಜಿ, ನೇರಮಾಡಿ, ಹೆಣೆದು ಬುಟ್ಟಿಯನ್ನೋ, ಮೊರವನ್ನೋ, ತಟ್ಟಿಯನ್ನೋ, ತೊಟ್ಟಿಲನ್ನೋ ಮಾಡುವರು. ಒಳಗಿರುವ ಸತ್ವ ಅದೇ, ಸಾಮಗ್ರಿ ಅದೇ, ರೂಪ ಬೇರೆ ಬೇರೆ, ಪ್ರಯೋಜನ ಬೇರೆ ಬೇರೆ. ಇಷ್ಟೇ ತಾನೆ ಮೆದುಳು

ಮಾಡುವುದೂ ಕೂಡ ? ತನಗೂ ಇತರರಿಗೂ ಬೇಕಾಗುವಂಥ ಭಾಷೆ, ಭಾವ, ಬೆಡಗು, ಬಿನ್ನಾಣ, ಬೆಲೆಗಟ್ಟು, ಬಿಂಕ ಎಲ್ಲವನ್ನೂ ಮಾಡುವುದು ಮೆದುಳೇ. ನಮ್ಮ ಅರಿವಿನ ಹರವಿನೊಳಗೆ ಬರುವುದೆಲ್ಲ ಮೆದುಳಿನ ಮಾಟವಲ್ಲದೆ ಮತ್ತೇನು ? ದಿಟವಾದುದನ್ನು ಎದುರುಗೊಂಡು ಮಾಟವನ್ನು ಮುನ್ನುಗ್ಗಿಸುತ್ತದೆ. ಅದಕ್ಕಿಂತ ಹೆಚ್ಚಿನ ಮಾಯಕ ಎಲ್ಲುಂಟು ?

ಮೈಯೆಂಬ ಕೊಪ್ಪದ ಕತ್ತಲೆಯೊಳಗೆ ಇರುವಾಗ ಅರಿವಿಗೆ ಮೆದುಳೇ ಆಸರೆ. ಮೆದುಳು ಹಾಡುವ ರಾಗಕ್ಕೆ ಅರಿವು ತಾಳ ಕುಟ್ಟಿ ಕುಣಿಯಬೇಕು ; ಒಡಲ ಮದ್ದಳೆ ಜೊತೆಗಿದ್ದು ಗದ್ದಲಮಾಡಬೇಕು. ಇದು ಬಯಲ ಆಟವಲ್ಲ, ಒಳಗಿನ ಆಟ ! ಇದರ ಗುಂಗಿನಿಂದ ಜಾರಿಕೊಂಡು ಹೊರಗೆ ಹರಿದು ಹೋಗುವುದು ಸಾಮಾನ್ಯವಾಗಿ ಆಗದು. ಕೊರಗರ ದೇರೆ ಮಾಯದ ಕುದುರೆಯನ್ನು ಕಂಡ ಪುಣ್ಯದಿಂದ, ಎಮ್ಮೆಯ ಮೋರೆಯ ಮೇಲಣ ಸಿರಿಮುಡಿಯ ಸಿಂಗಾರದ ಹೂ ತನ್ನನ್ನು ತಾಕಿದ ಬಲದಿಂದ, ಅವನು ಒಳಗಿನ ಆಟದ ಗುಂಗಿನಿಂದ ಹೊರಬಂದುದಾಯಿತು. ಮಾಯದ ಕುದುರೆಯ ಕಣ್ಣು ತನ್ನ ಕಣ್ಣನ್ನು ಕುಕ್ಕಿದಾಗಲೇ ಮೆದುಳಿನ ಮಾಟ ನಿಂತಿತು ; ಸಿಂಗಾರದ ಹೂ ತಾಕಿದೊಡನೆ ಮೆದುಳಿನ ಬಲೆಯಿಂದ ಅರಿವು ಹೊರಬಂತು. ಮತ್ತೆ ಕೊಪ್ಪದೊಳಗೆ, ಕತ್ತಲೆಯ ಆಳದಲ್ಲಿ, ಅಡಗಿಕೊಳ್ಳುವುದು ಯಾತಕ್ಕೆ ?

ಒಳಗಿನ ಆಟವಾಡಿ ಬೇಸರಗೊಂಡ ಅರಿವು ಈಗ ಬಯಲುಆಟಕ್ಕೆ ಸಿದ್ಧವಾಯಿತು. ಈಗ ತಾನು ಗಾಳಿ ; ಎಲ್ಲಿಗೆಂದರೆ ಅಲ್ಲಿಗೆ ಹೋಗಬಹುದು, ಹೇಗೆಂದರೆ ಹಾಗೆ ಹಾರಬಹುದು. ಮೈಯೆನ್ನುವ ಹೊರೆಭಾರವಿಲ್ಲ ; ಮೆದುಳೆನ್ನುವ ಕೈಕೋಳವಿಲ್ಲ ; ಬೆಳಕೆಂದು ಅಳುಕಿಲ್ಲ ; ಹೊರಗೆಂದು ಅಂಜಿಕೆಯಿಲ್ಲ. ಮೈಯನ್ನು ಕೊಡವಿಕೊಂಡು, ಮೆದುಳನ್ನು ಅತ್ತ ಸರಿಸಿ, ಅರಿವು ಹೊರಹಾರಿತು. ಬಲು ದೂರ ಹಾರಿ ಹೋಗುವ ಹವಣಿಕೆ ಅದರದ್ದು. ಇನ್ನೇನು ಮೇಲೇರಬೇಕು ಎನ್ನುವಷ್ಟರಲ್ಲಿ, ಮುಗಿಲಿಂದ ಇಳಿಬಿದ್ದ ಬೆಳಕಿನ ಬಿಳಲೊಂದು ಆದನ್ನು ಅದರ ಮೈಯೆಡೆಯೇ ದೂಡಿತು. ಆಗ ಅರಿವು ಮತ್ತೊಮ್ಮೆ ಮೈಯನ್ನು ನೋಡಿತು. ಮರವಾಗಿ ನೆಲದ ಮೇಲೆ ಒರಗಿದೆ ; ದೈವದ ತಾಣದಲ್ಲಿ ತನ್ನ ಹೆಣ್ಣು ಒರಗಿದ್ದಿತಲ್ಲ, ಹಾಗೆ. ಮೆದುಳು ತ್ರಾಣವಿಲ್ಲದೆ, ಕಟ್ಟಿಗೆಯ

ತುಂಡಾಗಿ, ಮೈಯೊಳಗೆ ಬಿದ್ದುಕೊಂಡಿದೆ. ಮೈಯಲ್ಲಾಗಲೀ ಮೊದು ಕಾವಿಲ್ಲ, ಬೆಳಕಿಲ್ಲ. ಆದರೆ ಒಡಲು ಮಾತ್ರ ಇನ್ನೂ ಹಸಿಯಾಗಿದೆ, ನಿ ದುಡಿಯಂತೆ ಬಡಿದುಕೊಳ್ಳುತ್ತಿದೆ. ಮುಗಿಲಿಂದ ಇಳಿಬಿದ್ದ ಅರಿವನ್ನ ಯತ್ತ ದೂಡಿದ ಬೆಳಕಿನ ಬಳ್ಳಿ ಒದ್ದೆಯಾದ ಒಡಲ ಮೇಲೆ ಆತುಕೊಂಡಿದೆ.

ದೂರ ಹಾರಿ ಹೋಗಲು ಹವಣಿಸಿದ ಅರಿವು ಒಡಲ ಕೆಸರಲ್ಲಿ ತೊಡರಿಕೊಂಡಿದೆ. ಬೇರೆಲ್ಲೂ ಇರದ ಹಸಿ ಒಡಲಲ್ಲಿ ಮಾತ್ರ ಯಾತಕ್ಕೆ ? ಅದು ತನ್ನನ್ನು ಬಳ್ಳಿಯಂತೆ ಕಾಲು ಕಟ್ಟುವುದು ಯಾತಕ್ಕೆ ? ಎಂದು ಅಚ್ಚರಿಪಟ್ಟು ಕೊರಗರ ದೇರೆಯ ಅರಿವು ಕೆಸರಾದ ಒಡಲನ್ನೇ ದಿಟ್ಟಿಸಿ ನೋಡಿತು. ತಿಳಿನೀರಲ್ಲಿ ಮೋರೆ ಕಾಣುವಂತೆ, ಅಲ್ಲಿ ಅದು ಕಂಡದ್ದು ಏನೆಂದರೆ ದೈವದ ತಾಣದಲ್ಲಿ, ಹಂದಿಯು ಬಿರುಗಣ್ಣು ಬಡಿದು, ನೆಲಕ್ಕೆ ಬಿದ್ದ ತನ್ನ ಹೆಣ್ಣನ್ನು ! ಅದಕ್ಕೆ ಮೊದಲು ಹಗಲಿರುಳೂ ದಿನದಿನವೂ ಒಡನಾಡುತ್ತಿದ್ದ ಹೆಣ್ಣನ್ನು ! ಕಾರಣ ಕಾಣದೆ, ತಾನು ಯಾರಿಗಾಗಿ ಕೊರಗಿ, ಸೊರಗುತ್ತಿದ್ದನೋ ಆ ಹೆಣ್ಣನ್ನು ! ಈ ಮನದನ್ನೆ ದಿಟವಾಗಿ ತನ್ನ ಒಡಲಲ್ಲೇ ಇಷ್ಟು ದಿನ ಇದ್ದಳೇ ? ಅವಳನ್ನು ಅರಸುತ್ತ ಕಾಡಲ್ಲೆಲ್ಲ ಅಲೆದಾಡಿದನಲ್ಲ ! ಬೆಟ್ಟಗುಡ್ಡಗಳಲ್ಲಿ ಸುತ್ತಾಡಿದನಲ್ಲ !

ಅರಿವು ಒಮ್ಮೆಲೆ ಒಡಲ ಕಡೆ ಹರಿಹಾಯಿತು ; ಹೆಣ್ಣನ್ನು ಒಡನೆಯೇ ಹಿಡಿದುಕೊಳ್ಳುವ, ಬಿಗಿದಪ್ಪಿಕೊಳ್ಳುವ ಹಂಬಲ ಅದಕ್ಕೆ. ಆದರೆ ಬೆಳಕನ್ನು ಹಿಡಿಯುವುದು ಉಂಟೆ ? ಅದೂ ನೆರಳಲ್ಲಿನ ಬೆಳಕು ? ತಿಳಿನೀರಲ್ಲಿ ಕಂಡದ್ದು ಕೊಳೆ ನೀರಲ್ಲಿ ಕಂಡೀತೆ ? ಒಡಲು ಅರಿವನ್ನು ಹಿಡಿದು ಎಳೆಯಿತೋ, ಅರಿವೇ ಒಡಲನ್ನು ಬಿಗಿದು ಹಿಡಿಯಿತೋ, ಅಂತೂ ಒಡಲೂ ಅರಿವೂ ಒಂದನ್ನೊಂದು ಬಿಡಲಾರದೆ ಕೂಡಿಕೊಂಡುವು. ಒಲುಮೆಗೆ ಉಸಿರೇ ಅರಿವು ; ಅದಕ್ಕೆ ಆಸರೆಯೇ ಒಡಲು. ಒಲುಮೆಯಿರುವಲ್ಲಿ ಎರಡೂ ಕೂಡಿರದೆ ಹೇಗೆ ? ಎರಡೂ ಕೂಡಿಕೊಂಡರೆ ಮೈ ಮೂಡಿಕೊಳ್ಳದೆ ? ಮೈ ಮೂಡಿಕೊಂಡಾಗ ಅರಿವು ಹಗುರಾಗಿ ಹಾರಾಡುವುದು ಹೇಗೆ ? ಮುಗಿಲಿಂದ ಇಳಿಬಿದ್ದ ಬೆಳಕಿನ ಬಿಳಲು ದಿಟವಾಗಿ ಒಲುಮೆಯ ಬಳ್ಳಿ ಒಡಲಿಂದಲೇ ಚಿಗುರೊಡೆದು ಮುಗಿಲಿಗೆ ಏರಿದ್ದು ಮತ್ತೆ ಬೆಳಕಾಗಿ ಇಳಿದು ಬಂತು ಅಷ್ಟೆ. ಮೈಯೇ ಮುಗಿಲಿಗೆ ಏರಲಾರದು ; ಮಣ್ಣಲ್ಲವೆ ಅದು ? ಒಡಲು ಹೊರಗೆ ಹೋಗಲಾರದು ; ಒಳಗೆ ತಾನೆ ಅದು

ಇರುವುದು ? ಒಳಗೆ-ಹೊರಗೆ, ನೆಲ-ಮುಗಿಲು ಸೇರುವುದು ಅರಿವಿಂದಲೇ, ಅರಿವಲ್ಲೇ. ಆದರೆ ಒಲುಮೆಯು ಹೊರೆಯನ್ನು ಹೊತ್ತ ಅರಿವು ದೂರ ಹಾರಲಾರದು, ಎತ್ತರ ಏರಲಾರದು. ಗಾಳಿಯಾದರೇನು, ಸುಳಿಯಲ್ಲಿ ಸಿಕ್ಕ ಮೇಲೆ ?

ಮೈಯಲ್ಲಿ ಮತ್ತೆ ಎಚ್ಚರ ಮೂಡಿತು. ಕೊರಗರ ದೇರೆ ಉಸಿರಾಡುತ್ತ ಕಣ್ಣು ತೆರೆದು ಸುತ್ತಲೂ ನೋಡಿದ. ತನ್ನ ಹೆಣ್ಣಿನ ಹಂಬಲ ಹಿರಿದಾಗಿ ಹಬ್ಬಿಕೊಂಡಿತ್ತು.

(5)

ದೈವದ ತಾಣದಲ್ಲಿ ಮಾಯದ ಹಂದಿಯನ್ನು ಕಂಡು ಕಟ್ಟೆಗೆಯಾಗಿ ಕೆಳಗೆ ಬಿದ್ದವಳು ಮತ್ತೆ ಎದ್ದಿರಲಿಲ್ಲ. ಅವಳನ್ನು ತನ್ನ ಹೆಗಲ ಮೇಲೇ ಹೊತ್ತು ಇವನು ಕೊಪ್ಪಕ್ಕೆ ತಂದುದಲ್ಲವೆ ? ಗುರಿಕಾರನ ಮಾತಿನಂತೆ ಆ ಮರಗಟ್ಟಿದ ಮೈಯನ್ನು ಮಣ್ಣು ಮಾಡಲಿಲ್ಲವೆ ? ಮುಂದೆ ಅವಳನ್ನು ಕಣ್ಣಾರೆ ಕಾಣಲಿಲ್ಲ, ಕೈಯಾರೆ ಮುಟ್ಟಲಿಲ್ಲ, ಅವಳೊಂದಿಗೆ ಮನಸಾರೆ ಮಾತನಾಡಲಿಲ್ಲ. ಕನಸಿನಲ್ಲಿ ಕಾಣಿಸಿಕೊಳ್ಳುವಳು ಅಷ್ಟೆ ; ಎಚ್ಚರವಾದರೆ ನೆನಪಷ್ಟೆ ಬಿಟ್ಟು ಮರೆಯಾಗುವಳು. ಎಲ್ಲಿ ಹೋದಳೋ ಎಂದು ಎಲ್ಲೆಲ್ಲೂ ಅರಸಿದರೂ ದೊರಕಲಿಲ್ಲವಲ್ಲ ? ಮೈ ಮರೆಯಾದ ಮೇಲೆ, ಹೊರಗಿದ್ದವಳು ಈಗ ಒಳಗೆ ಬಂದು, ತನ್ನ ಒಡಲಲ್ಲೇ ಅಡಗಿಕೊಂಡಳೋ ? ಒಳಗೇ ಇದ್ದವಳಿಗಾಗಿ ತಾನು ಹೊರಗೆಲ್ಲ ಇಷ್ಟು ಹುಡುಕಾಡಿದೆನೋ ?

ಇಷ್ಟೆನ್ನುವಷ್ಟರಲ್ಲಿ, ಹೊರಗಿಂದ ನಗೆಯೊಂದು ಎರಗಿಬಂದು ಅವನನ್ನು ಬಡಿಯಿತು. ನಗೆಯ ಅಲೆಯನ್ನು ಅನುಸರಿಸಿ ಅವನ ಎಚ್ಚರ ಹೊರಹೊರಟಾಗ ನೇರಾಗಿ ಎದುರಾದುದು ಗುರಿಕಾರನ ಮೋರೆಯೇ. ಅಲ್ಲಿಂದಲೇ ನಗೆ ಉಕ್ಕಿ ಹೊರಗೆ ಹರಿಯುತ್ತಿದ್ದುದು. ಗುರಿಕಾರನೂ ನಗುವುದುಂಟೆ ? ಹಾಗೆ ಅವನು ನಗೆಯಾಡಿದುದನ್ನು ಕೊರಗರ ದೇರೆ ಕಂಡ ನೆನಪೇ ಇರದು. ತನ್ನ ಹೆಣ್ಣು ಮರವಾಗಿ ಬಿದ್ದಿರುವಾಗ, ಗುರಿಕಾರ ಬಂದು ಆ ಮೈಯನ್ನು ಒಪ್ಪ ಮಾಡೆಂದು ಹೇಳುವಾಗ, ಕೊರಗರ ದೇರೆ ಅವನನ್ನೇ ದಿಟ್ಟಿಸಿ ನೋಡುವಾಗ, ನಗೆಯೇನು ಕಂಡಿರಲಿಲ್ಲ. ಈಗೇನು ನಗೆ ? 'ದೈವದ ತಾಣವೆಂಬುದನ್ನು

ಅರಿಯೆಯಾ, ದೇರೆ ? ಅಲ್ಲಿಗೆ ಕಾಲಿಡಬಾರದು !' ಅವನಾಡಿದ ಈ ಮಾತು ಮತ್ತೆ ಆ ಮೊರೆಯಿಂದಲೇ ಮೊಳಗಿತು ; ನಗೆಯು ನಡುವೆ ಈಜಾಡಿತು.

ದೈವದ ತಾಣವೆಂಬ ಮಾತು ಕೇಳಿದೊಡನೆ. ಕೊರಗರ ದೇರೆ ಬೆಚ್ಚಿದ. ತನ್ನ ಮೈ ಒರಗಿರುವ ನೆಲವೇ ದೈವದ ತಾಣವಾಗಿದ್ದೀತೋ ? ದೈವದ ತಾಣ

ದಲ್ಲಲ್ಲದೆ ಬೇರೆಲ್ಲಿಯಾದರೂ ಮಾಯದ ಕುದುರೆ, ಸಾವಿನ ಮೋರೆ, ಗುರಿಕಾರನ ನಗೆ ತೋರಿಕೊಳ್ಳುವುದುಂಟೆ ? ಮೈಯಿಂದ ಅರಿವು ಹೊರಗಾಗಿ ಹಿಂದಿರುಗುವುದುಂಟೆ ? ಇದೇ ದೈವದ ತಾಣವೆಂದಾದರೆ ತಾನು ಇಲ್ಲಿಗೆ ಬಂದುದು ಹೇಗೆ?

ದೈವದ ತಾಣವನ್ನು ಕಾಣುವ ಕುತೂಹಲ ಅವನಿಗೆ ಮೊದಲು ಇದ್ದಿತಾದರೂ, ಈಗ ಅಲ್ಲಿಂದ ಕಾಲು ತೆಗೆಯುವ ಕಾತರ ಹೆಚ್ಚಾಯಿತು. ಇಲ್ಲಿ ಕಾಲಿಡಬಾರದೆಂದು ತಾನೆ ಗುರಿಕಾರನ ನುಡಿಕಟ್ಟು ? ದೈವದ ತಾಣದಲ್ಲಿ ಮನುಷ್ಯರು ಕಾಲಿಡಬಾರದು ಎನ್ನುತ್ತ ಗುರಿಕಾರ ಅದಕ್ಕೆ ಹೇಳಿದ ಕಾರಣ ದೈವಗಳು ಮುನಿಯುವುವು ಎಂದು. ತನಗೆ ಈಗ ಒದಗಿರುವ ಸಂಕಟಕ್ಕೆ ದೈವಗಳ ಮುನಿಸೇ ಕಾರಣವೋ ? ತಾನು ಕಂಡ ಕುದುರೆ, ಹಂದಿ, ಎಮ್ಮೆ ಇವೆಲ್ಲ ದಿಟವಾಗಿ ದೈವಗಳೇ ಇರಬೇಕೆಂದು ಅವನಿಗೆ ತೋರಿತು ; ಅವೆಲ್ಲ ಕಣ್ಣುಗಳಿಂದ ಕಿಡಿ ಕಿಡಿ ಕೆಂಡವನ್ನು ಕಾರಿದುದೇನೋ ದಿಟ ; ಅದನ್ನು ಕಂಡು ತಾನು ಅಂಜಿದುದೂ ದಿಟವೇ.

ಆದರೆ ದೈವದ ತಾಣವೆಂದರೇನು ? ಅಲ್ಲಿ ಮನುಷ್ಯ ಕಾಲಿಡಬಾರದೆಂದು ಕಟ್ಟು ಯಾತಕ್ಕೆ ? ದೈವ ಮನುಷ್ಯನನ್ನು ಕಂಡು ಮುನಿಯುವುದೇನು ? ದೈವ ಮುನಿಯುವುದೆಂದಾದರೆ ಒಲಿಯುವುದೂ ಉಂಟೋ ? ಕೊರಗರ ದೇರೆ ತನ್ನ ತೀರ ಎಳವೆಯಲ್ಲಿ, ಮಾತು ಬರುವ ಮೊದಲೇ, ಎದ್ದು ನಿಲ್ಲುವ ಮೊದಲೇ, ದೈವಗಳ ವಿಚಾರ ಕೇಳಿದ್ದುದುಂಟು. ಅಷ್ಟು ಹಿಂದಿನ ನೆನಪು ಅವನಿಗೆ ಬುದ್ಧಿ ತಿಳಿದ ಮೇಲೆ ಉಳಿದಿರಲಿಲ್ಲ. ಈಗ ಅದು ಮರುಕಳಿಸಿತು. ಆಗ ತಾನಿನ್ನೂ ಹಸುಗೂಸು ; ನೆಲದ ಮೇಲೇ ಮಲಗಿರುತ್ತ, ಸುತ್ತ ಇದ್ದವರ ಮಾತು ತನ್ನ ಕಿವಿಗೆ ಬೀಳುತ್ತಿತ್ತು. ಮಾತಿನ ಅರ್ಥ ಅವನಿಗೆ ಆಗ ಆಯಿತೋ ಏನೋ ; ಬೆಳೆದ ಮೇಲಂತೂ ಈ ಮಾತು ಎಲ್ಲೋ ಮನಸ್ಸಿನ ಒಳಪದರದಲ್ಲಿ ಅಡಗಿಕೊಂಡು ನೆನಪಿನಿಂದ ಜಾರಿಹೋಯಿತು. ಮತ್ತೆ ಜನರ ನಡುವೆ ಅವನ ಬಾಳು ಇರದೆ, ಸುತ್ತ ಇದ್ದವರ ಮಾತು ಅಷ್ಟಕ್ಕೇ ನಿಂತಿತು. ಹೀಗೆ ತಾನು ತುಂಬ ಹಿಂದೆ ಕೇಳಿದ ಮಾತು ದೈವಗಳನ್ನು ಕುರಿತದ್ದು. ತನ್ನ ಜನ ಕಲ್ಲುರ್ಟಿ ಭೂತವನ್ನು ನಂಬಿದ್ದವರು ; ಅದಕ್ಕೆ ಆಗಾಗ ಹರಕೆ ಹೊರುತ್ತಿದ್ದವರು. ನೇರವಾದ ದಾರಿ ಯಾವುದೆಂದು ಅರಿಯದಿದ್ದಾಗ ಜೋಗಿಪುರುಷನೆಂಬ ದೈವವನ್ನು

ಕರೆದು ಕೇಳುವರು. ಕೊರಗರ ಕೇರಿ ಇರುತ್ತಿದ್ದ ಕಡೆ ಜಾರಂದಾಯೆಯೆನ್ನುವ ಕುದುರೆಭೂತ ಅಡ್ಡಾಡುತ್ತಿರುವುದನ್ನು ನೋಡಿದ್ದವರಿದ್ದರು. ಪಂಜುರ್ಲಿಯೆನ್ನುವ ಹಂದಿಯ ಮೈಯ ಹೊಸ ದೈವ ಗಟ್ಟದ ಮೇಲಿಂದ ಆಗಲೇ ಬಂದಿದೆಯೆಂದೂ ಹೇಳುವರು. ಮತ್ತೆ ಏನೇನೋ ದೈವಗಳ ಆಟವನ್ನು ಬಣ್ಣಿಸುವರು ; ಅವುಗಳ ಕಾರಣಿಕವನ್ನು ಎತ್ತಿ ಆಡುವರು.

ಕೊರಗರ ದೇರೆ ಕೂಸಾಗಿ ಇವನ್ನೆಲ್ಲ ಕೇಳುವಾಗ ಅವನಿಗೆ ತಿಳಿಯುತ್ತಿತ್ತು. ಕಿವಿಗೊಟ್ಟು ಕೇಳುತ್ತಿದ್ದ ; ಮೈಯಾರೆ ನಂಬುತ್ತಿದ್ದ. ಒಂದೊಂದು ದೈವದ ಹೆಸರು ಹೇಳಿ ಅದರ ಆಟವನ್ನು ಹಿರಿಯರು ತಿಳಿಸುತ್ತಿದ್ದಾಗ ಇವನ ಕಣ್ಣೆದುರೇ ಆ ದೈವ ತೋರಿಕೊಳ್ಳುವುದು. ಅದೇನು ಇದೇನು, ಇದು ಹೇಗೆ ಅದು ಹೇಗೆ, ನಂಬುವುದೋ ಬಿಡುವುದೋ, ಅದರಿಂದ ಉಪಕಾರವೋ ಉಪದ್ರವವೋ, ಇದರಿಂದ ಒಳಿತೋ ಕೆಡುಕೋ, ಇದು ವರ ಕೊಡುವುದೋ ಅದು ಮಾರಿಯಾಗುವುದೋ, ಹೀಗೆಲ್ಲ ಹಲವಾರು ಬಗೆಗಳಲ್ಲಿ ಬುದ್ಧಿ ಒಡೆದು ನೂರಾರು ಚೂರಾಗುವ ಮೊದಲೇ ತಿಳಿದುಕೊಂಡ ಸಂಗತಿ ಅದು. ಬೆಳೆದ ಮೇಲೆ, ತಿಳಿದುದನ್ನು ಮಾತಿನಿಂದ ಮೂಡಿಸಿ, ಮಾತುಗಳಿಂದ ಕಟ್ಟಿ, ಮಾತುಗಳಿಂದಲೇ ಕೆದಕಿ, ಅದರಿಂದ ಎದ್ದ ಧೂಳು ಒಡಲ ಮೇಲೆ ತುಂಬಿಕೊಳ್ಳುವುದು, ಮನಸ್ಸನ್ನು ಮರೆಮಾಡಿ ಮುಚ್ಚುವುದು. ಎಲ್ಲರಂತೆ ಕೊರಗರ ದೇರೆ ಬೆಳೆಯಲಿಲ್ಲವಾಗಿ ಅವನ ಒಡಲಲ್ಲಿ ಧೂಳು ತುಂಬಿರಲಿಲ್ಲ, ಮನಸ್ಸು ಧೂಳಿನಲ್ಲಿ ಮರೆಯಾಗಿರಲಿಲ್ಲ. ಮೈ ಬೆಳೆದು ನಿಂತಿದ್ದರೂ, ಮನಸ್ಸು ಎಳೆಯ ಮಗುವಿನದೇ. ಇದಕ್ಕೆ ಅವನ ಬಾಳು ಬಹುಮಟ್ಟಿಗೆ ಒಂಟಿಯಾಗಿ ಸಾಗಿದ್ದುದೇ ಕಾರಣ. ಮನಸ್ಸು ಹೀಗೆ ಅಮಾಯಕವಾಗಿ ಉಳಿದುಕೊಂಡಿದ್ದರಿಂದಲೇ, ಎಳೆವೆಯ ನೆನಪು ಈಗ ಮರುಕಳಿಸುವುದಾಯಿತು.

ನೆನಪು ಮರುಕಳಿಸಿತೋ ಇಲ್ಲವೋ, ಅವನ ಸುತ್ತಲೂ ಎಲ್ಲೆಲ್ಲೂ ದೈವಗಳು ತೋರಿಕೊಳ್ಳತೊಡಗಿದವು. ದೈವಗಳೆಲ್ಲ ಅಂಜಿಸುವಂಥವೇನಾಗಿರಲಿಲ್ಲ. ತಾನು ಬಿದ್ದುಕೊಂಡಿದ್ದ ನೆಲದ ಹತ್ತಿರವೇ ಕೂತಿದ್ದ ಜೋಗಿಪುರುಷ ದೈವ ಈಗ ಕಣ್ಣಿಗೆ ಬಿತ್ತು. ಕುಳಿತಿದ್ದರೂ ಅದರ ಮೈ ಮಾತ್ರ ನೋಡಿದಷ್ಟು ಎತ್ತರವೂ ಇತ್ತು. ತಲೆಯ ಮೇಲಿನ ಮುಡಿ ಮುಗಿಲನ್ನು ಮುಟ್ಟಿತ್ತು.

ತುಂಬ ಹಿಂದೆ, ಬಲುದೂರದ ಮಂಜಿನ ಬೆಟ್ಟದ ನೆರೆಯಲ್ಲಿದ್ದವನು, ಜೋಗಿಯಾಗಿ ತೆಂಕಣದ ಕಡೆ ನಡೆದು ಬಂದು, ಗಟ್ಟವಿಳಿದು ಈ ಕಾಡಿಗೆ ಬಂದವನಲ್ಲವೆ ಇವನು ? ಮೊದಲಿಗೆ ಮಣ್ಣಿನ ಮೈಯಿದ್ದವನು, ಮಣ್ಣು ಮುಚ್ಚಿದ ಕಣ್ಣಿದ್ದವನು. ಜೋಗದ ಬಲ್ಮೆಯಿಂದ ಮೈಯನ್ನು ಕಳೆದುಕೊಂಡು ಗಾಳಿಯಾದ ; ಕಣ್ಣಿನ ಮಣ್ಣನ್ನು ಕೊಡವಿಕೊಂಡು ಬೆಳಕಾದ. ಆಗಲೂ ದೇರೆ ಮೈಯಿದ್ದವನೇ. ತನ್ನ ನೆರೆಯವರೆಲ್ಲ ಇವನನ್ನು ಮೈಯಿದ್ದಾಗ ಜೋಗಿ ಪುರುಷನೆಂದೂ, ಗಾಳಿಯಾದ ಮೇಲೆ ದೈವವೆಂದೂ ಬಗೆಯುತ್ತಿದ್ದುದು ನೆನಪಿಗೆ ಬಂದಿತು. ಗಾಳಿಯಾದನೆಂದು ಜನ ಇವನನ್ನು ದೂರಮಾಡಲಿಲ್ಲ, ಇವನಿಗೆ ಅಂಜಿಕೊಳ್ಳಲಿಲ್ಲ. ಬೇಕೆಂದಾಗ ಅವನನ್ನು ನೆನೆದುಕೊಳ್ಳುವರು, ಅವನ ನೆರವನ್ನು ಕುರಿಯುವರು ; ಆಗ ಇವನೂ ಬರುವನು, ತೋರಿಕೊಳ್ಳುವನು, ನೆರವಾಗುವನು, ದಾರಿ ತೋರುವನು. ಆದರೆ ಮಣ್ಣಿನ ಮೈಯಿಂದ ಅಲ್ಲ, ಎಚ್ಚರದಲ್ಲಿ ಅಲ್ಲ.

ಈ ಜೋಗಿಪುರುಷ ಮೈಯಿಂದ ಇದ್ದಾಗಲೂ ದೇರೆ ನೋಡಿದ್ದ ನೆನಪು ಬಂದಿತು. ಬೆತ್ತಲೆಯೇ ತಿರುಗಾಡುವನು ; ನಿಂತಲ್ಲಿಯೇ ನಿದ್ದೆ ಮಾಡುವನು ; ನಿದ್ದೆಯಲ್ಲಿಯೂ ಕಣ್ಣೆವೆ ಆಡಿಸದೆ ಎಚ್ಚರವಾಗಿಯೇ ಇರುವನು, ಎಚ್ಚರದಲ್ಲಿಯೂ ಕೆಳಗೇ ನೋಡುವನು ; ಬೊಗಸೆಯಲ್ಲಿಯೇ ಉಣ್ಣುವನು ; ಎಂದೂ ಮಿಂದವನಲ್ಲ ; ಒಂದು ಹುಳುವನ್ನೂ ಹಿಂಸೆ ಮಾಡಿದವನಲ್ಲ ; ದನಿಯೆತ್ತಿ ನುಡಿದವನಲ್ಲ ; ಹೆಣ್ಣನ್ನು ಕಣ್ಣೆತ್ತಿ ಕಂಡವನಲ್ಲ ; ತನ್ನದೆಂದು ಏನನ್ನೂ ಇರಿಸಿಕೊಂಡವನಲ್ಲ ; ಯಾರಿಂದ ಏನನ್ನೂ ಪಡೆದುಕೊಂಡವನಲ್ಲ ; ಹೊರಗಿಂದ ಬಂದ ಗಾಳಿ ಅವನ ಹೊಕ್ಕುಳಲ್ಲೇ ಇಂಗುವುದು, ಒಳಗಿಂದ ಹೊರಹೊರಟ ಉಸಿರು ಬಾನೆತ್ತರಕ್ಕೆ ಹಾರಿ ಅಲ್ಲಿ ಬೆರೆಯುವುದು, ಎರಡರ ನಡುವೆ ಅವನ ಒಡಲಲ್ಲಿ ಬಯಲು ; ಎಡವನ್ನೂ ಬಿಟ್ಟು ಬಲವನ್ನೂ ಬಿಟ್ಟು ನಟ್ಟನಡುವೆ ನಿಲ್ಲುವನು ; ಎರಡು ಕಣ್ಣುಗಳಿರುವ ಸೂಜಿಯಿಂದ ಹೊಲಿಯುವುದಾದೀತೆ ? ಬದುಕಿಗೆ ಒಂದೇ ದಾರಿಯಿರಬೇಕೆನ್ನುವನು ; ಊರೆಂದು ಕಾಣುವುದನ್ನು ಹಾಳು ಮಾಡಿ, ಹಾಳೆಂದು ಕಾಣುವುದನ್ನುಊರು ಮಾಡುವುದೇ ಆ ದಾರಿಯೆನ್ನುವನು.

ಅವನನ್ನು ನಂಬಿದವರು, ಅವನಂತೆ ನಡೆದುಕೊಂಡವರು ಈ ಕುಡುಮದ



ಕಾಡಿನಿಂದ ಕಡಲತೀರದ ಗುಡ್ಡ ಕದಲಿಯುವರೆಗೂ ಇದ್ದರು. ಜನ ಅವನನ್ನು ಜೋಗಿಯೆನ್ನುವರು, ಜಿನನೆನ್ನುವರು; ಸಿದ್ಧನೆನ್ನುವರು, ಶಿವನೆನ್ನುವರು; ನಾಥನೆನ್ನುವರು, ನಾಗನೆನ್ನುವರು; ಅನಿಮಿಷನೆನ್ನುವರು, ಅವಲೋಕಿತನೆನ್ನುವರು. ಗೋದಾವರೀ ತೀರದ ಚಂದ್ರಗಿರಿ ಅವನ ಹುಟ್ಟೂರಂತೆ, ಅವನ ಸಂಪ್ರದಾಯ ನಾಥವೆಂದು; ಹೀಗಾಗಿ ಚಂದ್ರನಾಥನೆಂದೂ ಅವನನ್ನು ಕರೆಯುವರು. ಅವನ ಹುಟ್ಟನ್ನು ಕುರಿತೊಂದು ಕಥೆ ಹೇಳುವರು—ಕಡಲಂತೆ, ಅದರಲ್ಲೊಂದು ಮೀನಂತೆ, ಅದರ ಬಸುರಿನಲ್ಲಿ ಬೆಳೆದನಂತೆ; ಬೆಳೆಯುತ್ತಲೇ ಸಿದ್ಧನಾದನಂತೆ; ಹೀಗೆ ಅವನನ್ನು ಮೀನನಾಥನೆಂದೂ ಕರೆಯುವರು, ಮತ್ಸ್ಯೇಂದ್ರನೆಂದೂ ಕರೆಯುವರು. ಜೋಗದ ತಿಳಿನೀರಲ್ಲಿ ಬಿಡಿಮೀನಾಗಿ ಹರಿದಾಡಿದ ಇವನು ಮೈಯಿಂದ ಮರೆಯಾದಾಗ ತುಂಬ ಕಾರಣಿಕವುಳ್ಳ ದೈವವೆನಿಸಿದ.

ದೇರೆಯ ಅರಿವು ಈ ನೆನಪಿನ ಅಲೆಗಳಲ್ಲಿ ಈಜಾಡಿತು. ಮುಂದೆ ತುಂಗಭದ್ರೆಯ ದಡದಿಂದ ಬಂದ ಗೋರಕ್ಷನಾಥ ಈ ಮೀನನಾಥಜೋಗಿಯನ್ನು ಸೇರಿಕೊಂಡು, ಅವನಿಂದ ತನ್ನ ದಾರಿಯನ್ನು ಕಂಡುಕೊಂಡುದೂ, ಕೇರಳದಲ್ಲಿ ಗೋರಕ್ಷ ತಿರುಗಾಡುತ್ತಿರುವಾಗ ಅಲ್ಲಿನ ದೊರೆಮಗಳೊಬ್ಬಳು, ಮಂಗಳೆಯೆಂಬ ಹೆಸರಿನವಳು, ಅವನನ್ನು ಮೆಚ್ಚಿಕೊಂಡು ಅವನೊಂದಿಗೆ ಕಡಲ ತೀರದ ಕದಲಿಗೆ ಬಂದು ಅಲ್ಲೇ ಉಳಿದುಕೊಂಡದ್ದು, ಜೋಗಿಗಳ ನೆಲೆಯೊಂದು ಅಲ್ಲಿ ನೆರೆದದ್ದು, ಇನ್ನೂ ಮುಂದೆ, ಆ ಜೋಗಿಗಳಲ್ಲೊಬ್ಬ ಅಣ್ಣಪ್ಪ ಅಥವಾ ಧರ್ಮನಾಥನೆಂಬುವನು ಮೂಲಪುರುಷ ಮೀನನಾಥನನ್ನು ಅರಸಿಕೊಂಡು ಈ ಕುಡುಮದ ಕಾಡಿಗೆ ಬಂದದ್ದು, ದೇರೆಯ ನೆನಪಿಗೆ ಬಂದುವು. ಆ ಧರ್ಮನಾಥನೂ ಈಗಿನ ದೇರೆಯೂ ಆಗ ಒಡನಾಡಿಗಳಾಗಿದ್ದುದೂ, ಧರ್ಮನಾಥನು ಜೋಗಿಪುರುಷ ದೈವದ ಸೇವೆಯಲ್ಲಿ ನಿಂತದ್ದೂ, ಅವನು ಸತ್ತ ಮೇಲೆ ದೈವವಾಗಿ ಭೂತನಾಥನೆಂದೂ ಅಣ್ಣಪ್ಪದೈವವೆಂದೂ ಜನರಲ್ಲಿ ವಾಡಿಕೆಯಾದುದೂ ದೇರೆಯ ನೆನಪಿಗೆ ಬಂದುವು.

(6)

ಅಣ್ಣಪ್ಪುವಿನ ನೆನಪು ದೇರೆಯ ಅರಿವಿನಲ್ಲಿ ಮೂಡಿಕೊಂಡೊಡನೆ ಜೋಗಿಪುರುಷದೈವದ ಅರಳಿದ ಕಣ್ಣಿಂದ ಕಿರುನಗೆ ಮತ್ತೊಮ್ಮೆ ಚಿಮ್ಮಿತು. ಕಣ್ಣಲ್ಲಿ

ವನ್ನು
ರು ;
ನ್ನು
ಂಪ್ರ
ರರು.
ಂದು
ಂತೆ ;
ದೂ
ವನು

ಂಗ
ನ್ನು
ದಲ್ಲಿ
ಂಬ
ಕಲಿಗೆ
ದ್ಧ,
ಂಬು
ಡಿಗೆ
ಗಿನ
ರುಷ
ಾಥ
ಪಿಗೆ

6)

ಾಗಿ
ಲ್ಲಿ



ಕಾಣಿಸಿಕೊಂಡ ನಗೆ ಮುಖವನ್ನೆಲ್ಲ ತುಂಬಿತು. ಮುಖವನ್ನು ತುಂಬಿಕೊಂಡ ನಗೆ ಮೈಯಲ್ಲೆಲ್ಲ ಹರಡಿಕೊಂಡಿತು. ದೇರೆಯೆದುರೇ ಕಾಣುತ್ತಿದ್ದ ಜೋಗಿ ಪುರುಷನ ರೂಪ ನಗೆಯಲ್ಲಿ ಮರೆಯಾಯಿತು, ನಗೆ ಅಲೆಅಲೆಯಾಗಿ ದೂರ ಸರಿಯಿತು. ದೇರೆಯ ಅರಿವು ಆ ಅಲೆಯೇರಿ ಮುಂದೆ ಸಾಗಿತು. ನೆಲದ ಮೇಲೆ ಬಿದ್ದಿದ್ದ ಮೈಯಿಂದ ಎದ್ದು ತನ್ನನ್ನು ಬಳಸಿಕೊಂಡಿದ್ದ ಬೆಳಕಿನ ಬಳ್ಳಿ ಬರುಬರುತ್ತ ತೆಳುವಾಗಿ ನೂಲಿನಂತಾಯಿತು ; ಬಳ್ಳಿಯಂತೆ ಬಳಸಿಕೊಂಡಿದ್ದದ್ದು ಅರಿವಿನಲ್ಲಿ ಬೆರೆತುಹೋಯಿತು. ಜೋಗಿಪುರುಷದೈವದ ನಗೆಯೋ, ಅಣ್ಣಪ್ಪ ದೈವದ ನೆನಪೋ, ದೇರೆಯ ಅರಿವನ್ನು ಮೈಯ ಸೆರೆಯಿಂದ ಬಿಡಿಸಿತು.

ನಗೆಯ ಅಲೆಯೇರಿ ಮುಂದೆ ಸಾಗುತ್ತಿರುವಾಗ, ಎಲ್ಲೆಲ್ಲೂ ಅಲೆಗಳೇ ! ಬರಿಯ ಅಲೆಗಳೋ, ಮೇಲೇರಿ ಕುಳಿತವರೂ ಇರುವರೋ ? ಎದುರಿಗೇ ತೇಲಿ ಹೋಗುತ್ತಿದ್ದ ಅಲೆಯೊಂದು ಎಲ್ಲಕ್ಕಿಂತ ದೊಡ್ಡದು. ಅದನ್ನೇ ದಿಟ್ಟಿಸಿ ನೋಡುವಾಗ ಅದು ಮಾಯದ ಕುದುರೆಯಂತೆ ಕಂಡಿತು. ಅದನ್ನೇರಿ ಕುಳಿತವನು ಕಾಣದಿದ್ದರೂ ಅವನ ತಲೆಯ ಮೇಲಿನ ಮುಂಡಾಸು ಕಾಣುತ್ತಿತ್ತು, ಸೊಂಟಪಟ್ಟಿಗೆ ಸಿಕ್ಕಿಸಿದ್ದ ನೋರೆಕತ್ತಿ ಕಾಣುತ್ತಿತ್ತು. ಈ ನೋಟವನ್ನು ಮೊದಲು ಕಂಡ ನೆನಪು ಮರುಕಳಿಸಿತು. ಮುಂಡಾಸನ್ನೇ ನೋಡುವಾಗ, ಅದು ಸುರುಳಿಸುರುಳಿಯಾಗಿ ಹರವಿಕೊಂಡು ದೇರೆಯ ನೆನಪಿನ ಅಂಗಳವನ್ನೆಲ್ಲ ತುಂಬಿತು. ಇದು ಧರ್ಮನಾಥ-ಅಣ್ಣಪ್ಪುವಿನ ಮುಂಡಾಸಲ್ಲವೆ ? ಹೀಗೆಂದುಕೊಂಡೊಡನೆ, ಸೊಂಟಪಟ್ಟಿಗೆ ಸಿಕ್ಕಿಸಿದ್ದ ನೋರೆಕತ್ತಿ ಮೇಲೆದ್ದು, ಹರವಿಕೊಂಡು ತೊಡರುತ್ತಿದ್ದ ಮುಂಡಾಸನ್ನು ಸೀಳಿ ದಾರಿ ಬಿಡಿಸಿತು.

ಮುಂದೆ ಸಾಗುತ್ತ ದೇರೆಯ ಅರಿವು ತಾನು ಏರಿದ್ದ ಅಲೆಯನ್ನೇ ನೋಡಿದಾಗ ಅದೂ ಕುದುರೆಯೇ ! ತನ್ನನ್ನೇ ನೋಡಿಕೊಂಡಾಗ ತಲೆಯ ಮೇಲೆ ಮುಂಡಾಸು ; ಸೊಂಟಪಟ್ಟಿಗೆ ಸಿಕ್ಕಿಸಿದ್ದ ನೋರೆಕತ್ತಿಯೂ ಇದೆ ! ಹಾಗಾದರೆ ತಾನೇ ಧರ್ಮನಾಥ-ಅಣ್ಣಪ್ಪುವೋ ? ಸುತ್ತ ನೋಡಿದರೆ, ಎಲ್ಲೆಲ್ಲೂ ಮುಂಡಾಸುಗಳೇ, ಎಲ್ಲೆಲ್ಲೂ ನೋರೆಕತ್ತಿಗಳೇ ! ಇವರೆಲ್ಲ ಧರ್ಮನಾಥ-ಅಣ್ಣಪ್ಪುಗಳೋ ? ಇಲ್ಲವೇ, ಅವನ ಬಂಟರೋ ? ಮುಂಡಾಸು, ನೋರೆಕತ್ತಿ

ಅವನ ಬಂಟರ ಗುರುತೆಂಥಾದರೆ ತಾನೂ ಅವನ ಬಂಟನಾದೆನೋ ? ಎಂದು ಕೊಳ್ಳುವಷ್ಟರಲ್ಲಿ ಸುತ್ತಲೂ ಸಡಗರ ಶುರುವಾಯಿತು. ಕೊಂಬು, ಕಹಳೆ, ಕೊಳಲು, ಡೋಲು, ಓಲಗ ಎಲ್ಲ ಒಮ್ಮೆಲೆ ಮೊಳಗಿದುವು. ಮುಂಡಾಸುಗಳು ಮುಂದೆ ಹಿಂದೆ ಜಗ್ಗಿದುವು, ನೋರೆಕತ್ತಿಗಳು ಕುಣಿದಾಡಿದವು. ಮರುಗಳಿಗೆ ಇದ್ದಕ್ಕಿದ್ದಂತೆ ಎಲ್ಲವೂ ಮರೆಯಾಯಿತು. ತನ್ನನ್ನು ತಾನು ನೋಡಿಕೊಂಡಾಗ, ತಾನೇರಿ ಕುಳಿತಿದ್ದ ಅಲೆಯೂ ಇಲ್ಲವಾಯಿತು ! ತನ್ನ ಅರಿವೊಂದೆ ಬರಿದಾಗಿ ಉಳಿಯಿತು.

ದೇರೆಯ ಅರಿವಿಗೆ, ದೈವದ ತಾಣದಲ್ಲಿ ಒಂಟಿಯಾಗಿ ಉಳಿದದ್ದರಿಂದ, ದಿಗಿಲಾಯಿತು. ಹೊರಗೆ ದೇರೆ ಕಾಡಿನಲ್ಲಿ ಒಂಟಿಯಾಗಿರುವಾಗ ಬೇಸರವಾಗಿದ್ದಿತಷ್ಟೆ ; ದಿಗಿಲಿರಲಿಲ್ಲ. ಈಗ ದೈವದ ತಾಣದಲ್ಲಿ ಬೇಸರವಿರದು ; ಭಯ. ಹಿಂದಕ್ಕೆ ಹೋಗಿ, ಬಿಟ್ಟುಬಂದ ತನ್ನ ಮೈಯಲ್ಲಾದರೂ ಸೇರಿಕೊಂಡರೆ ಆದೀತೋ ಎನಿಸಿತು. ಆದರೆ ಮೈಯನ್ನು ಬಿಟ್ಟು ಬಲು ದೂರ ಹಾರಿಬಂದುದು ನೆನಪಿಗೆ ಬಂತು. ಮೈಯ ಹತ್ತಿರವೇ ಇರದೆ ಇಷ್ಟು ದೂರ ಬಂದೆನೆಂದು ಭಯವಾಯಿತು. ಕಾಡಿನಲ್ಲಿ ಕೊಪ್ಪವಿದ್ದಂತೆ, ಮೈಯೂ ಒಂದು ರಕ್ಷೆ. ಅರಿವು ಮೈಯಳೊಗಿದ್ದರೇ ಅರಿವಿಗೆ ನೆಮ್ಮದಿ. ಮೈಗೇನೋ, ಅದು ಜಡವಾದುದರಿಂದ, ಅರಿವು ಬೇಕೆಂಬ ಬಯಕೆಯೂ ಇಲ್ಲ, ಅರಿವು ಹೋದರೆ ಭಯವೂ ಇಲ್ಲ. ಚೇತನಕ್ಕೆ ಜಡದ ಆಸರೆ ಬೇಕು ; ಜಡಕ್ಕೆ ಚೇತನದ ಅಗತ್ಯವಿದ್ದೀತೆ ? ಜಡದಲ್ಲಿ ತಾನೆ ಹಿಡಿಯುವ ಕೈ, ನಡೆಯುವ ಕಾಲು, ನುಡಿಯುವ ನಾಲಗೆ, ನೋಡುವ ಕಣ್ಣು ಎಲ್ಲ ಇರುವುದು ? ಕೈಯಿಲ್ಲದೆ ಹಿಡಿಯಬಹುದೆ ' ಕಾಲಿಲ್ಲದೆ ನಡೆಯಬಹುದೆ ? ಕಣ್ಣಿಲ್ಲದೆ ನೋಡಲಾದೀತೆ ? ನಾಲಗೆಯಿಲ್ಲದೆ ನುಡಿಯಬಹುದೆ ? ಅರಿವಿಲ್ಲದೆ ಕೈಹಿಡಿಯಲಾರದು, ಕಾಲು ನಡೆಯಲಾರದು, ಕಣ್ಣು ನೋಡಲಾರದು, ನಾಲಗೆ ನುಡಿಯದು, ದಿಟ. ಆದರೆ ನಡೆಯದೆ, ನೋಡದೆ, ನುಡಿಯದೆ ಅರಿವು ಇರುವುದಾದರೂ ಹೇಗೆ ? ತನ್ನ ಮೈಯ ಬಯಕೆ ಹೀಗೆ ಮೂಡಿಕೊಂಡಾಗ, ಬಿಟ್ಟು ಬಂದ ಮೈಯನ್ನು ಮತ್ತೆ ಅರಸುತ್ತ ಹೊರಟಿತು.

ಆಗ ಇದ್ದಕ್ಕಿದ್ದಂತೆ ಎದುರಿಗೆ ಜೋಗಿಪುರುಷದೈವ ಮತ್ತೆ ತೋರಿಕೊಂಡಿತು. ಅದರ ಕಣ್ಣಲ್ಲಿ ಅದೇ ನಗೆ; ಅಲೆಅಲೆಯಾಗಿ ಹರಿದು ನಾಲ್ಕೂ

ವ
ಹೀಗೆಂ
ಹರವಿಕೆ

ಕಡೆ ಹರಡಿಕೊಳ್ಳುತ್ತಿತ್ತು. ಅದರಲ್ಲಿ ಒಂದು ಅಲೆ ಹಿಗ್ಗಿಹಿರಿದಾಗಿ ತೇಲುತ್ತ ಮುಂದೆ ಬಂತು. ಅದರ ಒಡಲಿಂದ ಸರಸರ ಸದ್ದಾಗಿ "ದೈವದ ತಾಣವೆಂದು ಅರಿಯೆಯಾ? ಕಾಲಿಡಬಾರದು, ದೈವ ಮುನಿಯುವುದು" ಎಂಬ ಮಾತು

ನೊರೆಯಿತು. ನೆನಪು ಮರುಕಳಿಸಿ ದಿಟ್ಟಿಸಿ ನೋಡಿದಾಗ ಗುರಿಕಾರನ ಮೋರೆ ತೋರಿಕೊಂಡಿತು. ನೋಡುತ್ತ ನೋಡುತ್ತ ಗುರಿಕಾರನ ಮೋರೆ ಮಾರ್ಪಟ್ಟು

ಸುರುಗಿ ಹಿರಿದು ಶೂಲವಿರಿಸಿಕೊಂಡು ಓಲಗದಲ್ಲಿ ಕೂತ ದೈವವಾಯಿತು. ಇದು ಹೆಣ್ಣು ದೈವವೋ ಎಂದು ಎಣಿಸುವಷ್ಟರಲ್ಲಿ ಆ ದೈವ ಕಾಣಿಸಿಕೊಂಡಲ್ಲಿಯೇ, ದೇರೆಯು ದೈವದ ತಾಣದಲ್ಲಿ ಕಾಲಿರಿಸುವ ಮುಂಚೆ ಅವನೊಂದಿಗೆ ಕೂಡಿಯಾ

ಡುತ್ತಿದ್ದ ಹೆಣ್ಣು ಕಾಣಿಸಿಕೊಂಡಳು. ತನ್ನ ಹೆಣ್ಣು ಈಗ ದೈವವಾಗಿದ್ದಾಳೋ ಎಂದುಕೊಳ್ಳುವಷ್ಟರಲ್ಲಿ, ಹೆಣ್ಣಿದ್ದ ಕಡೆ ಮಿರಿಮಿರಿ ಮಿಂಚುವ ಕೋರೆದಾಡೆಗಳುಳ್ಳ ಕರಿಮೊಗದ ಆನೆಯ ಮೈ ಹಂದಿ ದಡಕ್ಕನೆ ಎದ್ದುನಿಂತಿತು.

ಅದರ ತಲೆಯ ಮೇಲೆ ಮುಡಿ ; ಮುಡಿಯ ಮೇಲೆ ಅಣಿ ; ಅಣಿಯಿಂದ ಇಳಿಬಿದ್ದ ಎಳೆ ಪಿಂಗಾರದ ಹೂಗಳ ಮಾಲೆ ಕೊರಳೊಳಗೆ ; ಬಲಗೈಯಲ್ಲಿ ಬಿಚ್ಚುಕತ್ತಿ, ಎಡಗೈಯಲ್ಲಿ ಗಣಗಂಟೆ. ಎಳೆಯ ಪಿಂಗಾರದ ಹೂಗಳ ಪರಿಮಳ ತಲೆಗೆ ಮತ್ತೇರಿಸುವಂಥಾದ್ದು. ಗಂಟೆಯ ಗಣಗಣ ಕಿವಿಗೆ ಜೋಮು ಹಿಡಿಸುವಂಥಾದ್ದು. ಹಿರಿದ ಕತ್ತಿಯ ಅಲುಗಾಟ ಗಡಗಡ ಮೈನಡುಗಿಸುವಂಥಾದ್ದು. ಸೊಂಟಪಟ್ಟಿಗೆ ಕಟ್ಟಿದ್ದ ಕಿರುಗಂಟೆಗಳ ಉಲಿ, ಕಾಲಿಗೆ ಕಟ್ಟಿದ್ದ ಗಗ್ಗರದ ಸದ್ದು ಆ ದೈವದ ಕುಣಿತವನ್ನು ಎತ್ತಿತೋರಿಸುತ್ತಿದ್ದುವು. ಬೆನ್ನನ್ನು ಬಾಗಿಸಿ, ನಡುವನ್ನು ಬಳುಕಿಸಿ, ಕಾಲನ್ನು ಕೊಂಕಿಸಿ, ತಲೆಯನ್ನು ತೂಗುತ್ತ ಕುಣಿಯುತ್ತಿದ್ದ ಪಂಜುರ್ಲಿ ದೈವದ ಹೆಜ್ಜೆ ನೆಲವನ್ನೆ ನಡುಗಿಸಿತು ; ಅಡವಿಯಲ್ಲೆಲ್ಲ ಅದರಿತು, ಮುಗಿಲು ಮುಟ್ಟಿತು.

ಮೈಯಿರದ ಅರಿವೂ ಭೂತದ ಈ ಅಬ್ಬರಕ್ಕೆ ಬೆದರಿತು ; ಬಿರುಗಾಳಿಗೆ ತರಗೆಲೆ ತೂರುವಂತೆ ತರತರನೆ ಹರಿದಾಡಿತು. ಅರಿವಿನ ಕಣ್ಣಿರದ ಬರಿನೋಟವು ಕುರುಡಾಯಿತು ; ಮಂಜು ಮುಸುಕಿದಂತೆ ಇಂಗಿಹೋಯಿತು. ಅರಿವಿಗೂ ಅರಿವುತಪ್ಪಿ ಮರವಾಗಿ ಬಿತ್ತು.

(7)

ಭೂತದ ಕುಣಿತ ಎಷ್ಟು ಹೊತ್ತು ನಡೆಯಿತೋ ತಿಳಿಯದು. ಕೊರಗರ ದೇರಿಯ ಮೈ ಎಚ್ಚರ ತಿಳಿದೆದ್ದಾಗ ಭೂತ ಮರೆಯಾಗಿತ್ತು, ದೈವಗಳ ಆಟ ಮುಗಿದಿತ್ತು. ದೇರಿಯ ಮೈಯೇನೋ ಸೋತು ಸೊರಗಿ ಅಲ್ಲೇ ಒರಗಿತ್ತು. ಆದರೆ ಒಡಲ ಮಿಡಿತ ಅಡಗಿತ್ತು, ಮನಸ್ಸಿನ ತುಡಿತ ತಣ್ಣಗಾಗಿತ್ತು ; ಬದುಕಿನ ಒಳಬೀಡಿನಲ್ಲಿ ನೆಮ್ಮದಿಯ ತಂಗಾಳಿ ಮೆಲ್ಲನೆ ಬೀಸುತ್ತಲಿತ್ತು. ದೇರೆ ಮೈಕೊಡವಿಕೊಂಡು ಎದ್ದ. ಇನ್ನಾದರೂ ದೈವದ ತಾಣದಿಂದ ಕಾಲು ತೆಗೆಯಬೇಕೆಂದು

ಅವನಿಗನಿಸಿತು. ದೈವದ ತಾಣದಲ್ಲಿ ಕಾಲಿಡಬಾರದು, ಕಾಲಿಟ್ಟರೆ ದೈವ ಮುನಿಯುವುದು ಎಂದು ಗುರಿಕಾರ ಅಂದ ಮಾತು ಅವನ ನೆನಪಿನಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿತ್ತು. ಆದರೆ ಇದೇ ದೈವದ ತಾಣದಲ್ಲಿ ತನ್ನ ಹೆಣ್ಣನ್ನು ಒಮ್ಮೆಯಾದರೂ ಕಾಣುವುದಾಯಿತಲ್ಲ? ಎಂದ ಮೇಲೆ, ದೈವ ಮುನಿಯುವುದರ ಬದಲು ತನ್ನನ್ನು ಕಂಡು ಒಲಿಯಿತೆಂದೇ ಅರ್ಥವೋ?

ದೇರೆ ತನ್ನ ಹೆಣ್ಣನ್ನು ಕಂಡುದೇನೋ ದಿಟ. ಆದರೆ ಅವಳನ್ನೇನು ಮುಟ್ಟಲಿಲ್ಲ; ಅವಳೊಂದಿಗೆ ಹಿಂದಿನಂತೆ ಮಾತನಾಡಲಿಲ್ಲ, ಓಡಿಯಾಡಲಿಲ್ಲ, ಉಂಡು ನಲಿಯಲಿಲ್ಲ. ಅವಳು ಮೈಯಿಂದ ಇರುವವಳೋ, ಗಾಳಿಯಂತಾದವಳೋ? ತನ್ನಂತೆ ಎಚ್ಚರವಿದ್ದವಳೋ, ಅರಿವು ಜಾರಿದವಳೋ? ಜೋಗಿ ಪುರುಷನಿದ್ದಲ್ಲಿ ಅವಳು ತೋರಿಕೊಂಡಳು, ಅವಳಿದ್ದಲ್ಲಿ ಹಂದಿಮೋರೆಯ ಭೂತ ಕಾಣಿಸಿಕೊಂಡು ಕುಣಿಯಿತು ಎಂಬುದಷ್ಟೆ ಅವನ ನೆನಪಿನಲ್ಲಿ ಉಳಿದಿತ್ತು. ಹಿಂದೆ, ತಾವಿಬ್ಬರೂ ಅಡವಿಯಲ್ಲಿ ಒಡನಾಡುವಾಗ ಆನೆಯ ಮೈ ಹಂದಿಯನ್ನು ಕಂಡೇ ತಾನೇ ಅವಳು ಅರಿವು ತಪ್ಪಿ ಕೆಳಗುರುಳಿದ್ದು? ಹಾಗೆ ಆಗ ಮೈಯನ್ನು ಬಿಟ್ಟವಳು ಆ ಹಂದಿಯಲ್ಲೇ ಸೇರಿಕೊಂಡುಹೋದಳೋ? ತಾನೇ ಹಂದಿಯಾಗಿ ಬಿಟ್ಟಳೋ? ಅದು ಮಾಯದ ಹಂದಿಯೇ ಎನ್ನುವುದರಲ್ಲಿ ಇನ್ನು ಸಂಶಯವೇನು? ಈಗ, ತಾನು ಎಚ್ಚರ ತಿಳಿದು ಏಳುವ ಮೊದಲು ಹಂದಿಯ ಕುಣಿತವನ್ನು ಕಂಡಾಗ ತನಗಾದುದಾದರೂ ಏನು? ಅರಿವು ತಪ್ಪಿ ಬೀಳಲಿಲ್ಲವೆ? ಎಚ್ಚರ ತಿಳಿದು ಏಳುವಾಗ ಹಂದಿಯೂ ಇಲ್ಲ, ಅದರ ಕುಣಿತವೂ ಇಲ್ಲ! ಎಲ್ಲಿ ಹೋಯಿತು? ತನ್ನಲ್ಲಿಯೇ ಅಡಗಿಕೊಂಡಿತೋ? ತಾನೇ ಅದರಲ್ಲಿ ಸೇರಿಕೊಂಡಂತೆ ಆಯಿತೋ? ದಿಟವಾಗಿ ಈಗ ತಾನೆ ಹಂದಿಯೋ?

ಹೀಗೆಂದು ಆಲೋಚನೆ ಅವನ ಮನಸ್ಸಿನ ಅಂಗಳದಲ್ಲಿ ಅತ್ತಲಿಂದ ಇತ್ತ ಭೂತ ಕುಣಿಯುವಂತೆಯೇ ಸುಳಿದಾಡಿತು. ಒಡನೆಯೇ, ನೆಮ್ಮದಿಯಿಂದ ಇದ್ದ ಅವನ ಒಡಲು, ಮೈಯ ಪಂಜರದಲ್ಲಿ ಮುದುಡಿಕೊಂಡಿದ್ದುದು, ಈಗ ಸುತ್ತಲೂ ಹರಡಿಕೊಂಡಿತು. ಮೈಯೊಳಗೆ, ಮನಸ್ಸಿನಲ್ಲಿ, ಅದನ್ನು ಸುತ್ತರಿದು ಕಟ್ಟಿಹಾಕಿದ್ದ ಅಡ್ಡಿ-ಆತಂಕಗಳು ತಟ್ಟನೆ ಮುರಿದುಬಿದ್ದುವು. ಒಡಲಲ್ಲೆಲ್ಲ ಈಗ ಬಟ್ಟ ಬಯಲು. ಮುಗಿಲೇನು ನೆಲವೇನು, ಒಳಗೇನು ಹೊರಗೇನು,

ನೆರೆಯೇನು ದೂರವೇನು, ಗಟ್ಟಿಯೇನು ಗಾಳಿಯೇನು ಎಲ್ಲೆಡೆಯೂ ಒಡಲೇ ! ಆಗ ಕೊರಗರ ದೇರೆಗೆನಿಸಿತು—ಬಯಲಾದ ಒಡಲಲ್ಲದೆ ಬೇರೆ ದೈವದ ತಾಣವೆಂಬುದುಂಟೆ ? ಒಡಲು ಮೈಯೊಳಗೆ ಕೈಕಟ್ಟಿ ಕುಳಿತಿರುವಾಗ 'ದೈವದ ತಾಣದಲ್ಲಿ ಕಾಲಿಡಬಾರದು ; ದೈವ ಮುನಿಯುವುದು'. ಆದರೆ ಮೈಯೇ ಒಡಲಲ್ಲಿ ಒಳಗಾಗಿ ಒಡಲೇ ದೈವದ ತಾಣವಾದರೆ ದೈವ ಮುನಿಯುವುದು ಹೇಗೆ ? ದೈವ ಒಲಿದರೆ ತಾನೆ ಒಡಲು ದೈವದ ತಾಣವಾಗುವುದು ?

ತಾನು ದೈವವಾದೆನೆಂಬ ನಂಬಿಕೆ ಕೊರಗರ ದೇರೆಯಲ್ಲಿ ಬೇರೂರಿ ಬೆಳೆಯಿತು. ಮೊದಲು ತನ್ನೊಂದಿಗೆ ಕೂಡಿಕೊಂಡು ಓಡಿಯಾಡುತ್ತಿದ್ದ ಹೆಣ್ಣು ಈಗ ತನ್ನೊಳಗೇ ದೈವವಾಗಿ ಉಳಿದುಕೊಂಡಿದ್ದಾಳೆ ಎನ್ನುವುದೂ ಅವನಿಗೆ ಗಟ್ಟಿಯಾಯಿತು. ಹೀಗೆ ಗಂಡು ಹೆಣ್ಣುಗಳು ಜೋಡಿ ದೈವಗಳಾಗಿದ್ದರೂ ಮೊದಲು ದೈವವಾಗಿ ತೋರಿಕೊಂಡುದು ಹೆಣ್ಣೇ ; ಅದೇ ಹಿರಿಯ ದೈವ, ಪಂಜುರ್ಲಿ. ಅದರ ಬೆನ್ನು ಹಿಡಿದು ಹೋಗಿಯೇ ತಾನು ದೈವವಾದುದರಿಂದ ತಾನು ಅದರ ಬಂಟದೈವ ಎನ್ನುವ ವಿವೇಕ ಅವನಲ್ಲಿ ಮೂಡಿತು. ಮೈಯೊಳಗೆ ಎಡೆಬಿಡದೆ ನಡೆಯುತ್ತಿದ್ದ ಉಸಿರಾಟ ಗಮನಕ್ಕೆ ಬಂದಿತು. ಗಾಳಿ ಒಳಗಿಂದ ಹೊರಗೆ ಹೋಗುವಾಗ ಹೆಣ್ಣು ದೈವವಾಗಿಯೇ ಮೈದಳೆಯುವುದು, ನೆಲದಿಂದ ಮುಗಿಲವರೆಗೆ ಹರಡಿ ಹಬ್ಬಿಕೊಳ್ಳುವುದು, ಸುತ್ತ ಇರುವುದನ್ನೆಲ್ಲ ಎಚ್ಚರಗೊಳಿಸುವುದು. ಅದೇ ಒಂದು ತುಣುಕಾಗಿ ಮೈಯೊಳಗೆ ಸೇರಿಕೊಳ್ಳುವಾಗ ಗಂಡು ದೈವವಾಗಿ ತೋರುವುದು, ಗೂಡೊಳಗೆ ಹಕ್ಕಿಯಂತೆ ಅಡಗುವುದು, ಒಳಗೆ ಬೆಳಕಾಗುವುದು. ಹೊರಗೆ ಹರವಿಕೊಂಡ ಅರಿವಿಗೆ ಒಳಗೆ ಮುದುಡಿಕೊಂಡ ಅರಿವು ಆಸರೆ. ಅದರ ಓಲಗಕ್ಕೆ ಇದು ಚಾವಡಿ.

(8)

ಕೊರಗರ ದೇರೆಯೂ ಅವನೊಳಗೆ ಸೇರಿಕೊಂಡ, ಅವನ ಹೆಣ್ಣೂ ಉರಿಯುವ ಕೊಳ್ಳಿಯಂತಾದರು. ಅವನು ಕೊಳ್ಳಿ ; ಇವಳು ಉರಿ. 'ಅಡವಿಯೊಳಗೆ ಅಲೆದಾಡುವ' ಎಂದ ದೇರೆ. 'ನೀನು ಹೋದೆಡೆ ನಾನು ಬರುವೆ' ಎಂದಿತು ಉರಿ. 'ನೀನು ಮುಂದೆ ನಾನು ಹಿಂದೆ' ಎಂದಿತು ಕೊಳ್ಳಿ. 'ನಿನ್ನನ್ನೇರಿ

ತಾನೆ ನಾನು ಮುಂದೆ ?' ಎಂದಿತು ಉರಿ. ಅಲೆದಾಡುವುದು ಅವನೇ ; ಅಲೆದಾಡುವಾಗ ಅವನ ಒಡಲಲ್ಲಿ ಮಿಡಿಯುವುದು ಅವಳು. ಹೀಗೆ ಅವರಿಬ್ಬರೂ ಕೂಡಿಕೊಂಡು ಉರಿಯುವ ಕೊಳ್ಳಿಯಾಗಿ ಹೊರಟರು.

ಅಡವಿಯ ಅಂಚಿನಲ್ಲಿ ಉರಿಯುವ ಕೊಳ್ಳಿ ತಿರುಗಾಡುತ್ತಿರುವಾಗ ಕೊರಗರ ಗುರಿಕಾರ ಅದನ್ನು ಕೈಬೀಸಿ ಕರೆಯುತ್ತಿದ್ದ. ಸಂಜೆಯಾಯಿತೆಂದು ಅಡವಿಯಿಂದ ತನ್ನ ಬೀಡಿಗೆ ಹಿಂದಿರುಗುತ್ತಿದ್ದವನು, ತಾನೇ ತಾನಾಗಿ ಉರಿಯುತ್ತ ತಿರುಗಾಡುತ್ತಿದ್ದ ಕೊಳ್ಳಿಯನ್ನು ಕಂಡೊಡನೆ ಅವನ ಕಣ್ಣುಗಳು ಕುರುಡಾಗಿದ್ದುವು, ಮಾತು ನಿಂತಿತ್ತು, ಕಾಲು ನೆಲದಲ್ಲಿ ನೆಲೆಯಾಗಿತ್ತು. ಮುಂದೆ ಅಡಿಯಿಡಲಾರದೆ, ಬೇರೆ ದಾರಿ ಕಾಣದೆ, ಉರಿಯನ್ನೇ ಮೊರೆಹೊಕ್ಕರೆ ಆದೀತೋ ಎಂದು ಅವನು ಅದನ್ನು ಕೈಬೀಸಿ ಕರೆಯುತ್ತಿದ್ದ. ಬಿಡುವಾಗಿ ತಿರುಗಾಡುವ ಉರಿ ಕರೆದರೆ ಬಾರದೆ ? ಕೊರಗರ ಗುರಿಕಾರ ಅದರೆಡೆಗೆ ಮೋರೆಮಾಡಿ ನಿಂತಿದ್ದವನು ಮತ್ತೇನೂ ಮಾಡಲರಿಯದೆ ಕೈಜೋಡಿಸಿ ತಲೆಬಾಗಿದ. ಈ ಬವಣೆಯಿಂದ ಬಿಡಿಸುವುದಾದರೆ ತನ್ನ ಬೀಡಿನಲ್ಲಿ ದೈವಕ್ಕೆ ಎಡೆಯೊಂದನ್ನು ಮಾಡಿ, ಕಾಲಕಾಲಕ್ಕೆ ಕೋಲ ನೇಮ ನಡಾವಳಿ ನಡೆಸುವುದಾಗಿ ಮನಸ್ಸಿನಲ್ಲೇ ಬೇಡಿಕೊಂಡ. ಕೊರಗರ ದೇರೆ ಈಗ ದೈವವಾಗಿದ್ದರೂ, ಕೊರಗರ ಗುರಿಕಾರನ ಬೀಡನ್ನು ನೋಡಬೇಕೆಂದು ಬಯಸಿದ. ಅವನೊಂದಿಗಿದ್ದ ಹೆಣ್ಣು ದೈವಕ್ಕೆ ಈ ಮನುಷ್ಯ ತನ್ನನ್ನು ಕಂಡಷ್ಟರಿಂದಲೇ ಇವನಿಗೆ ಕೇಡಾಗುವುದೇ ಎಂದು ಕನಿಕರವಾಯಿತು. ಒಡನೆಯೇ ಕೊರಗರ ಗುರಿಕಾರನ ಕಣ್ಣು ತೆರೆಯಿತು, ಕಾಲು ಸಡಿಲವಾಯಿತು, ಮಾತು ಹೊರಟಿತು. ಎದುರಿಗೆ ಉರಿಯುತ್ತಿದ್ದ ಕೊಳ್ಳಿ ಮಾಯವಾಗಿ ಹಿಡಿಯಕತ್ತಿ ಕಾಣಿಸಿಕೊಂಡಿತು ; ಅದನ್ನು ಹಿಡಿದ ಗಂಡು ದೈವ ಕಾಣಿಸಿಕೊಳ್ಳಲಿಲ್ಲ. ಹಿಡಿಯಿರುವ ಗಂಟೆ ಕಾಣಿಸಿಕೊಂಡಿತು ; ಅದನ್ನು ಹಿಡಿದ ಹೆಣ್ಣು ದೈವ ಕಾಣಿಸಿಕೊಳ್ಳಲಿಲ್ಲ.

ಭೂತದ ಕತ್ತಿ, ದೈವದ ಗಂಟೆ ಕೊರಗರ ಗುರಿಕಾರನ ಮೈಯನ್ನು ಮುಟ್ಟಿದವೋ ಇಲ್ಲವೋ, ಅವನು ಮೈಮರೆತ. ಮೈಯಲ್ಲಿ ಹಿಂದೆಂದೂ ಇಲ್ಲದ ಕಾವು ಏರಿ ಮೈ ಗಡಗಡ ನಡುಗತೊಡಗಿತು. ಕಣ್ಣುಗಳು ಕೆಂಪಡರಿ ಕೆರಳಿಕೊಂಡುವು. ತಲೆಯ ಕೂದಲು ನಿಮಿರಿ ನಿಂತು ಅದರಲ್ಲಿ ಅಣಿ ಮಾಡಿ

ಕೊಂಡಿತು. ಒಡಲ ಮೇಲೆ ಹಿಂಗಾರದ ತೆನೆಗಳ ಹಳದಿ ಹುಡಿ ರಾಶಿರಾಶಿಯಾ
ತೋರಿಕೊಂಡಿತು. ಕಾಲುಗಳಲ್ಲಿ ಗಗ್ಗರಗೆಜ್ಜೆ ಸೇರಿಕೊಂಡಿತು. ತಲೆಯನ

ತೂಗುತ್ತ, ಮೈಯನ್ನು ಬಳುಕಿಸುತ್ತ, ದಾಪುಗಾಲಿನ ಹೆಜ್ಜೆಗಳನ್ನಿಡುತ್ತ ಕೊರಗರ ಗುರಿಕಾರ ಆಗಾಗ ಓಡುವನು, ಅಲ್ಲಲ್ಲಿ ಕುಣಿಯುವನು. ಕೈಯಲ್ಲಿರುವ ಗಂಟೆಯನ್ನು ಬಾಜಿಸುತ್ತ, ಕಾಲಲ್ಲಿರುವ ಗಗ್ಗರಗೆಜ್ಜೆಯ ಸದ್ದನ್ನು ಆಲಿಸುತ್ತ ಅವನ ಮೈಯೊಳಗೆ ಕಾವು ಇನ್ನಷ್ಟು ಏರುವುದು. ಮರುಳಾಗಿ ಮತ್ತಷ್ಟು ಮೈಮರೆತು ಕುಣಿದು ಕುಪ್ಪಳಿಸುವನು. ಉಟ್ಟ ಉಡುಗೆಯಲ್ಲಿ ಹಿಂಗಾರದ ತೆನೆಗಳು ಕೊಸರಿಕೊಂಡು, ಕಾಲಿಟ್ಟಲ್ಲೆಲ್ಲ ಕೆಳಗೆ ಉದುರಿ, ನೆಲದ ಮೇಲೆ ಭೂತದ ಗತ್ತನ್ನು ಗುರುತಿಸಿದುವು.

ಹೀಗೆ ಕೊರಗರ ಗುರಿಕಾರನು ಜೋಡಿದೈವಗಳ ಮಾನಿಯನ್ನು ಮೈಯಲ್ಲಿ ತಳೆದು ತನ್ನ ಬೀಡಿನ ದಾರಿ ಹಿಡಿದನು. ಬೀಡಿನ ಚಾವಡಿಯ ಹೆಬ್ಬಾಗಿಲನ್ನು ಮುಟ್ಟಿದಾಗ, ಸಂಜೆಯ ಮಬ್ಬು ಮುಸುಕಿ, ನೆತ್ತಿಯ ಮೇಲೆ ತಿಂಗಳ ಬೆಳಕು ಮೂಡಿಕೊಳ್ಳುತ್ತಿತ್ತು. ಬೀಡಿನ ಜನ ಆಗಲೇ ತಂತಮ್ಮ ಕೊಪ್ಪದೊಳಗೆ ಸೇರಿಕೊಂಡಿದ್ದರು ; ಉಂಡು ಒರಗುವುದರಲ್ಲಿದ್ದರು. ಗಗ್ಗರ ಗಂಟೆಯ ಸದ್ದನ್ನು ಕೇಳಿ ಹೊರಗೆ ಬಂದು ಚಾವಡಿಯ ಹತ್ತಿರ ನೆರೆದರು. ಚಾವಡಿಯೆದುರು ಮೈಮರೆತು ಕುಣಿಯುತ್ತಿದ್ದ ತಮ್ಮ ಗುರಿಕಾರನ ಆಕಾರವನ್ನು ಗುರುತಿಸಿ ಆವೇಶವನ್ನು ಅರಿತು ಬೆರಗಾದರು. ಇದು ಏನೆಂದು ಯಾರಿಗೂ ತಿಳಿಯದು.

ತನ್ನ ಜನರನ್ನು ಕಂಡೊಡನೆ ಗುರಿಕಾರನ ಅಬ್ಬರ ಜೋರಾಯಿತು. ಅವನ ಕುಣಿತ ಬಿರುಸಾಯಿತು. ಅವನ ಕೈಯಲ್ಲಿದ್ದ ಕತ್ತಿ ಬೆಳದಿಂಗಳಲ್ಲಿ ಹೊಳೆಯುತ್ತ ಅವರ ಕಣ್ಣನ್ನು ಕೋರೈಸಿತು. ಅವನ ಕೈಯಲ್ಲಿದ್ದ ಗಂಟೆಯ ಗಣಗಣ ಅವರ ಕಿವಿಗಳಲ್ಲಿ ಮೊರೆಯಿತು. ಅವನ ಕಾಲಲ್ಲಿ ಕಟ್ಟಿದ್ದ ಗಗ್ಗರದ ಸದ್ದು ಅವರ ಮನಸ್ಸನ್ನು ತುಡಿಯಿತು. ಅವನು ಕುಣಿಯುತ್ತಿರುವಾಗ ಅವನ ಮೈಯಿಂದ ಹೊರಹಾರಿದ ಹಿಂಗಾರದ ಹುಡಿ ಅವರ ಮೇಲೆ ಬಿದ್ದು, ಅವರನ್ನು ಮರುಳುಮಾಡಿ ಮೈಮರೆಸಿತು. ಅವನ ಹೆಜ್ಜೆಯ ಗತಿಗೆ ಸರಿಯಾಗಿ ಅವರೂ ಹೆಜ್ಜೆಹಾಕುತ್ತ, ಅನನ ಮೈ ಬಳುಕಿದಂತೆ ಅವರೂ ಮೈಯನ್ನು ಬಳುಕಿಸುತ್ತ, ಅವನು ತಲೆ ತೂಗಿದಂತೆ ಅವರೂ ತಲೆದೂಗುತ್ತ ಕುಣಿಯತೊಡಗಿದರು.



ಕೊರಗರ ಬೀಡಿನಲ್ಲಿ ಜೋಡಿದೈವಗಳನ್ನು ಹೀಗೆ ಓಲಾಟದಿಂದ, ಅಬ್ಬರ ದಿಂದ ಎದುರುಗೊಂಡ ಬೀಡವರು ಗುರಿಕಾರ ಕುಣಿದು ಕುಣಿದು ಸೋತು ಸೊರಗಿದಾಗ, ಅವನು ಕೂರಲೆಂದು ಓಲಗದ ಮಣೆಯನ್ನು ಅವನ ಮುಂದೆ ತಂದಿಟ್ಟರು. ಅವನ ಆವೇಶ ಇಳಿದಂತೆ ಅವರ ಆವೇಶವೂ ಇಳಿಯಿತು. ಆದರೆ ಜೋಡಿದೈವಗಳು ತಮ್ಮ ಬೀಡಿಗೆ ಬಂದುವೆಂಬ ಅರಿವು ಎಲ್ಲರಲ್ಲೂ ಮೂಡಿತ್ತು. ಯಾರು ಯಾರನ್ನು ಕೇಳುವುದಾಗಲೀ, ಯಾರು ಯಾರಿಗೆ ಹೇಳು ವುದಾಗಲೀ ಅಗತ್ಯವಿರಲಿಲ್ಲ. ಬೀಡಿನವರೆಲ್ಲರ ಅರಿವು ಒಮ್ಮೆಯೇ ಮೂಡಿ ಬಂದ ಮೇಲೆ ಹೇಳುವುದೇನು, ಕೇಳುವುದೇನು ? ಗುರಿಕಾರನು ದಣಿವಿನಿಂದ ಮಣೆಯ ಮೇಲೆ ಒರಗಿದಾಗ, ಬೀಡವರು ಅವನ ಕೈಯಿಂದ ಭೂತದ ಕತ್ತಿ ಯನ್ನೂ ದೈವದ ಗಂಟೆಯನ್ನೂ ತೆಗೆದುಕೊಂಡು ಚಾವಡಿಯ ಒಳಗೊಯ್ದು, ಅಂಗಳದಲ್ಲಿ ಹಸಿರು ಹಂದರವನ್ನು ಕಟ್ಟಿ ಅದರಡಿಯಲ್ಲಿ ತೂಗುಮಣೆಯನ್ನಿಟ್ಟು ಅದರ ಮೇಲೆ ಭೂತದ ಕತ್ತಿಯನ್ನೂ ದೈವದ ಗಂಟೆಯನ್ನೂ ಇರಿಸಿದರು.

ಹೊರಗೆ, ಕುಣಿದು ಬಳಲಿದ್ದ ಗುರಿಕಾರ ಎಳನೀರನ್ನು ಕುಡಿದು ಆಸರು ಆರಿಸಿಕೊಂಡು ದಣಿವು ಕಳೆದುಕೊಂಡು, ಓಲಗದ ಮಣೆಯಿಂದ ಎದ್ದು ನಿಲ್ಲಲು, ಅವನನ್ನು ಮುಂದೆ ಮಾಡಿಕೊಂಡು ಬೀಡವರೆಲ್ಲ ಚಾವಡಿಯೊಳಗೆ ಬಂದು ಅಂಗಳದಲ್ಲಿ ಭೂತದ ಕತ್ತಿಯೂ ದೈವದ ಗಂಟೆಯೂ ನೆಲೆಗೊಂಡ ತೂಗು ಮಣೆಯ ಸುತ್ತ ನೆರೆದರು. ಗುರಿಕಾರನ ಕೈಯಲ್ಲಿ ಮಣ್ಣ ಹಣತೆಯೊಂದ ನ್ನಿಟ್ಟು, ಅದಕ್ಕೆ ಎಣ್ಣೆಯೆರೆದು, ಅದರಲ್ಲಿ ಹೊಸ ಹತ್ತಿಯ ಉದ್ದ ಬತ್ತಿಯನ್ನು ಹೊಸೆದಿರಿಸಿದರು. ಬತ್ತಿ ತನಗೆ ತಾನೆ ಉರಿತಗುಲಿ ಬುಗ್ಗೆಂದು ಹೊತ್ತಿ ಕೊಂಡಿತು. ಗುರಿಕಾರ ತಲೆಬಾಗಿಸಿ ದೀಪವನ್ನು ತೂಗುಮಣೆಯ ಮೇಲೆ ಭೂತದ ಕತ್ತಿಗೂ ದೈವದ ಗಂಟೆಗೂ ನಡುವೆ ಇರಿಸಿದ. ದೀಪದ ಬೆಳಕು ಚಾವಡಿಯನ್ನೆಲ್ಲ ತುಂಬಿತು, ಬೀಡನ್ನೆಲ್ಲ ಬೆಳಗಿಸಿತು.

ಸುತ್ತಲೂ ನೆರೆದಿದ್ದ ಬೀಡವರೆಲ್ಲ ಆಶ್ಚರ್ಯದಿಂದ 'ಆ'ಯೆಂದು ದನಿತೆಗೆದು ಸಂಭ್ರಮದಿಂದ ತಲೆಬಾಗಿದರು. ಬೀಡವರು ತಮಗೆಂದು ಮಾಡಿಕೊಟ್ಟ ಎಡೆ ಯನ್ನು ದೈವಗಳು ಒಪ್ಪಿಕೊಂಡವೆಂದು ಎಲ್ಲರಿಗೂ ನಿಶ್ಚಯವಾಯಿತು. ದೈವ ಗಳು ಬೇರೆಡೆ ಹೋಗದೆ ತಮ್ಮ ಬೀಡಿನಲ್ಲೇ ಉಳಿದಾವೆಂಬ ಆಸೆ ಒದಗಿಬಂತು.

ಚಾವಡಿಯ ಅಂಗಳದಲ್ಲಿ, ಹಸಿರು ಹಂದರದಡಿಯಲ್ಲಿ ಇಡೀ ರಾತ್ರಿ ದೈವಗಳ ಒಡ್ಡೋಲಗ ನಡೆಯಿತು. ದೈವಗಳಿಂದ ಸೊಲ್ಲು ಹೊರಡಲಿಲ್ಲ, ಬೀಡವರಿಂದ ಮಾತು ಬರಲಿಲ್ಲ. ಆದರೂ ದೈವಗಳ ಮಾತು ಸಲಿಸುವೆವೆಂದು ಬೀಡವರು ಮಾತಾಡದೆ ಪೊಡಮಟ್ಟರು ; ಬೀಡವರಿಗೆ ಕೇಡು ಬರದಂತೆ ಕಾಪಾಡುವೆವೆಂದು ದೈವಗಳು ನುಡಿಯದೆ ತೋರಿಸಿದುವು. ದೈವಗಳು ಬೀಡವರೊಳಗೆ ಹೀಗೊಂದು ಕಟ್ಟಳೆ ಆ ಕತ್ತಲಲ್ಲೇ ಕಾಣಿಸಿಕೊಂಡಿತು.

ಇರುಳು ಕಳೆದು, ಬಾನಲ್ಲಿ ಬೆಳ್ಳಿ ಮೂಡಿಕೊಂಡು ಬೆಳಕು ಹರಿದಾಗ ಬೀಡವರು ಚಾವಡಿಯ ಹೊರಗೆ ಬಂದು ಕಣ್ಣಾಡಿಸಿದರೆ, ಚಾವಡಿಯೆದುರಿಗಿದ್ದ ಬತ್ತಿದ ತೋಡಿಯಲ್ಲಿ ತಿಳಿನೀರು ತುಂಬಿಕೊಂಡು ದೊಡ್ಡ ಕೆರೆಯಾಗಿತ್ತು. ಸುತ್ತಲೂ ಒತ್ತಾಗಿ ಬೆಳೆದ ಗಿಡಮರಗಳ ಹಚ್ಚಹಸಿರು ; ಹಸಿರ ಮೇಲೆ ಹರಡಿಕೊಂಡ ಹೂಗಳ ಕಂಪು ; ಕಂಪ ಮೇಲೆ ಅಡರಿಬರುವ ದುಂಬಿಗಳ ದನಿ ; ದನಿಯ ಮೇಲೇರಿ ಬರುವ ತಂಗಾಳಿಯ ಸುಳಿದಾಟ. ಈ ಸುಳಿಗಾಳಿ ಬೀಡವರ ಮೈಮೇಲೆ ಬೀಸಿದಾಗ ಅವರಿಗೆ ಹಿಂದೆಂದೂ ಇರದಂಥ ಹುಮ್ಮಸು ; ದೈವಗಳು ತಮ್ಮ ಮೇಲೆ ಒಲಿದಿವೆಯೆಂದು ನೆಮ್ಮದಿ ; ತಮಗೆ ಬರುವಂಥ ತೊಡಕುಗಳನ್ನೆಲ್ಲ ತಪ್ಪದೆ ಬಿಡಿಸುವುವೆಂದು ನಂಬಿಕೆ.

(9)

ಈ ಬೀಡವರ, ಆ ಜೋಡಿದೈವಗಳ ನಡುವೆ ಬೆಳೆದುಬಂದ ನೆಂಟು ಬಹುಕಾಲ ಉಳಿಯಲಿಲ್ಲ; ಬರುಬರುತ್ತ ಅದು ಹಳೆಯ ಕಥೆಯಾಯಿತು. ಮುಂದೆ ಬೀಡವರಾಗಿ ಬಂದವರು ಹಿಂದಿನ ಕಟ್ಟಳೆಯ ಸಂಧಿಯನ್ನು ಅರಿಯದೆ ಕಡೆಗಾಣಿಸಿದರು. ದೈವಗಳಿಗೆ ಸಲಿಸುವೆವೆಂದು ಕೊಟ್ಟ ಮಾತನ್ನು ಮರೆತರು ; ಅವುಗಳಿಗೆ ಅನುಕೂಲವಾಗಿ ನಡೆದುಕೊಳ್ಳುವುದನ್ನು ಬಿಟ್ಟರು. ಒಮ್ಮೆ ಅಪ್ಪು ಎಂಬ ಕೊರಗರ ಹುಡುಗ ಕಾಡಿನಲ್ಲಿ ಬೇಟೆಯಾಡಿ, ಕೊಂದದ್ದನ್ನು ಹೆಗಲ ಮೇಲೆ ಹೊತ್ತು, ಬೀಡಿಗೆ ತರುತ್ತಿದ್ದ. ಇದನ್ನು ಕಂಡು ಅಣ್ಣು ಎಂಬ ಇನ್ನೊಬ್ಬ ಅದೇ ಓರಗೆಯ ಹುಡುಗ ಅವನ ಮೇಲೆ ಬಿದ್ದು, ಅವನು ಕೊಂದು

ತರುತ್ತಿದ್ದುದನ್ನು ತಾನು ಸೆಳೆದುಕೊಂಡು ಹೋದ. ಅವನು ಹೋಗುವಾಗ ಅವನಿಂದ ಗಾಯಗೊಂಡು ನೆಲದ ಮೇಲೆ ಬಿದ್ದಿದ್ದ ಅಪ್ಪು ಅವನಿಗೆ ಕೇಳಿಸುವಂತೆ—“ಬೆಳಕು ಮುಳುಗುವುದರೊಳಗೆ ನನ್ನದನ್ನು ನನಗೆ ಸಲಿಸಬೇಕು. ಇಲ್ಲವಾದರೆ ದೈವಗಳ ಆಣೆ ! ” ಎಂದು ಗಡುವು ಇಟ್ಟ. ಇದನ್ನು ಕೇಳಿ ಅಣ್ಣು ನಗುತ್ತ “ನಿನ್ನ ದೈವಗಳ ಕಾರಣಿಕಕ್ಕಿಂತ ನನ್ನ ಮೈಬಲ ಮಿಗಿಲಾದದ್ದು, ನೆನಪಿರಲಿ ! ದೈವಗಳು ಮುದಿಯಾಗಿವೆ, ಮರುಳಾಗಿವೆ. ಕೂತ ಮಣೆಯಿಂದ ಏಳಲಾರವು ; ಕೆಳಗಿಟ್ಟ ಉಕ್ಕಿನ ಕತ್ತಿಯನ್ನು ಅವು ಎತ್ತಲಾರವು. ನೆತ್ತರಲ್ಲಿ ಕಾವಿರುವ ನನ್ನಂಥವನನ್ನು ಅವು ಬೆದರಿಸಲಾರವು ! ಸೋತು ಸೊರಗಿದವರಿಗೆ ಸತ್ತ ದೈವಗಳೇ ಆಸರೆ; ನನ್ನಂಥವನಿಗೆ ಅಲ್ಲ” ಎಂದು ಹೇಳಿ ಬೆನ್ನು ತಿರುಗಿಸಿ ಹೊರಟುಹೋದ.

ದೈವಗಳನ್ನು ಹಳಿಯುವ ಈ ಮಾತುಗಳನ್ನು ಕೇಳಿ ಅಪ್ಪುವಿನ ಕಣ್ಣು ಕೆರಳಿತು. ಆದರೆ ಮೈಗಾಯ ಅವನನ್ನು ಆಗಲೇ ಏಳಗೊಡಿಸಲಿಲ್ಲ. ಅವನು ಹಾಗೆಯೇ ಚೇತರಿಸಿಕೊಂಡು ಎದ್ದು ನಿಲ್ಲುವಾಗ ಸಂಜೆಯೇ ಆಗುತ್ತಿತ್ತು, ಬೆಳಕು ಮುಳುಗುತ್ತಲಿತ್ತು. ಅಲ್ಲಿಂದ ಎದ್ದವನು ನೆಟ್ಟಗೆ ಬೀಡಿನ ಚಾವಡಿಗೆ ಬಂದು, ಗುರಿಕಾರನ ಮುಂದೆ ನಿಂತು ಕೈಮುಗಿದು ತನಗೆ ನಡೆದುದನ್ನು ಅರಿಕೆ ಮಾಡಿಕೊಂಡ ; ತಾನಿಟ್ಟ ಗಡುವನ್ನೂ ತಿಳಿಸಿದ. ಆದರೆ ಗುರಿಕಾರ ಅಣ್ಣುವಿನ ಹೆಸರನ್ನು ಕೇಳಿದೊಡನೆ, ಅಪ್ಪುವನ್ನು ಕಣ್ಣೆತ್ತಿ ಕೂಡ ನೋಡದೆ, ಮೋರೆ ತಿರುಗಿಸಿಕೊಂಡು “ಅಣ್ಣುವಿನ ಮೇಲೆ ನಿನಗೆ ಸೇಡು ಇದ್ದರೆ, ನೀನು ತೀರಿಸಿಕೋ ! ಅದರಲ್ಲಿ ನಮ್ಮನ್ನು ಎಳೆಯಬೇಡ !” ಎಂದುಬಿಟ್ಟ. ಅಣ್ಣುವಿನ ಮೈಬಲ, ಯಾವುದಕ್ಕೂ ಅಂಜದ ಎದೆಗಾರಿಕೆ, ಮಾತಿನ ಬಿರುಸು, ಕೆಣಕಿದರೆ ಕೊಡಲಿಯನ್ನು ಕೈಗೆತ್ತಿಕೊಳ್ಳುವ ಕಾತರ, ಇವನ್ನು ಕಂಡು ಬೀಡಿಗೆ ಬೀಡೇ ನಡುಗುತ್ತಿತ್ತು. ಅವನೊಂದಿಗೆ ಹಗೆಯನ್ನು ಸಾಧಿಸಿಕೊಳ್ಳುವ ಆತುರ ಗುರಿಕಾರನಿಗೇನು ಇರಲಿಲ್ಲ; ಅಂಥ ಮಾರಿಯನ್ನು ಎದುರುಹಾಕಿಕೊಳ್ಳುವ ಬಯಕೆ ಬೀಡವರಿಗೂ ಇರಲಿಲ್ಲ.

ಗುರಿಕಾರನ ಮಾತನ್ನು ಕೇಳಿ, ಅಪ್ಪುವಿಗೆ ಸಿಟ್ಟುಬಂತು. ಆದರೆ ಮಾತಿನಲ್ಲಿ ಹದಮೀರದೆ, “ಅಯ್ಯಾ, ದೈವಗಳ ಆಣೆಯಿಟ್ಟಿದ್ದೇನೆ !” ಎಂದು

ಹೇಳಿದ. ಅದಕ್ಕೂ ಗುರಿಕಾರ ಮೋರೆಯನ್ನು ಇತ್ತ ತಿರುಗಿಸದೆ, "ಹಾಗಾದರೆ ದೈವಗಳನ್ನು ನೀನೇ ನೋಡಿಕೋ" ಎಂದುಬಿಟ್ಟ. ಅಪ್ಪುವಿಗೆ ಇನ್ನು ತಡೆಯಲಾಗಲಿಲ್ಲ. "ದೈವಗಳನ್ನು ನೋಡಿಕೊಳ್ಳುವವನು ಗುರಿಕಾರನೋ, ನಾನೋ ? ದೈವಗಳೊಂದಿಗೆ ಮಾತಾಡುವವನು, ದೈವಗಳ ಮಾತನ್ನು ಸಲಿಸುವವನು ಗುರಿಕಾರನಲ್ಲವೇ ? ಬೀಡವರು ದೈವಗಳೊಂದಿಗೆ ನೇರವಾಗಿ ಮಾತಾಡಬಹುದೋ ? ಇದು ಹಿಂದಿನಿಂದ ಬಂದ ಕಟ್ಟಳೆಯೋ ? ಬೀಡಿನ ಒಂದು ಹುಳಕ್ಕೆ ಅಂಜಿ ನೀನು ದೈವಗಳನ್ನು ಅಸಡ್ಡೆ ಮಾಡುವೆಯಾದರೆ, ಬೀಡು ಅಡವಿಯಾದೀತು ! ಬೀಡವರ ನೆತ್ತರು ನೀರಾದೀತು ! ಬೀಡಿನ ಕೊಪ್ಪಗಳು ಗೂಬೆಗಳ ಗೂಡಾದಾವು ! ಗುರಿಕಾರನಾದ ನಿನ್ನ ಮುಡಿ ಮಣ್ಣಿನಿಂದ ಮುಚ್ಚಿಹೋದೀತು ! ಎಚ್ಚರಿಕೆ !!" ಎಂದು ಒದರಿ, ಅಲ್ಲಿಂದ ಸರಸರನೆ ಹೊರಟುಬಿಟ್ಟ.

ಮುಂದೇನು ಮಾಡಬೇಕೆಂದು ತಿಳಿಯದೆ, ಅವನು ಚಾವಡಿಯ ಕಟ್ಟೆಯಿಂದ ಇಳಿದು ಬರುತ್ತಿರುವಾಗ ದಾರಿಯಲ್ಲೇ ಅಣ್ಣು ನಿಂತಿದ್ದವನು, "ಅಪ್ಪು, ದೈವಗಳಿಗೆ ನಿನ್ನ ದೂರು ಮುಟ್ಟಿತೋ ? ಬೆಳಕು ಆಗಲೇ ಮುಳುಗಿತಲ್ಲ ? ಉಯ್ಯಾಲೆಯಲ್ಲೇ ಇನ್ನೂ ಒರಗಿರುವರೋ, ನಿನ್ನ ಹೆಗಲೇರಿ ಬಂದಿರುವರೋ ? ಗಡುವು ಮೀರಿತು, ನನ್ನನ್ನು ದಂಡಿಸಬೇಕಲ್ಲ ?" ಎಂದು ಹೇಳುತ್ತ ಗಟ್ಟಿಯಾಗಿ ನಗೆಯಾಡತೊಡಗಿದ. ತನ್ನನ್ನೂ ದೈವಗಳನ್ನೂ ಒಟ್ಟಿಗೆ ಮೂದಲಿಸುವ ಅವನ ಮಾತನ್ನು ಕೇಳಿ ಅಪ್ಪು ಕೆರಳಿದ. ಕಾಲ ಬಳಿ ಬಿದ್ದಿದ್ದ ಸಣ್ಣದೊಂದು ಕಡ್ಡಿಯನ್ನೇ ಎತ್ತಿಕೊಂಡು ಅಣ್ಣುವನ್ನು ಹೊಡೆಯಲು ಹೋದ. ಅಷ್ಟಕ್ಕೇ 'ಅಯ್ಯೋ' ಎಂದು ಕಿರುಚಿಕೊಂಡು, ಅಣ್ಣು ಬಾಯಿಂದ ನೊರೆನೊರೆ ನೆತ್ತರು ಕಾರುತ್ತ ಕೆಳಗೆ ಬಿದ್ದುದನ್ನು ಕಂಡು ಅಪ್ಪುವೇ ಬೆರಗಾದ ! ತನ್ನ ಕೈಯಲ್ಲಿದ್ದ ಕಡ್ಡಿ ಎಷ್ಟು ತೆಳುವೆಂದರೆ ಅದು ಜೋರಾಗಿ ಗಾಳಿ ಬೀಸಿದರೂ ತಾನೇ ಮುರಿದು ಬೀಳುವುದು. ಮತ್ತೆ, ಅದು ಅಣ್ಣುವಿನ ಮೈಯನ್ನೂ ಸೋಕಲಿಲ್ಲ. ಅಣ್ಣು ಹೀಗೇಕೆ ಬಿದ್ದ ? ನೆತ್ತರು ಕಾರುತ್ತ, ಮೈಸೆಟೆದುಕೊಂಡು ಅರಿವು ತಪ್ಪಿ, ಬಿದ್ದುದೇಕೆ ?

ಅಣ್ಣು ಆ ಗಳಿಗೆಯಲ್ಲಿ ಕಂಡದ್ದು ಅಪ್ಪುವನ್ನಲ್ಲ, ಅವನ ಕೈಲಿದ್ದ ಕಡ್ಡಿ

ಯನ್ನಲ್ಲ. ಅವನು ಕಂಡದ್ದು ನೆಲದಿಂದ ಮುಗಿಲವರೆಗೆ ಅಡರಿಕೊಂಡು ಕೋರೆ ದಾಡೆಯನ್ನು ಮಸೆಯುತ್ತ, ಕಣ್ಣುಗಳಿಂದ ಕೆಂಡಕಾರುತ್ತ, ತನ್ನ ಮೇಲೆ ಎರಗಿ ಬಂದ ಆನೆಯ ಮೈ ಹಂದಿ ಮೋರೆಯ ದೈವವನ್ನು. ಆದರೆ ಇದು ಅಪ್ಪುವಿಗೆ ಕಾಣಿಸಲಿಲ್ಲ. ಅವನು ಕಂಡುದು, ಅಣ್ಣು ಬಿದ್ದಲ್ಲಿಂದ ದೊಡ್ಡದೊಂದು ಬಿರುಗಾಳಿ ಎದ್ದು ರೊಯ್ಯನೆ ಬೀಸುತ್ತ ಬೀಡಿನ ಕಡೆ ತಿರುಗಿದುದನ್ನು. ಆ ಗಾಳಿಯ

ಹೊಡೆತಕ್ಕೆ ಚಾವಡಿ ಕುಸಿದು ಬಿತ್ತು. ಹಂದರದಲ್ಲಿ ದೈವಗಳ ಎದುರು ಇರಿಸಿದ್ದ ದೀಪ ಹಂದರಕ್ಕೆ ಹೊತ್ತಿಕೊಂಡಿತು. ಗಾಳಿಗೆ ಆ ಉರಿಯ ನಾಲಗೆ ಕೊಪ್ಪಗಳ ಕಡೆ ತಿರುಗಿ, ಅಪ್ಪು ನೋಡುತ್ತಿರುವಂತೆಯೇ ಕೊಪ್ಪಗಳೆಲ್ಲ ಸರಸರನೆ ಉರಿದುಬಿದ್ದುವು. ಬೀಡವರು ದಿಕ್ಕುಕಾಣದೆ ಅಳುತ್ತ ಚೀರುತ್ತ, ಬೊಬ್ಬೆಯಿಡುತ್ತಿದ್ದುದನ್ನು ಅಪ್ಪು ಕೇಳಿದ. ಅಷ್ಟಿಷ್ಟೆನ್ನುವುದರಲ್ಲಿ, ಬೀಡನ್ನು

ಬೂದಿಮಾಡಿ ಉರಿ ತಣ್ಣಗಾಯಿತು. ಬೀಡವರೆಲ್ಲ ಮಡಿದು ಅವರ ಅಬ್ಬರವೂ ಅಡಗಿತು.

ಬೀಡಿನಲ್ಲಿ ಉಳಿದವನು ಅಪ್ಪುವೊಬ್ಬನೇ ! ತನಗೆ ತಿಳಿದವರು, ತನ್ನ ಒಡನಾಡುತ್ತಿದ್ದವರು, ತನ್ನನ್ನು ನಂಬಿದ್ದವರು, ತನಗೆ ಆಗದಿದ್ದವರು, ತನ್ನ ಹಿರಿಯರಾದವರು ಎಲ್ಲರೂ ಹೆಸರಿಲ್ಲದಂತೆ, ಹಿಂದಿರುಗಿ ಬರದಂತೆ ಹೋಗಿದ್ದರು. ಹೀಗೆ ಒಮ್ಮೆಲೆ ಬೀಡಿಗೆ ಬೀಡೇ ಬೆಂಕಿಬಿದ್ದು, ಕಾಡಾಗುವುದೆಂದು ಅವನು ನೆನೆಸಿರಲಿಲ್ಲ. ತನ್ನ ಮೊರೆಯನ್ನು ಆಲಿಸಿದ ದೈವಗಳು ಬೀಡಿನ ಮೇಲೆ ಮುನಿದುವೆಂದು ಅವನಿಗನಿಸಿತು. ಆದರೆ ಒಬ್ಬ ಅಣ್ಣುವಿನ ಚೆಲ್ಲಾಟಕ್ಕೆ ಇಡೀ ಬೀಡೇ ಬಲಿಯಾಗಬೇಕೆ ? ಅಣ್ಣುವೇನೋ ಕೇಡಿಗ. ಆದರೆ ದೈವಗಳ ಒಡನಾಡಿಯಾದ ಗುರಿಕಾರ ಅವನಿಗೆ ಬೆದರಿದನಲ್ಲ ? ಬೆದರಿ, ತನ್ನ ದೈವಗಳನ್ನೂ ಕಡೆಗಾಣಿಸಿದನಲ್ಲ ? ಬೀಡವರಾದರೂ ಗುರಿಕಾರನಿಗೆ ಬುದ್ಧಿ ಹೇಳಿದರೆ ? ಅವರಿಗಾದರೂ ದೈವಗಳಲ್ಲಿ ಆದರವಿದ್ದಿತೆ ? ಒಬ್ಬರಾದರೂ ದೈವಗಳ ಕಾರಣಿಕವನ್ನು ನಂಬದೆ ಬೀಡಿಗೇ ಕೇಡನ್ನು ತಂದರಲ್ಲ ? ದೈವ ಮುನಿದರೆ ಉಳಿವುಂಟೆ ? ದೈವಕ್ಕೆ ಎದುರಾದವರು ಬಾಳುವುದುಂಟೆ ?

ಇವೆಲ್ಲ ಆಲೋಚನೆಗಳು ಅಪ್ಪುವಿನ ತಲೆಯೊಳಗೆ ಸುಳಿದಾಡುವಾಗ ಎಂದಿನಿಂದಲೋ ಇಲ್ಲಿದ್ದ ದೈವಗಳು ಈಗ ಇಲ್ಲಿಂದ ಕಾಲು ತೆಗೆದಿವೆಯೆಂದು ಅನಿಸಿತು. ದೈವಗಳನ್ನು ನಂಬದಿದ್ದ ಕಡೆ ದೈವಗಳಿಗೇನು ಕೆಲಸ ? ಅಲ್ಲಿಂದ ಹೊರಡುವಾಗ ಅವು ತಮ್ಮ ಬಿರುಸನ್ನು ತೋರಿಸಿದವು ; ಬೀಡವರಿಗೂ ದೈವಗಳಿಗೂ ಆದ ಕಟ್ಟಳೆ ನಡೆಯದಿದ್ದರೆ ಬೀಡವರಿಗೆ ಕೇಡು ಎಂಬುದನ್ನು ಕಾಣಿಸಿದವು. ಆದರೆ, ದೈವಗಳೂ ಬಿಟ್ಟೋಡಿದ ಬೀಡಿನಲ್ಲಿ ತಾನೊಬ್ಬ ಇರುವುದು ಹೇಗೆ ? ತಾನಂತೂ ದೈವಗಳ ಬಲವನ್ನು ನಂಬಿದ್ದವನೇ ; ದೈವಗಳಿಗೆ ಅಂಜಿ ಪೊಡಮಟ್ಟವನೇ. ಈಗ ತನಗೆ ಉಳಿದಿರುವುದು ದೈವಗಳಷ್ಟೇ ತಾನೇ ? ದೈವಗಳು ಹೋದೆಡೆಯೇ ತಾನೂ ಹೊರಡುವುದು ಎಂದು ನಿಶ್ಚಯಿಸಿದ ; ದೈವಗಳ ಊಳಿಗದಲ್ಲಿ ತನ್ನ ಬಾಳನ್ನು ಕಳೆಯುವುದು ಎಂದುಕೊಂಡ.

ಆದರೆ ಇದು ದೈವಗಳಿಗೆ ತಿಳಿಯುವುದು ಹೇಗೆ ? ಕಾಣದ, ಬಿಟ್ಟೋಡಿದ ದೈವಗಳು ಈಗ ಎಲ್ಲಿವೆಯೆಂದು ತನಗೆ ತಿಳಿಯುವುದಾದರೂ ಹೇಗೆ ? ಕತ್ತಲೆ

ಆಗಲೆ ಕವಿದಿತ್ತು; ಬೀಡೆಲ್ಲ ಬೂದಿಯಾಗಿ, ತನ್ನ ಕೊಪ್ಪವೂ ಕರಗಿ ಹೋಗಿತ್ತು. ಎಲ್ಲಿಗೆ ಹೋಗುವುದು ? ಯಾರನ್ನು ಕೇಳುವುದು ? ಮುಂದೆ ದಾರಿಯೇನು ? ಹೀಗೆ ಅಪ್ಪು ತೊಳಲಾಡುತ್ತಿರುವಾಗ, ದೂರದಿಂದ ಉರಿಯುವ ಕೊಳ್ಳಿಯೊಂದು ತನ್ನೆಡೆಗೆ ಬರುವುದು ಕಂಡಿತು. ತನ್ನ ಬೀಡಿನ ದೈವಗಳು ಇಲ್ಲಿಗೆ ಬಂದುದು ಹೀಗೆಯೇ ಎಂದು ಹಿರಿಯರಿಂದ ಕೇಳಿದ್ದ ಅಪ್ಪುವಿಗೆ ಇದು ದೈವಗಳೇ ಇರಬಹುದೆನಿಸಿತು. ಉರಿ ಹತ್ತಿರ ಹತ್ತಿರ ಬಂದಂತೆ ನೆಲಕ್ಕೆ ಬಾಗಿತು. ಅಪ್ಪುವಿನ ಕಣ್ಣು ಕಾಣಿಸುವಷ್ಟು ದೂರದಲ್ಲಿ ಉರಿ ಮರೆಯಾಗಿ, ಕುದುರೆ ಯೊಂದು ನಿಂತಿತ್ತು.

ಅರಸರ ಕುದುರೆಯಂತೆ ಸಿಂಗಾರವಾಗಿದ್ದ ಅದರ ಮೇಲೆ ಯಾರೂ ಕೂತಿ ರಲಿಲ್ಲ. ಮಾಯದ ದೈವಗಳು ಯಾವ ರೂಪವನ್ನಾದರೂ ತಾಳಬಹುದೆಂದು ಅವನು ತಿಳಿದಿದ್ದನಾದರೂ ದೈವ ಕುದುರೆಯಾಗಿ ಬಂದುದನ್ನು ಯಾರಿಂದಲೂ ಕೇಳಿರಲಿಲ್ಲ. ಮೇಲಾಗಿ, ಕಂಡ ಕುದುರೆಗಳೆಲ್ಲ ದೈವದ ರೂಪಗಳೆಂದು ಬಗೆ ಯಲೇಕೆ ? ಯಾರೋ ದಾರಿಹೋಕ ಇರಬಾರದೆ ? ಕುದುರೆಯಿಳಿದು ಎಲ್ಲೋ ಹೋಗಿರಬಹುದಲ್ಲ ? ಸುಮಾರು ಹೊತ್ತು ಕಾದು ನೋಡಿದರೂ, ಸವಾರ ಬರಲಿಲ್ಲ; ಕುದುರೆ ಪ್ರತಿಮೆಯಂತೆ ನಿಂತೇ ಇತ್ತು. ಅದೇನೆಂದು ತಿಳಿಯುವ ಬಯಕೆಯಿಂದ ಅಪ್ಪು ಅದರತ್ತ ನಡೆದ. ಹತ್ತಿರ ಬಂದರೂ ಕುದುರೆಯೇನು ಕದಲಲಿಲ್ಲ. ಮುಟ್ಟಿನೋಡಿದರೆ ಮಣ್ಣಿನ ಕುದುರೆ!

ಅಪ್ಪುವಿಗೆ ಆಶ್ಚರ್ಯವಾಯಿತು. ತನ್ನ ಬೀಡಿನ ನೆರೆಯಲ್ಲಿ ಇಂಥ ದೊಂದು ಕುದುರೆಯ ಪ್ರತಿಮೆಯನ್ನು ತಾನೆಂದೂ ಕಂಡುದಿಲ್ಲ! ಈಗ ಎಲ್ಲಿಂದ ಬಂತು ಇದು ? ಹೀಗೆಂದು ಕಣ್ಣು ಹೊರಳಿಸುವಷ್ಟರಲ್ಲಿ ಇನ್ನಷ್ಟು ದೂರದಲ್ಲಿ ಇನ್ನೊಂದು ಉರಿಯುವ ಕೊಳ್ಳಿ ಕಂಡಿತು; ಅದೂ ನೆಲಕ್ಕೆ ತಾಕಿ ಆರಿತು, ಅದರ ಜಾಗದಲ್ಲಿ ಕುದುರೆಯೊಂದು ತೋರಿಕೊಂಡಿತು. ಆ ಕುದುರೆಗೂ ಸವಾರನಿಲ್ಲ! ಅಪ್ಪುವಿಗೆ ಅದರ ಹತ್ತಿರ ಹೋಗಬೇಕೆನ್ನುವ ಬಯಕೆ ಬಾರದೆ ಇರಲಿಲ್ಲ. ಅಲ್ಲಿಗೆ ಹೋದೊಡನೆ ಅಷ್ಟೇ ದೂರದಲ್ಲಿ ಇನ್ನೊಂದು ಉರಿ, ಇನ್ನೊಂದು ಕುದುರೆ ! ಹೀಗೆ ಅಪ್ಪು ಬೀಡಿನಿಂದ ನಾಲ್ಕು ಬಾರಿ ದೂರ ದೂರ ಸರಿದಂತೆ ನಾಲ್ಕು ಕುದುರೆಗಳನ್ನು ಕಂಡ.

ನಾಲ್ಕನೆಯ ಕುದುರೆಯ ಹತ್ತಿರ ಅಪ್ಪು ಬರುವ ವೇಳೆಗೆ, ಸುತ್ತಲೂ ಕುದುರೆಗಳು ಕೆನೆಯುತ್ತಿರುವುದು ಕೇಳಿತು. ಒಂದೊಂದು ದಿಕ್ಕಿನಿಂದ ಒಂದೊಂದು ಕುದುರೆ ಬಂದು ಅಪ್ಪುವನ್ನು ಸುತ್ತರಿದು ನಿಂತುವು. ಅಷ್ಟು ದೊಡ್ಡ ಕುದುರೆಗಳನ್ನು ಅಪ್ಪು ಆವರೆಗೆ ಕಂಡಿರಲಿಲ್ಲ. ಮೋರೆಯನ್ನು ನೋಡಿ ಕುದುರೆಯೆನ್ನಬೇಕಷ್ಟೆ ; ಮೈ ಆನೆಯಂತೆಯೋ ! ನಾಲ್ಕೂ ಕುದುರೆಗಳು ಕೆನೆಯುತ್ತ ಜಿಗಿಯುತ್ತ ತನ್ನ ಮೇಲೆ ನುಗ್ಗಿ ಬರುವಂತೆ ತೋರಿ ಅವನಿಗೆ ದಿಗಿಲಾಯಿತು. ಕಣ್ಣುಮುಚ್ಚಿ ಚೀರಿದ ; ಬವಳಿ ಬಂದು ಕೆಳಗೆ ಬಿದ್ದ.

ಎಚ್ಚರ ತಿಳಿದು ಏಳುವಾಗ ತಾನೊಂದು ಕುದುರೆಯನ್ನೇರಿಕೊಂಡು ಕುಳಿತಿದ್ದಾನೆ. ಆದರೆ ಆ ಕುದುರೆ ತಾನು ಮೊದಲು ಕಂಡಂಥದಲ್ಲ, ಸಾಮಾನ್ಯವಾದ ಕುದುರೆಯೋ ; ತಾನು ಆಗಾಗ ಏರಿಹೋಗುತ್ತಿದ್ದಂಥದೇ. ಕತ್ತಲೆಯಲ್ಲೇ ಸುತ್ತ ಕಣ್ಣಾಡಿಸಿದರೆ, ಮತ್ತೆ ಮೂರು ಅಂಥವೇ ಕುದುರೆಗಳು, ಅವನ್ನೇರಿ ಕೂತವರು ಮೂವರು ಸವಾರರು. ಅವರಲ್ಲಿ ಒಬ್ಬಳು ಹೆಂಗಸು, ಉಳಿದಿಬ್ಬರು ಗಂಡಸರು. ಹೆಂಗಸು ಏರಿದ್ದ ಕುದುರೆಯೇ ದೊಡ್ಡದು ; ಅದಕ್ಕೆ ಮಾಡಿದ್ದ ಅಲಂಕಾರ ಅಂದವಾಗಿತ್ತು. ಅಪ್ಪು ಹೆಣ್ಣನ್ನು ದಿಟ್ಟಿಸಿ ನೋಡಿದ ; ಅಲ್ಲಿಂದ ಕಣ್ಣು ತೆಗೆಯುವುದಾಗಲಿಲ್ಲ. ಕತ್ತಲೆಯಲ್ಲೂ ಬೆಳಗುವ ಮೋರೆಯಲ್ಲಿ ಮುಂದಲೆಯ ಕೇದಗೆ ಎದ್ದು ಕಾಣುತ್ತಿತ್ತು. ಅದಕ್ಕೆ ಹೊಂದಿಕೊಂಡಿದ್ದ ಅಣಿ ಅಷ್ಟಿಷ್ಟು ಕಾಣುತ್ತಿತ್ತು. ಮೋರೆಯನ್ನು ಬೆಳಗುತ್ತಿದ್ದುದು ಹೊಳೆಯುವ ಆ ಕಣ್ಣುಗಳೇ ; ಆ ಕಣ್ಣುಗಳನ್ನು ನೋಡಿದರೆ ಅದೊಂದು ದೈವವೇ ಎಂದು ಯಾರಾದರೂ ಹೇಳಬಹುದಾಗಿತ್ತು. ತೆರೆದ ಬಾಯ ಇಕ್ಕೆಲಗಳಲ್ಲಿ ಕೋರೆ ದಾಡೆಯಂಥ ಎರಡು ಹಲ್ಲುಗಳೂ ಬೆಳಕಲ್ಲಿ ಮಿರುಗುತ್ತ ತೋರಿಕೊಳ್ಳುತ್ತಿದ್ದುವು. ಇನ್ನು ದೈವವೆನ್ನುವುದರಲ್ಲಿ ಸಂಶಯವೇನು ?

ಅಪ್ಪು ಆಗಲೇ ಮಾಯದ ಕುದುರೆಯನ್ನು ಏರಿ ಕೂತಿದ್ದರಿಂದಲೋ, ಜೋಗವನ್ನು ಕಳೆದು ಮಾಯವನ್ನು ತಳೆದಿದ್ದರಿಂದಲೋ ದೈವವನ್ನು ಕಣ್ಣಾರೆ ಕಂಡರೂ ಬೆರಗಾಗಲಿಲ್ಲ, ಅಂಜಲಿಲ್ಲ, ಅಳುಕಲಿಲ್ಲ. ದೈವದ ಕಣ್ಣುಗಳೂ ತನ್ನ ಕಣ್ಣುಗಳೂ ಕಲೆತ ಗಳಿಗೆಯಲ್ಲೇ ದೈವದ ಕುದುರೆ ಕದಲಿ ಮುಂದಕ್ಕೆ ಸರಿಯಿತು. ಒಡನೆಯೇ ಉಳಿದೆರಡು ಕುದುರೆಗಳೂ ಅದರ ಹಿಂದೆ ಓರೆಯಾಗಿ ಸೇರಿ

ಕೊಂಡುವು. ಈ ಎರಡು ಕುದುರೆಗಳ ಹಿಂದೆ ಅಪ್ಪು ಏರಿದ್ದ ಕುದುರೆಯೂ
ಹೊರಟಿತು. ಇದು ಏನೆಂದಾಗಲೀ ಇದು ಹೇಗೆಂದಾಗಲೀ ಕೇಳುವ ಕಾತರ
ವಾಗಲೀ ಕುತೂಹಲವಾಗಲೀ ಅಪ್ಪುವಿಗೆ ಆಗ ಇರಲಿಲ್ಲ. ಇದೆಲ್ಲ ಸೋಜಿಗ
ವೆಂದೂ ಅವನಿಗೆ ಅನಿಸಲಿಲ್ಲ. ಕಾಡು ಕತ್ತಲಲ್ಲೇ ಈ ನಾಲ್ಕು ಕುದುರೆಗಳ
ನಾಗಾಲೋಟ ಮೊದಲಿಟ್ಟಿತು. ಒಂದೊಂದು ಕುದುರೆಯ ಕಣ್ಣುಗಳಿಂದಲೂ
ಬೆಳಕು ಹೊರಹೊರಟು, ದಾರಿಯನ್ನು ಪಯಣಕ್ಕೆ ಬೆಳಗುತ್ತಿತ್ತು.

(10)

ಮಾತಿಲ್ಲದ ಈ ಪಯಣ ಎಷ್ಟು ದೂರ ಸಾಗಿತೋ ತಿಳಿಯದು. ಮೂಡ
ಲಲ್ಲಿ ಬೆಳ್ಳಿ ಮೂಡುವಾಗ ಅಡವಿಯ ಅಂಚನ್ನು ಮೆರವಣಿಗೆ ಮುಟ್ಟಿತು.
ಕುಡುಮದ ಕಾಡಿಗೆ ಹೊಂದಿಕೊಂಡಂತೆ ಒಂದು ಮಾಗಣೆ. ಮಾಗಣೆಯ
ಗಡಿಯೊಳಗೆ ಬರುತ್ತಲೇ ಕುದುರೆಗಳ ಓಟ ಮಂದವಾಯಿತು. ಮೆಲ್ಲಗೆ ಅಡಿ
ಯಿಡುತ್ತ ಗುಡ್ಡವೊಂದರ ಬದಿಗೆ ಬಂದು ನಿಂತವು. ಎದುರಿಗೇ ಬರುತ್ತಿದ್ದವ
ನೊಬ್ಬ ದಾರಿಹೋಕ ನಾಲ್ಕು ಕುದುರೆಗಳು ಒಟ್ಟಿಗೆ ಇರುವುದನ್ನು ಕಂಡು
ಅಲ್ಲಿಯೇ ನಿಂತ. ಅವನ ಕಣ್ಣಿಗೆ ಕಾಣಿಸಿಕೊಂಡವನು ಅಪ್ಪುವೊಬ್ಬನೇ.
ಕುದುರೆಗಳು ನಾಲ್ಕು, ಸವಾರನೊಬ್ಬ, ಉಳಿದವರೆಲ್ಲಿ ಹೋದರೋ ಎಂದು
ಕೊಂಡು ಅಪ್ಪುವಿನ ಹತ್ತಿರ ಬಂದು 'ಯಾವೂರು ?' ಎಂದು ಕೇಳಿದ. ಅಪ್ಪು
ವಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ತನಗೆ ಮಾತು ಬಾರದೆಂದು ಕೈಸನ್ನೆ
ಮಾಡಿ ತೋರಿಸಿದ.

ಅಷ್ಟರಲ್ಲಿ ಕೈಯಲ್ಲಿ ಸುರುಗಿ ಹಿಡಿದು, ಗುಡ್ಡದಿಂದ ಕೆಳಗಿಳಿದು ಬಂದ
ಬಂಟವೀರನೊಬ್ಬ ಈ ದಾರಿಹೋಕನನ್ನು ಕುರಿತು "ಯಾರಂತೆ ?" ಎಂದು
ಕೇಳಿದ. ಅದಕ್ಕೆ ದಾರಿಹೋಕ "ತಿಳಿಯಲಿಲ್ಲ ! ಕುದುರೆಗಳು ನಾಲ್ಕು, ಇರು
ವವನು ಒಬ್ಬ, ಅವನೂ ಮೂಕ !" ಎಂದು ಹೇಳಿದ ; "ಇಲ್ಲಿಯವನ ಹಾಗೇನು
ಕಾಣಿಸುವುದಿಲ್ಲ, ಗಟ್ಟದ ಮೇಲಿಂದ ಬಂದವನೋ ಏನೋ ! ಇನ್ನು ಮೂರು
ಕುದುರೆಗಳಿಗೆ ಯಾರಾದರೂ ಸವಾರರಿದ್ದಾರೋ, ಅದೂ ತಿಳಿಯದು. ಕುದುರೆ

ಗಳು ಇರುವ ರೀತಿಯನ್ನು ನೋಡಿದರೇನೋ ಇದ್ದಾರೆಂದು ತೋರುತ್ತದೆ." ಎಂದು ಮಾತನ್ನೂ ಸೇರಿಸಿದ.

ಗುಡ್ಡದಿಂದ ಕೆಳಗಿಳಿದು ಬಂದ ಬಂಟವೀರ ಸುತ್ತಲೂ ಕಣ್ಣಾಡಿಸಿದ. ನಿಂತಲ್ಲಿಂದಲೇ ಕಣ್ಣು ಹರಿಯುವಷ್ಟು ದೂರವೂ ನೋಡಿದರೆ ಬಟ್ಟಬಯಲು ; ಯಾವೊಬ್ಬ ಮನುಷ್ಯನೂ ಕಣ್ಣಿಗೆ ಕಾಣಿಸಿಕೊಳ್ಳಲಿಲ್ಲ. ನಾಲ್ಕೂ ಕುದುರೆಗಳಿಗೆ ಇರುವವನು ಒಬ್ಬನೇ ಮನುಷ್ಯ ; ಅವನೂ ಮೂಕ! ಇನ್ನು ಕುದುರೆಗಳು ತನ್ನವೇ ಎಂದುಕೊಂಡ. ಆದರೆ ಅವು ತನ್ನದಾಗುವ ಮೊದಲು ಈ ಮೂಕನನ್ನು ಅಲ್ಲಿಂದ ಹೊರಡಿಸಬೇಕಲ್ಲ? ನೋಡಿದರೇನು ಅವನು ಗಟ್ಟಿಯಾದ ಆಳಲ್ಲ; ಅವನ ಕೈಯಲ್ಲೇನು ಕಟ್ಟಿಗೆಯಿಲ್ಲ, ಕತ್ತಿಯಿಲ್ಲ ; ಮೋರೆಯಿಂದ ಅಂಜುಬುರುಕನೇ! ಅವನು ಇಲಿ, ತಾನು ಹುಲಿ! ತಾನು ಕೈಯೆತ್ತಿದರೇ ಅವನು ಕಣ್ಣು ಮುಚ್ಚಿ ಕೆಳಗೆ ಬೀಳುವನು, ಇನ್ನು ಜಗಳವೆಲ್ಲಿಯದು ? ಆದರೆ ಈ ದಾರಿಹೋಕ ಏನನ್ನುವನೋ? ಅವನ ಒಲವು ಯಾರ ಕಡೆಗೋ? ತಾನೇನೋ ಊರವನು ; ಈ ಮೂಕನಾದರೆ ಪರಊರವನು. ಆದರೂ ಹೆರವರ ಸೊತ್ತನ್ನು ಹಾರಿಸಬಾರದೆಂದು ಈ ದಾರಿಹೋಕ ತಡೆದರೆ ಮಾಡುವುದೇನು? ದಾರಿಹೋಕನೂ ಮೂಕನೂ ಒಂದಾದರೆ ಅವರಿಬ್ಬರನ್ನು ಎದುರಿಸುವಷ್ಟು ಬಲ್ಮೆ ತನ್ನಲ್ಲುಂಟೆ ?

ಗುಡ್ಡದಿಂದ ಕೆಳಗಿಳಿದು ಬಂದವನ ಮನಸ್ಸು ಹೀಗೆ ಆಸೆ ಅಂಜಿಕೆಗಳ ನಡುವೆ ತೂಗುಯ್ಯಾಲೆಯಲ್ಲಿರುವಾಗ, ದಾರಿಹೋಕ ತನ್ನ ದಾರಿಯನ್ನು ಹಿಡಿದು ಹೊರಟ. ಕುದುರೆ ಸವಾರನೊಬ್ಬನೋ ನಾಲ್ವರೋ ತಿಳಿದು ತನಗಾಗಬೇಕಾದುದು ಏನು ? ಕಾರಣವಿಲ್ಲದೆ ಕಾಲವನ್ನು ಇಲ್ಲಿ ಕಳೆದರೆ, ಸೂರ್ಯ ನೆತ್ತಿಯ ಮೇಲೆ ಬರುವಷ್ಟರಲ್ಲಿ ಮನೆಯನ್ನು ಸೇರಿಕೊಳ್ಳುವುದಾಗದು! ಯಾತಕ್ಕೂ ಬಾರದ ಈ ವಿಚಾರ ಬಿಸಿಲಿನ ಬೇಗೆಯನ್ನು ತಣ್ಣಗೆ ಮಾಡುವುದೇ ? ಹೀಗೆಂದುಕೊಂಡು ಅವನು ಬೆನ್ನು ತಿರುಗಿಸಿ ಬೇಗಬೇಗನೆ ಕಾಲುಹಾಕುತ್ತ ಹೊರಟು ಹೋದ. ಗುಡ್ಡದಿಂದ ಕೆಳಗಿಳಿದು ಬಂದವನ ದಾರಿಯಲ್ಲಿದ್ದ ಮುಳ್ಳು ಹೀಗೆ ಮರೆಯಾಯಿತು, ಅವನ ಕೈಯಲ್ಲಿದ್ದ ಕೋಲಿಗೆ ಇನ್ನಷ್ಟು ಬಲ ಬಂದಿತು. ಅವನು ಕುದುರೆಯೇರಿ ಕೂತಿದ್ದ ಮೂಕನನ್ನೊಮ್ಮೆ ನೋಡಿದ; ಮೂಕನಂತೆ ಆಟ ಹೂಡಿದ್ದ ಅಪ್ಪುವೂ ಈ ಬಂಟವೀರನನ್ನು ದಿಟ್ಟಿಸಿ ನೋಡಿದ.

ಅಪ್ಪುವಿನ ಕಣ್ಣಿಗೆ ಜೋಗದಲ್ಲಿ ಮೊದಲು ಅಪರಿಚಿತನಂತೆ ಕಂಡ ಆ ಬಂಟವೀರ ಮಾಯದಲ್ಲಿ ಬರುಬರುತ್ತ ಬದಲಾಯಿಸಿದ. ಅವನ ಮೈಕಟ್ಟು, ಮೋರೆಯ ಮಾಟ, ಆಕಾರದ ಪರಿ, ಕಣ್ಣಹೊಳಪು ಎಲ್ಲವೂ ಅಪ್ಪು ನೋಡುತ್ತಿದ್ದಂತೆಯೇ ಮಾರ್ಪಟ್ಟವು. ಬಂಟವೀರನ ಕಣ್ಣು ಕೆರಳಿ ಕೆಂಪಡರಿತು;

ಕಣ್ಣ ಮೇಲಣ ಹುಬ್ಬು ಹಣೆಯ ಮೇಲೆ ಹಬ್ಬಿಕೊಂಡಿತು; ತುಟಿ ಬಿರಿದು, ಹಲ್ಲು ಕಟಕಟನೆ ಕಡಿಯಿತು. ಈಗ ಅಪ್ಪುವಿನ ಎದುರಿಗಿದ್ದವನು ಅಣ್ಣವೇ !

ಅಪ್ಪುವಿನ ನೆನಪು ಮರುಕಳಿಸಿತು. ತಾನು ಎತ್ತಿಕೊಂಡ ಹುಲ್ಲುಕಡ್ಡಿಗೇ ಬೆದರಿ, ಅಣ್ಣು ನೆಲಕ್ಕೆ ಬಿದ್ದು ನೊರೆನೊರೆಯಾಗಿ ನೆತ್ತರು ಕಾರುತ್ತ ಸತ್ತ ನಲ್ಲವೆ? ಸತ್ತವನು ಎದ್ದುಬಂದದ್ದು ಹೇಗೆ? ಈಗೊಂದು ಗಳಿಗೆಯ ಮುಂಚೆ ತನ್ನೆದುರು ನಿಂತಿದ್ದವನು ಅಣ್ಣುವಲ್ಲ ಎಂದು ಅವನಿಗೆ ಕಂಡಿತವಾಗಿತ್ತು. ಹುಟ್ಟಿದಂದಿನಿಂದ ಒಡನಾಡಿ ಬೆಳೆದ ಅಣ್ಣುವನ್ನು ಅಪ್ಪು ಅರಿಯನೆ? ಗುಡ್ಡ ಇಳಿದು ಬಂದವನು ಅಣ್ಣುವಂತೂ ಅಲ್ಲ. ಆದರೆ ಅವನು ಮರೆಯಾಗಿ ಅಣ್ಣು ಅಲ್ಲಿ ಬಂದದ್ದು ಹೇಗೆ? ಒಂದು ವೇಳೆ, ಆಗ ಅವನು ಸಾಯದೆ, ಬದುಕಿಕೊಂಡಿದ್ದರೆ, ಈಗ ತನ್ನನ್ನು ಸಾಯಗೊಡದೆ ಉಳಿಸುತ್ತಾನೋ? ಹಗೆಯನ್ನು ತೀರಿಸಿಕೊಳ್ಳದೆ ಹೋಗುವನೋ?

ಅಪ್ಪು ಬೆದರಿ, ಅವನ ಕಣ್ಣುಗಳು ತಾವಾಗಿ ಮುಚ್ಚಿಕೊಂಡುವು. ಮತ್ತೆ ಅವನ ಕಣ್ಣು ತೆರೆದದ್ದು ಕಲಕಲ ಸದ್ದು ಅವನ ಕಿವಿಯಲ್ಲಿ ಮೊರೆದಾಗ. ಆಗ ಅವನು ಕಣ್ಣಾರೆ ಕಂಡದ್ದು ಅಣ್ಣುವನ್ನಲ್ಲ, ಅಣ್ಣುವಿನ ಮೋರೆಯುಳ್ಳ ಭೂತವನ್ನು. ಬಾಯಲ್ಲಿ ಕೋರೆದಾಡೆ, ನಡುವೆ ಇಳಿಬಿದ್ದು ರಕ್ತಕಾರುವ ನಾಲಗೆ, ಸಿಟ್ಟಾಗಿ ಅರಳಿಕೊಂಡು ಕೆಂಪಾದ ಕಣ್ಣು, ತಲೆಯ ಮೇಲೆ ಕಣ್ಣು ಕುಕ್ಕುವಂಥ ಅಗಲವಾದ ಅಣಿ, ಕೈಯಲ್ಲಿ ಹಿರಿದ ಕತ್ತಿ, ಕೊರಳಲ್ಲಿ ಕರುಳ ಮಾಲೆ, ಒಡಲಲ್ಲಿ ಉರಿಯುವ ಬೆಂಕಿ! ನಡುವನ್ನು ನಡುಗಿಸುತ್ತ, ಕಾಲನ್ನು ನೆಲಕ್ಕೆ ಬಡಿಯುತ್ತ, ಕೈಯ ಕತ್ತಿಯನ್ನು ಗಿರ್ರನೆ ಸುತ್ತಾಡಿಸುತ್ತ, ಬಾಯಿಂದ ಹೋಯೆಂದು ಕೂಗುತ್ತ ಈ ಭೂತ ಅಪ್ಪುವಿನ ಮೇಲೆ ಎರಗಿಬಂತು.

ಸೋತು ಸತ್ತವನ ಭೂತ ಗೆದ್ದು ಬದುಕಿದವನನ್ನು ಕಾಡದೆ ಬಿಡುವುದೆ? ಅಪ್ಪುವೇನು ಅವನನ್ನು ಕೈಯಾರೆ ಕೊಲ್ಲಲಿಲ್ಲ, ದಿಟ. ಅಪ್ಪು ಇಟ್ಟ ಗಡುವನ್ನು ಕಾಯುವುದು ಬೀಡಿನ ದೈವಗಳ ಹೊಣೆಯಷ್ಟೆ? ತಮ್ಮನ್ನು ನಂಬಿ ನಡೆದುಕೊಂಡವರನ್ನು ಕೆಡುಕಾಲ ಬರದಂತೆ ಕಾಪಾಡುವುವೆಂದು ಜನರಿಗೆ ದೈವಗಳು ಕೊಟ್ಟ ಮಾತುಂಟು ತಾನೆ? ಇಷ್ಟರ ಮೇಲೆ, ಅಣ್ಣುವಂಥ ಕೇಡಿಗನನ್ನು ಕಾಡುಪಾಲು ಮಾಡಬೇಕೆಂದು ಬೀಡವರೆಲ್ಲ ಆಗಾಗ ಅಂದುಕೊಳ್ಳುತ್ತಿದ್ದುದನ್ನು ದೈವಗಳು ತಿಳಿದಿದ್ದುವು. ದೈವಗಳಿಗೆ ತಿಳಿಯದಂತೆ ಜನರ ಕಣ್ಣಾಲೆಯಾಗಲಿ ಮಿಡಿಯುವುದುಂಟೆ? ಮೂಗಿನ ಹೊಳ್ಳೆಯೊಳಗೆ ಗಾಳಿ ಸುಳಿಯು

ವುದಾದರೂ ಉಂಟೆ ? ಬೀಡಿಗೆ ಹಗೆಯಾಗಿದ್ದ ಅಣ್ಣುವೂ ಹೋದ ; ಅವನಿಗೆ ಅಂಜಿ ನೀತಿಯನ್ನು ಬಿಟ್ಟ ಬೀಡೂ ಅವನ ಹಿಂದೆಯೇ ಹೋಯಿತು ! ದೈವಗಳು ಮಾಡುವ ಮಾಟ ಇದು.

ಆದರೆ ದೈವಗಳನ್ನು ನಂಬಿದ್ದ ಅಪ್ಪುವಿಗೆ ಈಗಲಾದರೂ ಕೆಡುಕಾಲ ಬಂತಲ್ಲ? ಆಗ, ಮನುಷ್ಯನಾಗಿದ್ದ ಅಣ್ಣುವನ್ನು ಕೊಂದು ಅಪ್ಪುವನ್ನು ಉಳಿಸಿದ ದೈವಗಳು ಈಗ ಕೊಲೆ ಭೂತವಾಗಿ ಕಾಡುತ್ತಿರುವ ಅಣ್ಣುವಿನ ಕಾಟದಿಂದ ಅಪ್ಪುವನ್ನು ಉಳಿಸಲಾದೀತೋ ? ನೀತಿಗೆಟ್ಟ ಭೂತಕ್ಕೆ ದೈವಗಳ ಅಂಕೆಯುಂಟೋ ? ಅಂಜಿಕೆಯುಂಟೋ ? ಭೂತದ ಆಟವನ್ನು ದೈವಗಳು ಅಡಗಿಸಬಹುದೋ ?

ಭೂತದ ಕೈಯಲ್ಲಿದ್ದ ಕತ್ತಿ ಬೀಸಿ ಅಪ್ಪುವಿಗೆ ಬಡಿಯಿತು. ತಪ್ಪಿಸಿಕೊಳ್ಳಲೆಂದು ಅಪ್ಪುವಿನ ತಲೆ ಕೆಳಕ್ಕೆ ಬಾಗಿತು. ತಲೆಯ ಮೇಲಿದ್ದ ಮುಂಡಾಸು ಕತ್ತಿಯ ಹೊಡೆತಕ್ಕೆ ಸಿಕ್ಕು ಹರಿದ ಹಚ್ಚಡದಂತಾಯಿತು. ಮುಂಡಾಸಿಗೆ ಸೋಕಿದೊಡನೆ ಭೂತದ ಕತ್ತಿಯೂ ಒಡೆದು ಪುಡಿಪುಡಿಯಾಯಿತು. ಭೂತದ ಕೈಯಲ್ಲಿ ಕತ್ತಿಯ ಉಕ್ಕಿನ ಹಿಡಿ ಮಟ್ಟಿಗೆ ಉಳಿದುಕೊಂಡಿತು. ಇದನ್ನೆಲ್ಲ ನೋಡುತ್ತಿದ್ದ ಅಪ್ಪು, ಮುಂದಿದ್ದ ಭೂತ ಸಿಟ್ಟಾಗಿ ಕತ್ತಿಯ ಉಕ್ಕಿನ ಹಿಡಿಯನ್ನೇ ತನ್ನೆಡೆಗೆ ರೊಯ್ಯನೆ ಎಸೆದದ್ದನ್ನೂ ನೋಡಿದ. ಉಕ್ಕಿನ ಹಿಡಿ ತನ್ನ ಮೈಯನ್ನು ಸೋಕದಲೆ ತನ್ನ ಮೈಯೊಳಗೆ ತೂರಿ ಬೆನ್ನಲ್ಲಿ ಹೊರಗೆ ಬಂದು ದೂರ ಬಿದ್ದುದನ್ನೂ ನೋಡಿದ. ಕುದುರೆಯಿಂದ ಕೆಳಗಿಳಿದು ನಿಂತ ; ಕುದುರೆ ಮುಂದೆ ಸರಿಯಿತು, ಉಳಿದ ಮೂರರೊಂದಿಗೆ ಸೇರಿಕೊಂಡಿತು.

ಮಣ್ಣೆಂದುಕೊಂಡಿದ್ದ ತನ್ನ ಮೈಯೇನು ಗಾಳಿಯಾಯಿತೋ ಎಂದು ಅಪ್ಪು ಅಚ್ಚರಿಗೊಳ್ಳುವಾಗಲೇ ಎದುರಿಗಿದ್ದ ಭೂತವೂ ಕಪ್ಪಿಟ್ಟು ಕರಗುತ್ತ ಬಂದು ಹೊಗೆಯಂತಾಗಿ, ಅಪ್ಪುವಿನ ಕಾಲ ಬಳಿ ಬಂದು ಬಲಗಾಲ ಗೆಜ್ಜೆಯಾಗಿ ಸೇರಿಕೊಂಡಿತು. ಭೂತದಂತೆ ತನ್ನ ಮೇಲೆ ಎರಗಿ ಬಂದುದು ಅಣ್ಣುವೋ ? ಅಣ್ಣುವಿನ ಒಡಲೊಳಗಿನ ಉಸಿರೋ ? ಸತ್ತ ಅಣ್ಣುವಿನ ಮೈಯಿಂದ ಮೇಲೆದ್ದು

ದ

ಹೊರಬಂದ ಜೀವವೋ ? ಅಣ್ಣ ಸಾಯುವಾಗ ಅವನ ಸಿಟ್ಟು ಹೆಪ್ಪುಗಟ್ಟಿ ಉಳಿದುಕೊಂಡಿತೋ ? ಅವನ ಕೆಡುತನವಷ್ಟೆ ಗಟ್ಟಿಯಾಗಿ ತನ್ನನ್ನು ಕಾಡಲೆಂದು ಬಂದಿತೋ ? ತನ್ನನ್ನೇ ಅರಸುತ್ತ ಅಲೆದಾಡಿ ಗುಡ್ಡದಿಂದ ಇಳಿದು ಬಂದವನ ಮೈಮೇಲೆ ಮೂಡಿಕೊಂಡಿತೋ ? ಗುಡ್ಡದಿಂದ ಇಳಿದು ಬಂದವ

ನೇನೋ ಕುದುರೆಗಳಿಗೆ ಆಸೆಪಟ್ಟನೆಂಬುದು ಅಪ್ಪುವಿಗೆ ತಿಳಿದಿತ್ತು. ತನ್ನನ್ನು ತೀರಿಸಿ ಕುದುರೆಗಳನ್ನು ಹಾರಿಸಿಕೊಂಡು ಹೋಗಬೇಕೆಂದು ಅವನು ಹವಣಿಸಿದುದೂ ಅವನಿಗೆ ತಿಳಿದಿತ್ತು. ಇಂಥ ಕೆಡುತನ ಅವನಲ್ಲಿ ಕಾಣಿಸಿಕೊಂಡಾಗಲೇ ಅಣ್ಣುವಿನ ಭೂತ ಅವನನ್ನು ಹೊಕ್ಕು ತನ್ನ ಮೇಲೆರಗಿ ಬಂತೋ ? ಭೂತದ ಆಟಕ್ಕೂ ಒಂದು ಆಸರೆ ಬೇಕಲ್ಲ ?

ಅಪ್ಪುವಿನ ನೆನಪಿನ ಅಂಗಳದಲ್ಲಿ ಎಳೆತನದ ಕೇಳ್ಮಿಗಳು ಸುತ್ತಾಡಿದುವು—ಸತ್ತವನು ಗಾಳಿಯಾಗಿ ಕಾಣದಾಗುತ್ತಾನೆ ; ಮೈಯನ್ನು ಬಿಟ್ಟರೂ ಮೈಯ ಹಂಬಲ, ಹಗೆತನ, ಹಿರಿಮೆಗಳಿಗೆ ಈ ಗಾಳಿ ಅಂಟಿಕೊಂಡೇ ಇರುವುದು ; ಮೈಯಿರುವಾಗ ಇದ್ದ ಹಗೆತನ ಸತ್ತಮೇಲೆ ಕಾಣದ ಗಾಳಿಯಲ್ಲಿ ಕಾಣುವ ಹೊಗೆಯಂತೆ ಕಾಣಿಸಿಕೊಳ್ಳುವುದು ; ಹಗೆತನದ ಹೊಗೆ ದಟ್ಟವಾಗಿ ಕಪ್ಪಿಟ್ಟುಕೊಂಡರೆ ಅದೇ ಕೊಲೆ ಭೂತ ; ಹಗೆಯನ್ನು ಹುಡುಕಿ ಸೇಡನ್ನು ತೀರಿಸಿಕೊಳ್ಳುವವರೆಗೆ ಈ ಹೊಗೆ ಕರಗಲಾರದು, ಭೂತ ಮರೆಯಾಗಲಾರದು ; ಆದರೆ ಹಗೆಯ ಹಿಂದೆ ದೈವದ ಬಲಯಿರುವುದಾದರೆ ಭೂತ ಬಂಟನಾಗಿ ಹಗೆಯ ಕಾಲಿಗೆರಗುವುದು. ತನ್ನ ಬಲಗಾಲಲ್ಲಿ ಸೇರಿಕೊಂಡ ಗೆಜ್ಜೆ ಭೂತವು ಬಂಟನಾದದ್ದರ ಗುರುತೋ ?

(11)

ಗಗ್ಗರ ಗೆಜ್ಜೆ ಸಣ್ಣದಾದರೂ ಅಪ್ಪುವಿನ ಬಲಗಾಲು ಭಾರವಾಯಿತು ; ಗುಡ್ಡದ ಕಡೆಗೇ ಸೆಳೆತ ಕಂಡುಕೊಂಡಿತು. ಅಪ್ಪುವಿಗೆ ಗುಡ್ಡವೇರಿ ಹೋಗುವ ಮನಸ್ಸಾಯಿತು. ಗುಡ್ಡವಿಳಿದು ಬಂದ ಅಣ್ಣು ಈಗ ತನ್ನೊಳಗೆ ಸೇರಿಕೊಂಡನಲ್ಲ ? ಬಲಗಾಲಲ್ಲಿ ಗೆಜ್ಜೆ ತೋರಿಕೊಂಡ ಮೇಲೆ ಅಪ್ಪು ಮೊದಲ ಅಪ್ಪುವಲ್ಲ. ಈಗ ಅವನಲ್ಲಿ ಹೊಸ ಹುಮ್ಮಸು, ಹಿಂದೆಂದೂ ಇಲ್ಲದ ವೀರಾವೇಶ. ಎಲ್ಲಿಂದಲೋ ಕತ್ತಿ, ಕಡಸಲೆಗಳು ಬಂದು ಅವನ ಕೈಯಲ್ಲಿ ಕೂಡಿಕೊಂಡಿದ್ದುವು. ಮಿರಿಮಿರಿ ಮಿಂಚುತ್ತಿದ್ದ ಕತ್ತಿಯ ಅಲುಗಿನಲ್ಲಿ ಅಪ್ಪು ತನ್ನ ಮೋರೆಯನ್ನು ಗುರುತಿಸಿದ. ಅರಳಿದ ಕಣ್ಣುಗಳ ಸುತ್ತ ಕರಿಯ ಬಣ್ಣ ಓರಣವಾಗಿ ಹಣೆಯ ಕೆಳಭಾಗವನ್ನೆಲ್ಲ ಸುತ್ತರಿದಿದೆ. ಮೂಗಿನ ತುದಿಯ ಮೇಲೆ ಗುಂಡಗೆ

ಕಾವಿ ಬಣ್ಣದ ಹಣ್ಣು; ಬಿರಿದ ಕೆಂದುಟಿಗಳ ಎರಡೂ ಕಡೆಗಳಿಂದ ಕೋರೆ ದಾಡೆ; ಗಲ್ಲದ ಮೇಲೆ ಹಳದಿಯ ಚಿತ್ತಾರ; ಇಕ್ಕೆಲಗಳಲ್ಲಿ ತಿದ್ದಿದ ಮೀಸೆ; ಕಿವಿಗಳನ್ನು ಮುಚ್ಚಿರುವ ಅಗಲವಾದ ಬಂಗಾರದ ಓಲೆಗಳು; ತಲೆಯ ಮೇಲೆ ಬಿಗಿದ ಮುಡಿ, ಕೇದಗೆಯ ಮತ್ತು ಕಿಸುಗಾರ ಹೂಗಳನ್ನು ಸೇರಿಸಿದ ಮುಂದಲೆ; ಸುತ್ತಲೂ ಹರಡಿಕೊಂಡು ವೀರರಸವನ್ನು ಮೆರೆಯಿಸುವ ಸಿಂಗಾರದ ಅಣಿ.

ಮುಡಿಯಿಂದ ಉದುರಿದ ಹಿಂಗಾರದ ಹುಡಿ ಮೈಯೆಲ್ಲ ಮುಚ್ಚಿತ್ತು. ಕಣ್ಣು ಕೋರೈಸುವಂಥ ಬಂಗಾರದ ಬಣ್ಣ; ಅಡಿಯಿಂದ ಮುಡಿಯವರೆಗೆ ಅಮಲೇರಿಸುವಂಥ ಕಂಪು; ಸೋಕಿದೊಡನೆ ಮೈಯನ್ನೇ ಮರೆಸುವಂಥ ಮೋಡಿ. ಬಲಗಾಲನ್ನೇ ಎತ್ತಿ ಎತ್ತಿ ನೆಲಕ್ಕೆ ಅಪ್ಪಳಿಸುವಾಗ ಆ ಗೆಜ್ಜೆಯ ಗಣಗಣಕ್ಕೆ ನೆಲವೇ ಬಿರಿಯಿತೋ, ಬಾನೇ ನುಲಿಯಿತೋ, ಬೀಸುವ ಗಾಳಿಯೇ ಬೆದರಿ ಬಿರುಗಾಳಿಯಾಗಿ ಓಡಿತೋ, ಮೂಡಲಲ್ಲಿ ಮೂಡಿಕೊಂಡ ಬೆಳಕು ಬೆದರಿ ಹಿಂದೆಗೆಯಿತೋ, ಏನಾಯಿತೆಂದು ತಿಳಿಯದು! ಸುತ್ತ ಎತ್ತೆತ್ತಲೂ ಕತ್ತಲೆ; ಅಣ್ಣುವನ್ನು ಒಳಗೊಂಡ ಅಪ್ಪು ಅಣ್ಣಪ್ಪು ಭೂತವಾಗಿ ಕುಣಿಯುವಲ್ಲಿ ಮಾತ್ರ ಕೆಂಬಣ್ಣದ ಉರಿ ಬೆಳಕು! ಆ ಬೆಳಕಲ್ಲಿ ಎದುರೇ ಇದ್ದ ಗುಡ್ಡ ದೊಡ್ಡದೊಂದು ಬೆಂಕಿಯ ಕಿಡಿಯಂತೆ ಕಂಡಿತು.

ಗುಡ್ಡವನ್ನು ನೋಡುತ್ತಲೆ ಅಣ್ಣಪ್ಪು ಭೂತದ ಕುಣಿತದಲ್ಲಿ ಆವೇಶ ಹೆಚ್ಚಿತು. ಒಡಲೊಳಗಿನ ದುಡಿಯ ಮಿಡಿತಕ್ಕೆ ಸರಿಯಾಗಿ ಕಾಲೆತ್ತಿ ಕಾಲಿಟ್ಟು, ಕೈಗಳನ್ನೆತ್ತೆತ್ತಿ ಕತ್ತಿಯನ್ನು ಹಿರಿದು ಹಿರಿದು ತೂಗುತ್ತ, ಕಣ್ಣಾಲೆಗಳನ್ನು ಗಿರಿ ಗಿರಿ ತಿರುಗಿಸುತ್ತ, ಮಂಡೆಯ ಮೇಲಣ ಅಣಿ ನಾಲ್ಕೂ ಕಡೆ ತುಯ್ದಾಡುತ್ತಿರಲು ಭೂತ ಗುಡ್ಡದ ಕಡೆ ಓಡಿತು. ಓಡೋಡುತ್ತ ಅದು ಅಡಿಯಿಟ್ಟ ಎಡೆಯಲ್ಲೆಲ್ಲ ಕಿಚ್ಚಿನ ಕಿಡಿಗಳು ಹಾರಿದುವು. ಕಿಡಿಗಳು ಒಂದಕ್ಕೊಂದು ಕೂಡಿಕೊಂಡು ಗುಡ್ಡದ ಬದಿಯಿಂದ ತುದಿಯವರೆಗೆ ಏಣಿ ಸಿದ್ಧವಾಯಿತು. ಗುಡ್ಡದ ತುದಿಯಲ್ಲಿ ಗಿರ್ರನೆ ತಿರುಗುತ್ತಿದ್ದ ಗುಳಿಗ ಕೆಂಡದ ಏಣಿಯನ್ನು ಕಂಡೊಡನೆ ಏಣಿಯ ಮೇಲೆ ಕಾಲು ಹಾಕಿತು; ಏಣಿಯಿಂದ ಕೆಳಗೆ ಇಳಿದು ಬಂತು. ಮಾಯ ಕಳೆದು ಜೋಗವಾಗಿ ಬಂದಿತು.

ಗಂಡು ಗಾಳಿಯೂ ಹೆಣ್ಣು ಕಾಳಿಯೂ ಕೂಡಿಕೊಂಡಾಗ ಕಾಣಿಸಿಕೊಂಡ ಕೂಸು ಗುಳಿಗ; ಹುಟ್ಟುವಾಗಲೆ ಕೆಟ್ಟ ಭೂತ. ಎಲ್ಲರೂ ಬರುವಂತೆ ಬಾರದೆ ತಾಯ ಮೊಲೆಯಿಂದ ಬಂದು, ತಾಯ ಮೊಲೆಯನ್ನೇ ಹರಿದು ತಿಂದು, ನೋವಿಂದ ನರಳಿದ ತಾಯನ್ನು ಕಂಡು ಕೈತಟ್ಟಿ ಕಿಸಕ್ಕನೆ ನಕ್ಕು,



ಬಾನಿಗೆ ಜಿಗಿದು ಬಯಲನ್ನು ಹೊಲಿದು, ಕಡಲನ್ನು ಕುಡಿದು, ಆನೆ ಕುದುರೆಗಳ ನೆತ್ತರನ್ನೇ ಹೀರಿ, ಜನರನ್ನು ಕಾಡುವ ಈ ಭೂತ ಜೋಗವಾದರೂ ಮಾಯದ ವಿನಯವನ್ನು ತೋರಿಸುತ್ತ ಅಣ್ಣಪ್ಪುವಿಗೆ ಮಣಿಯಿತು. ಅಣ್ಣಪ್ಪುವಿನೆದುರು

ಕೈಮುಗಿದು ನಿಂತು, "ಓ ಬಲವುಳ್ಳ ಭೂತವೇ, ಒಂದು ಕ್ಷಣ ಕಿವಿಗೊಟ್ಟು ಕೇಳಿ. ಈವರೆಗೆ ಇಲ್ಲಿಗೆ ಹತ್ತಾರು ದೈವಗಳು ಬಂದು ಗುಡ್ಡವನ್ನು ಏರಲಾರದೆ, ತುದಿಯ ಮೇಲೆ ಇರಲಾರದೆ, ಓಡಿಹೋದುವು. ಹಸಿರು ಹುಲ್ಲು ಹಾಸಿದ್ದರೂ ಮೇವಿಗೆಂದು ಹಸಿದ ಹಸುಕರು ಸುಳಿಯದು. ಬೆಳಕು ಬರಗೊಡದಂತೆ ಮರ ಗಿಡ ಬೆಳೆದಿದ್ದರೂ ಆಸರೆಗೆಂದು, ಅಡಗಿಕೊಳ್ಳಲೆಂದು ಹುಲಿಯಾಗಲಿ, ಚಿರತೆ ಯಾಗಲಿ ಬಾರದು. ಹಣ್ಣಿಗೆಂದು ಹಕ್ಕಿ ಬಾರದು, ಹೂವಿಗೆಂದು ದುಂಬಿ ಬಾರದು. ಅಡವಿಯೊಳಗೆ ಅಟ್ಟಡವಿ, ಕಾಡೊಳಗೆ ಕಗ್ಗಾಡು ಇದು. ಕೊಪ್ಪರಿಗೆಯಿದೆ, ಕೋಲುದೀಪ ಇಡುವವರಿಲ್ಲ. ಅಂಗಳವುಂಟು, ಮಂಡಲ ಬರೆಯುವವರಿಲ್ಲ. ಈ ಗುಡ್ಡಕ್ಕೊಂದು ಶಾಪ. ಇಲ್ಲಿಗೆ ಕಾಲಿರಿಸಿದ ಯಾವೊಂದು ಪ್ರಾಣಿಯೂ ಮೂರು ಗಳಿಗೆಗೆ ಮೀರಿ ಜೀವದಿಂದ ಇರಲಾರದು. ಪ್ರಾಣಿ ಯಾಗಲಿ, ಪಕ್ಷಿಯಾಗಲಿ, ಮನುಷ್ಯನಾಗಲಿ, ಭೂತವಾಗಲಿ, ಈ ಶಾಪ ತಟ್ಟದೆ ಬಿಡದು" ಎಂದು ಹೇಳಿತು.

ಈ ಮಾತು ಕೇಳಿ ಅಣ್ಣಪ್ಪವೇನು ಬೆದರಲಿಲ್ಲ. ಬಲಗಾಲನ್ನೊಮ್ಮೆ ನೆಲಕ್ಕೆ ಅಪ್ಪಳಿಸಿ ಹೋ ಎಂದಿತು. ಗಗ್ಗರದ ಸದ್ದು ಗುಳಿಗಭೂತದ ಗುಂಡಿಗೆಯನ್ನೂ ಗಡಗಡ ನಡುಗಿಸಿತು. ಅದರ ಮಂಡೆಯ ಮೇಲಣ ಅಣಿ ಅದುರಿ ಓಲಾಡಿತು ; ಎದೆಯ ಮೇಲಣ ಮಾಲೆ ನಿಂತಲ್ಲಿ ನಿಲ್ಲದೆ ತೂಗಾಡಿತು ; ಕೈಯ ಕತ್ತಿ ಜೋಗದ ಗುಳಿಗದ ಮೋರೆಯ ನೇರಕ್ಕೆ ಹಿರಿಯಿತು. ಗುಳಿಗದ ಕಡೆಗೆ ಕಣ್ಣು ಹೊರಳಿಸಿ, ಬಾಯಿ ತೆರೆದು "ಯಾರ ಶಾಪವಂತೆ ?" ಎಂದು ಅಬ್ಬರಿಸಿತು. ಜೋಗದ ಗುಳಿಗದ ನೆತ್ತರು ತಣ್ಣಗಾಯಿತು, ಬಾಯಿ ಆರಿತು, ಮೈಯಲ್ಲಿ ಬೆವರು ಹರಿಯಿತು, ಕಣ್ಣು ಮಂಜಾಯಿತು. ಮತ್ತೆ ಕೈ ಮುಗಿದು ನಡು ಬಾಗಿಸಿ, "ಅಯ್ಯಾ, ನಾನರಿಯೆ ! ಆದರೆ ಇಲ್ಲಿ ಒಕ್ಕಲಾಗಿರುವ ಭೂತವೊಂದಿದೆ, ಗುಳಿಗನೆಂದು. ಅದರ ಬಲ ಏನೆಂದು ಹೇಳಲಿ ? ಉಪ್ಪನ್ನು ಕರ್ಪೂರ ಮಾಡಿ ದೀಪ ಹಚ್ಚುವ ಭೂತ ಅದು ; ಕೋಡುಗಲ್ಲನ್ನು ಕಟಕಟನೆ ಕಡಿದು ತಿನ್ನುವ ಭೂತ; ಗುಡ್ಡವನ್ನೇ ಮಗುಚಿ ಬೀಳಿಸುವ ಭೂತ ; ಉದ್ದನ್ನು ಮುದ್ದೆಮಾಡಿ ಕೊಂಡು ಬಡಿಯುವ ಭೂತ. ಬಡಗಣ ಗಟ್ಟದಿಂದ ತೆಂಕಣ ಕಡಲವರೆಗೆ ಎಲ್ಲರೂ ಅದಕ್ಕೆ ಬೆದರುವರು !" ಎಂದಿತು.

"ಬೆದರುವವರು ಬೆದರಲಿ! ಓಡುವವರು ಓಡಲಿ! ದೂರ ಇರುವವರು ದೂರವೇ ಇರಲಿ! ಅಣ್ಣಪ್ಪ ಬೆದರುವುದಿಲ್ಲ, ಓಡುವುದಿಲ್ಲ, ದೂರ ಸರಿಯುವುದಿಲ್ಲ! ಅಪ್ಸರ ಮೇಲೆ, ಜೋಗಕ್ಕೆ ಮಾಯ ತಿಳಿಯದು, ಆದರೆ ಮಾಯಕ್ಕೆ ಜೋಗ ತಿಳಿಯದೆ? ನೀನು ಯಾರೆಂದು ನಾನರಿಯೆನೆ? ನಿನ್ನ ಬಲ ಎಷ್ಟೆಂದು ಅರಿಯೆನೆ? ಈಗ ನಾನು ನಿನ್ನ ಉಸಿರನ್ನು ಅಡಗಿಸುವೆನೆಂಬುದನ್ನು ಮಾತ್ರ ನೀನರಿಯೆ!" ಎಂದು ಅಬ್ಬರಿಸಿದೊಡನೆ ಗುಳಿಗ ಭೂತ ಜೋಗವನ್ನು ಕಳೆದು ಮಾಯವನ್ನು ತಳೆಯಿತು. ಗುಡ್ಡದ ಮೇಲೇರಿ ತನ್ನ ನೆಲೆಯಾದ ಗೋಳಿ ಮರವನ್ನು ಹತ್ತಿ ಅಡಗಿ ಕೂತಿತು. ಅದನ್ನು ಅಟ್ಟೆಸಿಕೊಂಡು ಹೋಗಿ ಅಣ್ಣಪ್ಪ ಗುಡ್ಡವೇರಿ ಬಂದಾಗ, ಗುಳಿಗ ತೆಂಗಿನಮರದ ಎತ್ತರ ಹೊಗೆಯಾಗಿ ಗುಡ್ಡವನ್ನೆಲ್ಲ ಕಪ್ಪಗೆ ಕವಿದಿತು.

ಭೂತ ಎಲ್ಲಿದೆಯೆಂದು ತಿಳಿಯಲಾರದಂತೆ ಮೆತ್ತಿಕೊಂಡ ಹೊಗೆ ಉಸಿರು ಕಟ್ಟುವಂತೆ ಕವಿದಿದ್ದರೂ, ಅಣ್ಣಪ್ಪ ತನ್ನ ಮಾಯದಿಂದ ಬಲವಾದ ಬಿರುಗಾಳಿಯೆಬ್ಬಿಸಿ ಗೋಳಿಮರವನ್ನು ಗುರುತಿಸಿ, ಅದರಲ್ಲಿ ಅಡಗಿಕೊಂಡಿದ್ದ ಗುಳಿಗದ ಮುಂದಲೆಯನ್ನು ಹಿಡಿದು ಎಳೆಯಿತು. ಗುಳಿಗಭೂತ ತಾನೇರಿದ್ದ ಗೋಳಿ ಮರವನ್ನೇ ಬುಡಸಮೇತ ಕಿತ್ತು ಅಣ್ಣಪ್ಪುವಿಗೆ ಬಡಿಯಿತು. ಬಡಿತಕ್ಕೆ ಗುಡ್ಡವೇ ನಡುಗಿತು. ಅಣ್ಣಪ್ಪ ತಾನೇರಿದ ಗುಡ್ಡವನ್ನೇ ತಳಮೇಲೆ ಮಾಡಿ ಮಗುಚಿ ಬೀಳಿಸಿತು. ಅದರಡಿಯಿಂದ ಜಾರಿಕೊಂಡು ಗುಳಿಗ ಬಾನಲ್ಲಿ ಅಡರಿಕೊಂಡು ಕರಿಮೋಡವಾಗಿ ಗುಡ್ಡವನ್ನೇ ತೇಲಿಸಿಕೊಂಡು ಹೋಗುವಂತೆ ಎಡೆ ಬಿಡದ ಮಳೆ ಕರೆಸಿತು. ನೀರಲ್ಲಿ ಹರಿದು ಹೋಗುತ್ತಿದ್ದ ಗುಡ್ಡವನ್ನು ಅಣ್ಣಪ್ಪ ತನ್ನ ಬಲಗಾಲ ಉಗುರನ್ನು ಊರಿ ನೆಲೆಗೊಳಿಸಿ, ತಾನು ಗಂಡು ಹೊಳೆಯಾಗಿ ಮಳೆಯ ನೀರಿಗೆ ಇನ್ನಷ್ಟು ಹಿರಿದಾಗಿ ಹಿಗ್ಗಿ ಮುಗಿಲೆತ್ತರ ಅಲೆಯೇರಿಸಿ ಮಾಯದ ಮೋಡವನ್ನು ದಿಕ್ಕುದಿಕ್ಕಿಗೆ ಚದುರಿಸಿತು. ಗುಳಿಗಭೂತದ ಪಡೆಯಾದ ಹದಿನಾರು ಕಾಳಭೂತಗಳೂ, ಹದಿನಾರು ದೂತಭೂತಗಳೂ, ಹದಿನೆಂಟು ಶನಿಗುಳಿಗಗಳೂ, ಹದಿನೆಂಟು ಮಂತ್ರಗುಳಿಗಗಳೂ, ಇಪ್ಪತ್ತು ಗುಳಿಗ ಬಂಟಭೂತಗಳೂ ಬೆದರಿ ದಿಕ್ಕು ಕಾಣದೆ ಓಡಿದುವು.

ಬೇರೆ ದಾರಿ ಕಾಣದೆ, ಎದುರಾಳಿಯನ್ನು ಅಡಗಿಸಲಾರದೆ ಗುಳಿಗಭೂತವು

ಮಾಯವನ್ನು ತೊರೆದು ಜೋಗವನ್ನು ತೋರಿ ಅಣ್ಣಪ್ಪುವಿನ ಕಾಲಿಗೆ ಬಿದ್ದು, ಕೈಮುಗಿದು, ತಪ್ಪಿಗೆ ಕೋಲ ಕೊಡುವೆನೆಂದಿತು ; ಚಪ್ಪರದ ಬಲಿ ಸಲಿಸುವೆನೆಂದಿತು ; ಬಯಸಿದೆಡೆ ಬದಿ ಮಾಡಿಕೊಡುವೆನೆಂದಿತು. ಅಣ್ಣಪ್ಪುವಿನ ಸಿಟ್ಟು ಇಳಿಯಿತು. " ಓ ಗುಳಿಗ, ಹುಟ್ಟಿದಾಗಲೇ ಕೆಟ್ಟತನವನ್ನು ತೋರಿದವ, ನೀನು ! ಆಸೆ ಮೋಸಗಳಿಂದ ಬಿಸಿ ನೆತ್ತರನ್ನು ಅರಸುತ್ತ, ನೊರೆಕಳ್ಳನ್ನು ಬಯಸುತ್ತ ಎಲ್ಲ ಜೀವಕ್ಕೂ ಉಪದ್ರವ ಕೊಟ್ಟು ಕಾಡುವೆಯಲ್ಲ ! ಮನುಷ್ಯರು 'ಸಹಾಯಕ್ಕೆ ದೈವ, ಮೂಲಕ್ಕೆ ಭೂತ' ಎಂದುತಾನೆ ನಮ್ಮನ್ನು ನಂಬುವರು, ನಮಗೆ ನಡೆದುಕೊಳ್ಳುವರು, ನಮ್ಮ ಆಣೆ ಎತ್ತುವರು ? ಹೀಗೆ ಆಸರೆವುಂಟೆಂದು ಬಂದರೆ ಅವರ ಉಸಿರನ್ನೆ ಹೀರುವುದೇ ? ಸಿರಿಯನ್ನು ಬಯಸಿ ಬಂದವರ ಸಾವು ತರಿಸುವುದೆ ? ಬೇಡಿದವರನ್ನು ಬಾಡಿಸುವುದೆ ? ಬೀಡಿಗೆ ಕರೆತಂದರೆ ಬೂದಿ ಮಾಡಿ ಹೋಗುವುದೆ? ನೀರಿಗೆ ಮೀನು, ಅಡವಿಗೆ ಹಂದಿ ಇರುವಂತೆ ಬೀಡಿಗೆ ಭೂತ ಅಲ್ಲವೆ ? ಇನ್ನು ಕಪಟವರಿಯದವರನ್ನು ಕಾಡಬಾರದು, ಮನುಷ್ಯರ ಮನಸ್ಸು ಮರುಳು ಮಾಡಬಾರದು, ಉಣ್ಣುವ ಅನ್ನಕ್ಕೆ ನೆತ್ತರು ಸೇರಿಸಬಾರದು, ಹಾಸುಗೆಯಲ್ಲಿ ಹೇಸಿಗೆ ಒಡ್ಡಬಾರದು. ಒಳ್ಳೆಯವರಿಗೆ ಒಳಿತು, ಕೆಟ್ಟವರಿಗೆ ಕೇಡು—ಇದನ್ನು ನಡೆಸುವುದು ನಮ್ಮ ಧರ್ಮ, ನೆನಪಿರಲಿ ! ಹೀಗೆ ನಡೆಯುವೆಯಾದರೆ ನೆಮ್ಮದಿಯಿಂದ ಹೋಗು. ತಪ್ಪಿದರೆ ನಿನ್ನ ಆಟ ತೀರಿತೆಂದು ತಿಳಿ ! "

ಹೀಗೆಂದು ಅಣ್ಣಪ್ಪುಭೂತವು ಗಟ್ಟಿಯಾಗಿ ಹೇಳಿ ಮಾಯವಾಯಿತು ; ತಾನು ಬಿಟ್ಟುಬಂದ ದೈವಗಳನ್ನು ಕೂಡಿಕೊಳ್ಳಲು ಹೋಯಿತು. ಗುಳಿಗ ಭೂತವು ತಲೆ ತಗ್ಗಿಸಿ, ಗುಡ್ಡವನ್ನು ಬಿಟ್ಟು, ಕಲ್ಲೇರಿಯ ಕಡೆ ಕಾಲುಹಾಕಿತು.

(12)

ಗುಳಿಗಭೂತವು ಗುಡ್ಡವನ್ನು ಬಿಟ್ಟಮೇಲೆ, ಗುಡ್ಡ ಎದ್ದು ನಿಂತಿತು ; ತಂಟೆ ತಪ್ಪಿತೆಂದು ತಲೆಯೆತ್ತಿತು. ನೆಲ ಹಸಿರಾಯಿತು ; ಗಿಡ ಚಿಗುರಿತು ; ಮೊಗ್ಗು ಅರಳಿತು ; ಹೂವು ಕಾಯಾಯಿತು. ಮೇವಿಗೆಂದು ಆವುಗಳು ಬಂದುವು, ಹೂವಿಗೆಂದು ದುಂಬಿಗಳು ಬಂದುವು, ಹಣ್ಣಿಗೆಂದು ಹಕ್ಕಿಗಳು

ಬಂದುವು. ಮುರಗಳು ಮುಗಿಲೆತ್ತರ ಬೆಳೆದರೂ ಬೆಳಕು ಗುಡ್ಡವನ್ನೆಲ್ಲ ತುಂಬಿತು. ಕೇದಗೆ, ಸಂಪಿಗೆ, ಕೇಪುಳ, ಮಲ್ಲಿಗೆ ಹೂಗಳ ಕಂಪನ್ನು ಹೊತ್ತು ತಂಗಾಳಿ ಮೆಲ್ಲಗೆ ಸುಳಿಯಿತು. ಗುಡ್ಡದ ಸುತ್ತಮುತ್ತ ಬೀಡು ಬೆಳೆಯಿತು.

ಆದರೆ ಬೀಡವರಿಗೆ ಸಹಾಯಕ್ಕೆ ದೈವ, ಮೂಲಕ್ಕೆ ಭೂತ ಇರಲಿಲ್ಲ. ಇದೊಂದು ಕೊರತೆ. ಬೀಡಿನ ಜನ ದುಡಿಯುವರು, ಉಳುವರು, ಬಿತ್ತುವರು, ಬೆಳೆಯುವರು, ಕುಯ್ಯುವರು ; ಅಡವಿಯಲ್ಲಿ ಅಲೆದಾಡಿ ಬೇಟೆಯಾಡಿ ಬೇಕಾದ ದನ್ನು ತರುವರು ; ಬೀಡಿನಲ್ಲಿ ಕೂತು ಬೇಕಾದುದನ್ನು ಒದಗಿಸಿಕೊಳ್ಳುವರು. ಮೈಯ ಕೊಳೆಯನ್ನು ಕಳೆಯಲು ಜಳಕ, ಹೊಟ್ಟೆ ಹಸಿದಾಗ ಊಟ, ಬೇಸರ ವಾದಾಗ ಆಟ. ಸುಖ ಸಂಪತ್ತಿನಲ್ಲಿ ನಲಿಯುವರು, ಸಾವು ಸಂಕಟದಲ್ಲಿ ಕೊರ ಗುವರು. ಹಗಲು ಹೊರಗೆ, ಇರುಳು ಒಳಗೆ. ಮೂಡಲಲ್ಲಿ ಬೆಳ್ಳಿ ಮೂಡಿ ದರೆ ಹೊಸ ಬದುಕು, ಕತ್ತಲೆ ಕವಿಯಿತೆಂದರೆ ಆ ದಿನದ ಸಾವು. ಹೀಗೆ ದಿನ ದಿನದ ಬದುಕು ಚೂರುಪಾರು ; ಮೈ ಮನಸ್ಸಿನ ಬಯಕೆಗಳ ಆರೈಕೆಯಲ್ಲೇ ಉಸಿರೆಲ್ಲ ಹೋಗುವುದು.

ಬೀಡಲ್ಲಿ ಬೀಡವರೆಲ್ಲ ಇರುವರಾದರೂ ಅವರವರ ಕತೆ ಅವರವರದ್ದು. ಹೆರವರ ಹಿತವೆಂದು ಕಾತರಪಡುವ ಬುದ್ಧಿ ಯಾರಿಗೂ ಇರದು. ಜಾತಿ, ನೀತಿ, ಮಾನ, ಮರ್ಯಾದೆ, ಹುಟ್ಟು, ಕಟ್ಟು, ಹಿಂದೆ, ಮುಂದೆ ಮೊದಲಾದ ಹದಿ ನಾಲ್ಕು ಕಟ್ಟುಗಳು ಕಾಣಿಸಿಕೊಂಡಿರಲಿಲ್ಲ. ಬೀಡಿನ ಒಡೆಯನೆಂದು ಚಾವಡಿ ಯಲ್ಲಿ ಪೆರ್ಗಡೆಯಿರುವನಾದರೂ ಬೀಡವರೆಲ್ಲ ಒಂದೇ ಬುದ್ಧಿಯಿಂದ ನಡೆದು ಕೊಳ್ಳಬೇಕೆಂಬ ಕಟ್ಟು ಕೈಹಿಡಿದಿರಲಿಲ್ಲ ; ಹುಟ್ಟು ಕಟ್ಟು ಕಟ್ಟಳೆ ಆಟಕವಾಗಿ ನಡೆದುಬರಬೇಕೆಂಬ ಕಟ್ಟಳೆ ಇದ್ದಿರಲಿಲ್ಲ. ಹೊರಗಿನವರು ಹರಿಹಾಯ್ದರೆ ಬೀಡ ವರು ಬಡಿದೋಡಿಸಬೇಕೆಂಬ ಬುದ್ಧಿ ಪೆರ್ಗಡೆಗಲ್ಲದೆ ಬೀಡವರಿಗಿರಲಿಲ್ಲ. ಬೀಡ ಜನರು ಕೂಡಿ ನಡೆದುಕೊಳ್ಳದಿದ್ದರೆ ಕುತ್ತು ಅಡಿಹಾಕಿ ತೊಡಕದೆ ಇರು ವುದೆ ? ಹೊರಗಿನ ಹಾಯಿಗುಳಿಯ ಹೆದರಿಕೆ ಇರದಿದ್ದರೂ, ಅವರೊಳಗೇ ತಂಟೆ ತಕರಾರು ತೊಂಡು ತೊಳಸು ತಪ್ಪುವುದೆ ?

ಬೀಡವರು ತಾವಾಗಿ ಕೂಡಿ ನಡೆದುಕೊಳ್ಳುವವರಲ್ಲ. ತಮ್ಮೊಳಗೇ ತಂಟೆ ತಕರಾರು ತೊಂಡು ತೊಳಸು ಇದ್ದರೆ ತುಡುಕಿ ಕಾದು ಕತ್ತಿಯಿರಿದು

ಕೊಲ್ಲುವುದು ಬಿಟ್ಟು ಬೇರೆ ದಾರಿ ತಿಳಿಯದು ಅವರಿಗೆ. ಬಯಸಿದ್ದು ಕೈ ಸೇರಲು ನೇರವಾದ ದಾರಿ ಸುಳ್ಳು, ಕಳುವು, ಕೊಲೆ ! ಆಸೆ ಮೋಸ, ದ್ವೇಷ ದ್ವೇಷ ಇವು ಕಾಲು ಹಾಕಿದರೆ ಪಾಪಪುಣ್ಯ, ದಾನಧರ್ಮ, ಕೀರ್ತಿ ಅಪಕೀರ್ತಿ



ಎಲ್ಲ ಕಾಡುಪಾಲು ತಾನೆ ? ಬೇಡವರ ಒಡಲಲ್ಲಿ ಕೂಟದ ಅರಿವು ಮೂಡದೆ ಬೇಡಿನ ನೆಲೆಯೆಲ್ಲಿ ? ಮೂಲವೆಲ್ಲಿ ? ಬೇಡಿನ ನೆಲೆಯಿರದೆ ಆಳು ಉಳಿಯಲಾರ ;

ಆಳು ಉಳಿಯದೆ ಬೀಡು ಉಳಿಯದು. ಬೀಡಿನ ಪೆರ್ಗಡೆಗೆ ಹಗಲಿರುಳೂ ಇದೊಂದು ಚಿಂತೆಯಾಯಿತು. ಆದರೆ ತನ್ನ ಸಹಾಯಕ್ಕೆ ದೈವಗಳಿಲ್ಲ, ಬೀಡಿನ ಮೂಲಕ್ಕೆ ಭೂತವಿಲ್ಲ. ಮಾಡುವುದೇನು ?

ಇರುಳು ಮಲಗಿದ್ದಾಗ ಅವನಿಗೊಂದು ಕನಸು. ಮುಂಜಾನೆ ಎದ್ದು ಬೀಡಿನ ಗಡಿ ಬಿಟ್ಟು ದೂರ ನಡೆದು, ನೆರೆಯ ಬಯಲನ್ನು ದಾಟಿ, ಗಟ್ಟವನ್ನೇರಿ ಕುಕ್ಕೇ ಸುಬ್ರಾಯನ ಸ್ಥಾನಕ್ಕೆ ಬಂದಿದ್ದಾನೆ. ಅದು ಬಲು ಕಾರಣಿಕವುಳ್ಳ ದೈವ ತಾನೆ ? ಅಲ್ಲಿ ಆಲೆಡೆಯ ಮುಂದಣ ಕಟ್ಟೆಯ ಮೇಲೆ ಶಕುನ ಹೇಳುವ ಜೋಯಿಸ ಕುಳಿತಿದ್ದಾನೆ. ಎದುರಿಗೆ ಮಂಡಲದ ಮಣೆ, ಕವಡೆಯ ಚೀಲ. ನಡೆದು ಬಂದ ಪೆರ್ಗಡೆಯನ್ನು ನೋಡಿ ಕೂರಲು ಹಾಸು ಕಂಬಳಿಯನ್ನು ಬಿಡಿಸುತ್ತಾನೆ. ಕವಡೆ ಬಿಟ್ಟು ಓಲೆ ಹಿಡಿದು ಓದುತ್ತ "ಅಪಾಯವಿಲ್ಲ, ಸಹಾಯಕ್ಕೆ ದೈವ ಒದಗುತ್ತದೆ, ಮೂಲಕ್ಕೆ ಭೂತ ಬರುತ್ತದೆ. ಭೂತ ಬರುವಾಗ ಹಂದಿ ಕಾಣಿಸಿಕೊಳ್ಳುತ್ತದೆ, ಹೋಗು !" ಎಂದು ಹೇಳುತ್ತಾನೆ. ಅಷ್ಟರಲ್ಲಿ ಪೆರ್ಗಡೆಗೆ ಎಚ್ಚರವಾಯಿತು. ಎಚ್ಚರವಾಗಿ ಆಶ್ಚರ್ಯವಾಯಿತು ; ಆಶ್ಚರ್ಯವಾಗಿ ನಿಶ್ಚಿಂತೆಯಾಯಿತು. ಸಹಾಯಕ್ಕೆ ದೈವ, ಮೂಲಕ್ಕೆ ಭೂತ ಬರುವುದೆಂದು ಭರವಸೆ ಮೂಡಿತ್ತು.

ಎದ್ದು, ಹೆಂಡತಿಗೆ ಕನಸನ್ನು ಹೇಳಿ, ಇಬ್ಬರೂ ಸಂತೋಷದಿಂದ ಮಿಂದು, ಮೈಲಿಗೆ ತೆಗೆದು ಮಡಿಯುಟ್ಟು ಶುದ್ಧ ಮನಸ್ಸಿನಿಂದ ಕುಕ್ಕೇ ಸುಬ್ರಾಯನ ಸ್ಥಾನದ ಆಲೆಡೆಗೆ ಕಾಣಿಕೆ ಕಳುಹಿಸಿದರು. ಭೂತ ಅಲ್ಲಿಂದಲೇ ಬರುವುದೆಂದು ಅವರಿಗೆ ಕಂಡಿತವಾಯಿತು ; ಬೀಡಿನಿಂದ ಹೊರಗೆ ಕುಕ್ಕೇ ದೇವರ ಆಲೆಡೆಯ ದಿಕ್ಕಿನಲ್ಲಿ ಅವರೂ ಬೀಡವರೂ ಕೂಡಿ ಮಂಟಪ ಕಟ್ಟಿಸಿದರು. ಮಂಟಪದ ನಾಲ್ಕು ಕಂಬಗಳಿಗೆ ಹೊದಿಕೆ ಹಾಕಿಸಿದರು. ಚಪ್ಪರದ ಮೇಲೆ ಹಾಸು ಕಂಬಳಿ ಹೊದಿಸಿ ಕೇದಗೆ, ಸಂಪಗೆ, ಕೇಪುಳ, ಹಿಂಗಾರ ಹೂಗಳ ತೋರಣವನ್ನು ಕಾಣಿಸಿದರು. ಮಾವಿನೆಲೆಯ ಹಸಿರು ಹಂದರದ ಎದುರು ಬಿಳಿಗೆರೆಗಳಲ್ಲಿ ಚೆಂದವಾದ ಮಂಡಲವನ್ನು ಬಿಡಿಸಿದರು. ಸುಬ್ರಾಯನ ಸ್ಥಾನದ ಕಡೆಗೆ ನಡೆಮಡಿ ಹಾಸಿದರು, ನಡೆಚಪ್ಪರ ನೆಡಿಸಿದರು. ಬರುವ ಭೂತಕ್ಕೆ ಬಿಸಿಲು ಮರೆ ಮಾಡಲು ಬೆಳ್ಳಿ ಹಿಡಿಯ ಬಿಳಿ ಕೊಡೆಯನ್ನು ತಂದರು ;

ಭೂತವು ಬೀಡೊಳಗೆ ಬರುವಾಗ ಏರಲು ಸಿಂಗಾರ ಮಾಡಿದ ಬಿಳಿ ಕುದುರೆಯನ್ನು ನಿಲ್ಲಿಸಿದರು ; ಭೂತಕ್ಕೆ ಹಿಡಿಯಲು ಬಂಗಾರದ ಪಂಚ ದೀವಟಿಗೆಯನ್ನು ಸಿದ್ಧಪಡಿಸಿಕೊಂಡರು ; ಎದುರುಗೊಳ್ಳಲು ನಡೆವಾದ್ಯವನ್ನು ಇರಿಸಿಕೊಂಡರು.

ಭೂತ ಯಾವಾಗ ಬರುವುದೆಂದು ಯಾರಿಗೂ ತಿಳಿಯದು. ಕುಕ್ಕೇ ಜೋಯಿಸರ ಕಣಿಯು ಕವಡೆಯಿಂದ ಈ ಮಾತು ಹೊರಟಿರಲಿಲ್ಲ. ಬಂದಾಗ ಬರಲೆಂದು ಪೆರ್ಗಡೆ, ಅವನ ಹೆಂಡತಿ, ಬೀಡವರು ಎಲ್ಲರೂ ಅದಕ್ಕೆ ಕಾಯುತ್ತ ಚಪ್ಪರದಲ್ಲಿ ನಿಂತಿದ್ದರು. ಭೂತ ಬರುವವರೆಗೆ ಅಲ್ಲಿಂದ ಕದಲದೆ ಕಾದಿರುವ ಮನಸ್ಸು ಅವರದ್ದು. ಭೂತ ಬಂದಾಗ ಬೀಡ ಬಾಗಿಲಲ್ಲಿ ತಾವಿರದೆ ಹೋದರೆ ಹೇಗೆ ? ಭೂತ ಬರುವ ಮೊದಲೇ ಭೂತವನ್ನು ನಂಬಿದವರು ಅವರು ; ಭೂತವನ್ನು ಆದರದಿಂದ ಬರಮಾಡಿಕೊಳ್ಳಬೇಕೆಂದು ಹಾತೊರೆಯುತ್ತಿದ್ದವರು. ಇಂಥವರ ಬೀಡಿಗೆ ಬಾರದ ಭೂತವೂ ಉಂಟೆ ?

ಬೆಳಗಿಂದ ಸಂಜೆಯವರೆಗೆ ಯಾವ ಹಂದಿಯೂ ಕಾಣಿಸಿಕೊಳ್ಳಲಿಲ್ಲ. ಇನ್ನೇನು ಬೆಳಕು ಮುಳಗಬೇಕೆನ್ನುವಾಗ ಕುಕ್ಕೇ ದೇವರ ಸ್ಥಾನದ ಕಡೆಯಿಂದಲೇ ನಾಲ್ಕು ಕುದುರೆಗಳು ಬರುತ್ತಿದ್ದುವು ; ಕುದುರೆಗಳ ಮೇಲೆ ಸವಾರರು. ಕುದುರೆಗಳು ಸಾಧಾರಣವಾದುವು ; ಅವನ್ನೇರಿದವರೂ ಸಾಮಾನ್ಯ ದಾರಿಹೋಕರೇ. ಕುದುರೆಗಳಲ್ಲಾಗಲೀ ಸವಾರರಲ್ಲಾಗಲೀ ವಿಶೇಷವೇನು ಕಾಣಲಿಲ್ಲ. ದಾರಿಯಲ್ಲಿ ಬಂದವರು ಬೀಡಿನ ಬಾಗಿಲ ಚಪ್ಪರದ ಬಳಿ ನಿಂತರು. ಬೀಡಿನ ಪೆರ್ಗಡೆಯ ಕಡೆ ತಿರುಗಿ ಆ ನಾಲ್ವರಲ್ಲಿ ಒಬ್ಬ, "ಅಯ್ಯಾ, ನಾವು ಈ ದಾರಿಯಲ್ಲಿ ಮುಂದೆ ಕದಲಿಗೆ ಹೋಗತಕ್ಕವರು. ಕುದುರೆಗಳು ದಣಿದಿವೆ, ನಾವೂ ಬಳಲಿದ್ದೇವೆ, ಈಗ ಕತ್ತಲಾಗುತ್ತಿದೆ. ನಿಮ್ಮ ಬೀಡಲ್ಲಿ ಈ ಇರುಳು ಕಳೆಯುವುದಾದೀತೋ ? ನಾಳೆ ಬೆಳಕು ಹರಿದಾಗ ಮುಂದೆ ಹಾದಿ ಪಯಣ ನಡೆಸುವೆವು" ಎಂದು ಕೇಳಿದ.

ಒಡನೆಯೇ ಪೆರ್ಗಡೆ, "ಆಯಿತು ; ನೀವು ನಮ್ಮ ಚಾವಡಿಯಲ್ಲಿ ಈ ಇರುಳು ಕಳೆಯಲು ಏನೇನೂ ಅಡ್ಡಿಯಿಲ್ಲ. ನೀವು ಈಗ ಬಂದುದು ನಮಗೆ

ಒಳ್ಳೆಯದೇ ! ನಾವು ಬೀಡಿನ ಮೂಲಕ್ಕೆಂದು ಭೂತವನ್ನು ಬರಮಾಡಿಕೊಳ್ಳು ತ್ತಿದ್ದೇವೆ. ಅದರ ದಾರಿಯನ್ನೇ ನೋಡುತ್ತ ನಿಂತಿದ್ದೇವೆ. ಇನ್ನೇನು ಅದೂ ಬಂದೀತು. ಬಂದಾಗ ನೀವೂ ನಮ್ಮೊಡನೆ ಇರುವುದಾದರೆ ನಮಗೆ ಧೈರ್ಯ ವಾದೀತು. ಈವರೆಗೆ ನಾವು ಭೂತವನ್ನೇ ಕಂಡರಿಯೆವು. ಭೂತ ಬಂದಾಗ ಹಂದಿ ಕಾಣಿಸಿಕೊಳ್ಳುವುದೆಂದು ಮಾತ್ರ ಬಲ್ಲೆವು. ಅದು ಹಾಗಿರಲಿ. ಈಗ ಚಾವಡಿಗೆ ಹೋಗಿ, ಹಾದಿ ಮೈಲಿಗೆ ತೆಗೆದು, ಮಿಂದು, ಮಡಿಯುಟ್ಟು, ಸೀಯಾಳ ಕುಡಿದು ಆಸರು ತೀರಿಸಿ, ಆಯಾಸ ಕಳೆದು, ಒಂದೆರಡು ಗಳಿಗೆ ಮೊಗಸಾಲೆಯ ತೂಗುಯ್ಯಾಲೆಯ ಮೇಲೆ ಕುಳಿತು ದಣಿವಾರಿಸಿಕೊಳ್ಳಿ. ಭೂತ ಬಂದಾಗ ಹೇಳಿಕಳುಹಿಸುತ್ತೇನೆ" ಎಂದು ಹೇಳಿ, ಅವರೊಂದಿಗೆ ಚಾವ ಡಿಯ ಆಳುಗಳನ್ನು ಕಳುಹಿಸಿಕೊಟ್ಟ.

ಹಾದಿ ಪಯಾಣದವರು ಕುದುರೆಗಳನ್ನು ಚಪ್ಪರದ ನೆರೆಯಲ್ಲೇ ಬಿಟ್ಟು, ನಡೆಯುತ್ತ ಬೀಡೊಳಗೆ ಬಂದರು. ಆಳುಗಳು ತೋರಿಸಿದ ದಾರಿಯಲ್ಲಿ ಚಾವಡಿ ಯನ್ನು ಮುಟ್ಟಿದರು. ಅವರು ಬೀಡ ಗಡಿಯಲ್ಲಿ ಕಾಲಿಟ್ಟ ಗಳಿಗೆಯೇ ಪೆರ್ಗಡೆಯ ಒಡಲಲ್ಲಿ ಅವರನ್ನು ಕುರಿತು ಆದರ ಮೂಡಿಕೊಂಡಿತ್ತು. ಭೂತ ವನ್ನು ಕಾಯುತ್ತ ನಿಂತಿರುವಾಗ, ಬೀಡ ಬಳಿ ಬಂದ ಪಯಣದ ಮಂದಿಯನ್ನು ಆಳುಗಳೊಂದಿಗೆ ಕಳುಹಿಸಿಬಿಡುವುದು ಸರಿಯೇ ಎಂಬ ಅಳುಕು ಅವನಲ್ಲಿ ತೋರಿಕೊಂಡಿತು. ಮತ್ತೆ, ಭೂತ ಬರುವುದು ಯಾವಾಗಲೋ ? ಅಲ್ಲಿಯ ವರೆಗೆ ಪಯಾಣದವರನ್ನು ಊಟವಿಲ್ಲದೆ ಇರಿಸುವುದೆ ? ಬರುವ ಭೂತ ಬಂದಾಗ ಬರಲಿ ; ಬಂದಿರುವ ದಾರಿಹೋಕರು ಬಳಲಿದ್ದಾರೆ, ಅವರ ಉಪಚಾರ ಆಗ ಬೇಕು, ಎಂದುಕೊಂಡು ಹೆಂಡತಿಯೊಡನೆ ಚಾವಡಿಗೆ ಹೊರಟುಬಂದ. ಬೀಡ ವರು ಗಡಿಚಪ್ಪರದಲ್ಲೇ ಭೂತಕ್ಕೆ ಕಾಯುತ್ತ ನಿಂತರು.

(13)

ಪಯಣದವರು ಪೂಸಿದ ಎಣ್ಣೆಗೆ ತಿಳಿನೀರಲ್ಲಿ ಮಿಂದಾಯಿತು. ತಲೆಗೆ ತಂಪಿಗಾಗಿ ನೆಯ್ಯೆಣ್ಣೆ, ಕಾಲಿಗೆ ನೋವಾರಲು ಪಣಿಯೆಣ್ಣೆ, ಮೈಗೆ ಪರಿಮಳದ

ಚಂದನ; ಚೆಂದದ ನೆರಿಗೆಯ ಮಡಿಯುಟ್ಟಾಯಿತು. ಮೊಗಸಾಲೆಯ ತೂಗುಯ್ಯಾಲೆಯ ಮೇಲೆ ಹಾಸುಕಂಬಳಿ ಬಿಡಿಸಿದರು; ಬಾಯಾರಿಕೆಗೆ ಸೀಯಾಳ ಕುಡಿಸಿದರು. ಆಮೇಲೆ ಆರೋಗಣೆಗೆ ಎಬ್ಬಿಸಿ, ಬೆಳ್ಳಿಯ ಹೂ ಬಿಡಿಸಿದ ಮಣೆಯ ಮೇಲೆ ಕುಳ್ಳಿರಿಸಿದರು. ಬಂಗಬಾಳೆಯ ಎಲೆಯನ್ನು ಹರವಿದರು. ಹಾಲು, ಗಂಜಿ, ಬೆಲ್ಲದ ಪಾಯಸ, ಅಪ್ಪದ ತಿನಿಸು, ಬಿಳಿ ಅಕ್ಕಿಯ ಅನ್ನ, ಅವಲಕ್ಕಿ ಕಡುಬು ಮೊದಲಾಗಿ ಬಗೆಬಗೆಯ ಪದಾರ್ಥಗಳನ್ನು ಉಣಿಸಿದರು. ಊಟವಾದ ಮೇಲೆ ವೀಳ್ಯದ ಹರಿವಾಣವನ್ನು ಮುಂದಿರಿಸಿದರು. ಎಲ್ಲ ಮುಗಿದ ಮೇಲೆ, ಅವರು ಕಣ್ಣಿಗೆ ನಿದ್ರೆ ಹತ್ತುತ್ತಿದೆಯೆಂದು ಹೇಳಲು ಪೆರ್ಗಡೆ ಅವರಿಗೆ ಮಲಗಲು ಅಣಿಮಾಡಿದ ಎಡೆಯನ್ನು ತೋರಿಸಿದ. ಭೂತ ಬಂದ ವೇಳೆಯಲ್ಲಿ ತಮ್ಮನ್ನು ತಪ್ಪದೆ ಎಚ್ಚರಗೊಳಿಸಬೇಕೆಂದೂ, ತಾವೂ ಭೂತವನ್ನು ಎದುರುಗೊಳ್ಳಲು ಬರುವವರೆಂದೂ ಅವರು ಹೇಳಿದರು. ಪೆರ್ಗಡೆ ಆಗಲೆಂದು ಅವರಿಂದ ಬೀಳ್ಕೊಂಡು, ಮತ್ತೆ ಬೀಡ ಗಡಿಯ ಚಪ್ಪರಕ್ಕೆ ಬಂದನು.

ಪಯಣಿಗರು ಬೀಡಲ್ಲಿ ತಾವು ಪಡೆದುಕೊಂಡ ಆದರಾತಿಥ್ಯವನ್ನು ಬಲು ಮೆಚ್ಚಿದರಾದರೂ, ತಾವು ಯಾರೆಂದಾಗಲೀ, ಎಲ್ಲಿಂದ ಬಂದವರೆಂದಾಗಲೀ, ಕಡಲಿಗೆ ಹೋಗುವುದು ಯಾಕೆಂದಾಗಲೀ ಹೇಳಲಿಲ್ಲ. ಪೆರ್ಗಡೆ ಮತ್ತು ಅವನ ಹೆಂಡತಿ ಅವರನ್ನು ನೋಡಿದಾಗಲೆಲ್ಲ ಅವರು ಯಾರೆಂದು ತಿಳಿಯಲು ತವಕಪಡುತ್ತಿದ್ದರು. ಇಲ್ಲಿಯವರಂತೆ ಅವರು ಕಾಣಿಸುತ್ತಿರಲಿಲ್ಲ. ಒಮ್ಮೊಮ್ಮೆ ಈ ಲೋಕದವರೇ ಹೌದೋ ಎನ್ನುವ ಶಂಕೆಯೂ ಬರುತ್ತಿತ್ತು. ಅವರ ಮೋರೆಯ ಮೇಲೆ ಯಾವುದೋ ಅಪೂರ್ವವಾದ ಬೆಳಕಿದ್ದಿತು. ಮೋರೆಯನ್ನು ದಿಟ್ಟಿಸಿ ನೋಡುವುದಂತೂ ಸಾಧ್ಯವಿರಲಿಲ್ಲ. ಒಮ್ಮೆ ನೋಡಿದರೆ ಮತ್ತೆ ನೋಡ ನೋಡಬೇಕೆಂದೇನೋ ಅನಿಸುವುದು; ಆದರೆ ನೋಡಿದಾಗ ಕಣ್ಣು ಬಲಗುಂದಿ ಹಿಂದೆಗೆಯುವುದು. ಎಷ್ಟು ಕಣ್ಣಿಟ್ಟು ನೋಡಿದರೂ ಅವರ ರೂಪು ನೆನಪಿನಲ್ಲಿ ಉಳಿಯದು. ಅವರು ಮಾತಾಡಿದುದು ಕಡಮೆ; ಆದರೆ ಮಾತಾಡಿದಾಗ ದೂರದಲ್ಲಿ ಗಂಟೆಯ ಸದ್ದು ಕೇಳುವುದು, ಅವರ ದನಿ ಅದರಲ್ಲಿ ಕೂಡಿಕೊಳ್ಳುವುದು. ಅವರು ನಡೆದಾಗ ನೆಲದ ಮೇಲೆ ಕಾಲು ಊರುವರೋ ಇಲ್ಲವೋ ಎನ್ನುವಂತೆ ತೋರುವುದು. ಬೆಳಕಿದ್ದರೂ ಅವರ ನೆರಳು ಬೀಳದು. ಒಟ್ಟಿನಲ್ಲಿ, ಆ ಬಗೆಯ

ಮನುಷ್ಯರನ್ನು ಪೆರ್ಗಡೆಯಾಗಲೀ ಅವನ ಹೆಂಡತಿಯಾಗಲೀ ಆವರೆಗೆ ಕಂಡಿರಲಿಲ್ಲ.

ಚಾವಡಿಯಿಂದ ಹೊರಟು ಬೀಡಗಡಿಯ ಚಪ್ಪರಕ್ಕೆ ಬರುವ ದಾರಿಯುದ್ದಕ್ಕೂ ಅವರು ಇದನ್ನೇ ಮಾತಾಡಿಕೊಂಡು ಬಂದರು. ಚಪ್ಪರ ಮುಟ್ಟುವ ವೇಳೆಗೆ ಅಲ್ಲೊಂದು ಗದ್ದಲ. ಚಪ್ಪರದ ಹತ್ತಿರ ಬಿಟ್ಟಿದ್ದ ಪಯಣಿಗರ ಕುದುರೆಗಳು, ಇದ್ದಕ್ಕಿದ್ದಂತೆ, ನಾಲ್ಕು ಇದ್ದದ್ದು ಎರಡಾದುವು, ಎರಡು ಆದುದು ಒಂದಾಯಿತು. ಈ ಒಂದು ಕುದುರೆ ತಾನು ಬಂದ ಹಾದಿಯಲ್ಲೇ ತುಸು ದೂರ ಹಿಂದೆ ಹೋಯಿತು. ಈ ಸೋಜಿಗವನ್ನು ಕಂಡು ಅಲ್ಲಿ ನೆರೆದಿದ್ದ ಬೀಡವರಲ್ಲಿ ಕಲಕಲ ಮೊದಲಾಯಿತು. ಕೆಲವರು ಹೆದರಿದರು; ಕೆಲವರು ಅಚ್ಚರಿಗೊಂಡರು; ಕೆಲವರ ಕುತೂಹಲ ಕೆರಳಿತು; ಮತ್ತೆ ಕೆಲವರು ಚಾವಡಿಗೆ ಹೋಗಿ ನಡೆದುದನ್ನು ಪಯಣಿಗರಿಗೆ ತಿಳಿಸಬೇಕೆಂದರು. ಚಾವಡಿಯ ಕಡೆ ಬರುತ್ತಿದ್ದವರು ಎದುರಾದ ಪೆರ್ಗಡೆಗೆ ಸೋಜಿಗದ ಸುದ್ದಿಯನ್ನು ತಿಳಿಸಿದರು. ಪಯಣಿಗರನ್ನು ಕರೆತನ್ನಿರೆಂದು ಪೆರ್ಗಡೆ ಅವರಿಗೆ ಹೇಳಿ, ಚಪ್ಪರದ ಬಳಿ ಬೇಗನೆ ಬರುವಾಗ ನಾಲ್ಕು ಎರಡಾಗಿ, ಎರಡು ಒಂದಾದ ಕುದುರೆಯನ್ನು ದೂರದಿಂದ ನೋಡಿದ.

ಕುದುರೆಯನ್ನು ದಿಟ್ಟಿಸಿ ನೋಡುತ್ತಿರುವಾಗ, ಮಾಯದ ಕುದುರೆಯ ಮೈ ತಾನಾಗಿ ಕರಗತೊಡಗಿತು, ಅವರೆಲ್ಲ ನೋಡುತ್ತಿರುವಂತೆಯೇ ಕುದುರೆಯಿದ್ದಲ್ಲಿ ಹಂದಿ ಕಾಣಿಸಿಕೊಂಡಿತು! ಮರಿಯಾನೆಯಂತೆ ಅಡಿಯಿಡುತ್ತ, ಮಿಂಚಿನಂತೆ ಮೆರೆಯುತ್ತ ಹಂದಿ ಚಪ್ಪರದ ಕಡೆ ಬರುವಾಗ, ಚಪ್ಪರದಲ್ಲಿ ನೆರೆದಿದ್ದ ಬೀಡವರು ಭೂತ ಬಂತೆಂದು ಕೊಂಬು ಊದಿದರು, ಡಕ್ಕೆ ಬಡಿದರು, ವಾದ್ಯ ಮೊಳಗಿದರು, ಹೋಯೆಂದು ದನಿ ತೆಗೆದರು, ಹಂದಿಯ ಕಡೆ ಓಡಿದರು. ಬೀಡವರೆಲ್ಲ ದಡದಡನೆ ಓಡಿ ಹಂದಿಯಿದ್ದಲ್ಲಿ ಬಂದರೆ, ಹಂದಿ ಇದ್ದಲ್ಲೇ ಮಾಯವಾಗಿಬಿಟ್ಟಿತು. ಅಚ್ಚರಿಗೊಂಡ ಬೀಡವರು ಹಿಂದಿರುಗಿ ಚಪ್ಪರದ ಕಡೆ ಕಣ್ಣಾಡಿಸಲು, ಚಪ್ಪರದಲ್ಲಿ ಅಲ್ಲಿದ್ದ ಪೆರ್ಗಡೆಗೆ ಎದುರಾಗಿ ಹಂದಿ ನಿಂತಿದೆ! ಮತ್ತೆ ಬೀಡವರೆಲ್ಲ ಚಪ್ಪರದ ಕಡೆಗೆ ಓಡಿ ಬಂದರು. ಅವರು ಹತ್ತಿರ ಬಂದಂತೆ, ಹಂದಿಯ ಮೈಯಿದ್ದಲ್ಲಿ ಅದರ ಬೈರೂಪ ಮಾತ್ರ ಉಳಿದುಕೊಂಡಿತು;

ಇನ್ನೂ ಹತ್ತಿರ ಬಂದಾಗ ಹಂದಿಯ ಬೈರೂಪವೂ ಪೆರ್ಗಡೆಯಲ್ಲಿಯೇ ಸೇರಿಕೊಂಡಿತು. ಪೆರ್ಗಡೆ ಮೈಮರೆತು ನಿಂತನು.

ಚಾವಡಿಗೆ ಹೋಗಿದ್ದವರು ಚಪ್ಪರಕ್ಕೆ ಹಿಂದಿರುಗಿ ಚಾವಡಿಯಲ್ಲಿದ್ದ ಪಯಣಿಗರು ಮಾಯವಾಗಿದ್ದುದನ್ನು ನೆರೆದವರಿಗೆ ತಿಳಿಸಿದರು. ಅವರು ಚಾವಡಿಗೆ ಹೋಗಿ ನೋಡಿದಾಗ ಪಯಣಿಗರು ಯಾರೂ ಇರಲಿಲ್ಲವಂತೆ. ಎಲ್ಲಿಗೆ ಹೋದರೆಂದು ಸುತ್ತಮುತ್ತ ಹುಡುಕಿದರೂ ಸುಳಿವು ಸಿಗಲಿಲ್ಲವಂತೆ. ಮೊಗಸಾಲೆಯಲ್ಲಿ ಮಾತ್ರ ತೂಗುಯ್ಯಾಲೆಯ ಮೇಲೆ ಕತ್ತಿ, ಕಡಸಲೆ, ಗಂಟೆಗಳಿದ್ದುವಂತೆ ; ಇನ್ನೂ ಇವೆಯಂತೆ. ಪೆರ್ಗಡೆಗೆ ಇದನ್ನು ಹೇಳಲೆಂದು ನೋಡಿದರೆ ಪೆರ್ಗಡೆ ಕೇಳುವ ಸ್ಥಿತಿಯಲ್ಲಿರಲಿಲ್ಲ. ಪೆರ್ಗಡೆ ಈಗ ಇಲ್ಲಿ ಸಲ್ಲುವವನೇ ಅಲ್ಲ. ಅವನಿಗೆ ಮೈಮೇಲೆ ಪರಿವೆಯಿಲ್ಲ, ಸುತ್ತ ಇರುವವರ ಅರಿವಿಲ್ಲ. ಕಣ್ಣು ತೆರೆದಿದ್ದರೂ ಅದರಲ್ಲಿ ನೋಟವಿಲ್ಲ. ಎಚ್ಚರವಾಗಿರುವಂತೆ ತೋರಿದರೂ ಏನಾಗುತ್ತಿದೆಯೆಂಬ ತಿಳಿವು ಇಲ್ಲ. ಬೀಡವರ ನಡುವೆ ಗೊಂಬೆಯಂತೆ ನಿಂತಿದ್ದ ಅವನಲ್ಲಿ ಹಂದಿ ಮಾಯವಾದುದನ್ನು ಬೀಡವರು ಕಂಡಿದ್ದರು. ಈಗ ಭೂತ ಪೆರ್ಗಡೆಯಲ್ಲಿ ಸೇರಿಕೊಂಡಿದೆಯೆಂಬುದು ಅವರಿಗೆ ಕಂಡಿತವಾಯಿತು.

ಪೆರ್ಗಡೆಯ ಹತ್ತಿರವೇ ನಿಂತಿದ್ದ ಬೀಡವನೊಬ್ಬ ಇದ್ದಕ್ಕಿದ್ದಂತೆ ಮೈಮರೆತು ತೂಗಾಡತೊಡಗಿದ. ಅವನ ಕಣ್ಣಾಲೆಗಳು ಗಿರ್ರನೆ ತಿರುಗಿದವು, ಕೈಕಾಲುಗಳು ನಡುಗಾಡಿದುವು, ಮರುಳಂತೆ ನಲಿಯಲಾರಂಭಿಸಿದ. ಎಲ್ಲರೂ ನೋಡುತ್ತಿರುವಂತೆ ಅವನ ಒಂದು ಕೈಯಲ್ಲಿ ಕತ್ತಿ ಕಾಣಿಸಿಕೊಂಡಿತು ; ಇನ್ನೊಂದು ಕೈಯಲ್ಲಿ ಗಂಟೆ ಬಂದಿತು. ಕೊರಳಲ್ಲಿ ಕೇಪುಳದ ಹಾರ ; ಹಣೆಯ ಮೇಲೆ ಕೇದಗೆಯ ಮುಂದಲೆ ; ನಡುವಿನಲ್ಲಿ ಎಳೆ ತೆಂಗಿನ ಗರಿ (ಸಿರಿ) ; ಉಡಿಯಲ್ಲಿ ಎಳೆ ಹಿಂಗಾರದ ಕುಡಿ. ಅವನ ಮೋರೆ ಬರುಬರುತ್ತ ಹಂದಿಯ ಮೋರೆಯಂತೇ ಕಂಡಿತು. ಕೈಯ ಗಂಟೆಯನ್ನು ಗಣಗಣ ಬಾರಿಸುತ್ತ, ಹಿಡಿದ ಕತ್ತಿಯನ್ನು ಅತ್ತಿತ್ತ ಹಿರಿಯುತ್ತ, ಅವನು ಪೆರ್ಗಡೆಯ ಎದುರು ನಿಂತು ನಲಿಯುತ್ತ 'ಓಽಽ'ಯೆಂದು ದನಿಯೆತ್ತಿದ. ಆರಿದ್ದ ದೊಂದಿ ಬಗ್ಗನೆ ಉರಿಯಿತು. ಅದರ ಬೆಳಕಲ್ಲಿ ಇರಳು ಹಗಲೇ ಆಯಿತು !

ಸುತ್ತಲೂ ಇದ್ದವರೆಲ್ಲ ಗಂಟೆಯ ಸದ್ದಿಗೆ ಮೈಮರೆತರು. ಅವನ

ಮೋರೆಯನ್ನು ದಿಟ್ಟಿಸಿ ನೋಡುತ್ತ ನಿಂತರು. ಅವನಲ್ಲಿ ಭೂತ ತೋರಿ ಕೊಳ್ಳುತ್ತಿದೆಯೆಂದು ಬಗೆದು, ಅವನ ಬಾಯಿಂದ ಏನು ಮಾತು ಬಂದೀತೆಂದು, ತಲೆಬಾಗಿ ಕೈಕಟ್ಟಿ ನಿಂತರು. ಅವನು ಉಳಿದ ಯಾರ ಕಡೆಯೂ ನೋಡದೆ, ಪೆರ್ಗಡೆಯ ಕಡೆಯೇ ತಿರುಗಿದ್ದು, ಅವನನ್ನೇ ಕುರಿತು "ಓss ಪೆರ್ಗಡೇ! ಬೀಡಿನ ಸಹಾಯಕ್ಕೆ ದೈವಗಳು ಬಂದಿವೆ, ಬೀಡಿನ ಮೂಲಕ್ಕೆ ಭೂತ ಬಂದಿದೆ, ನಂಬು! ನಂಬಿದೆಯಾದರೆ, ನಂಬಿದಂತೆ ನಡೆದುಕೊಂಡದ್ದಾದರೆ ಬೀಡು ಉಳಿ ದೀತು, ಬೀಡವರು ಬೆಳೆದಾರು; ತೊಂದರೆ ತೊಲಗೀತು, ಸುಖ ಒದಗೀತು! ಭೂತವನ್ನು ನಂಬುವವರಲ್ಲಿ ಸುಳ್ಳು ಸಲ್ಲದು, ಕಪಟ ಕೂಡದು, ಕೊಟ್ಟ ಮಾತು ತಪ್ಪಬಾರದು, ಇಟ್ಟ ಗಡುವು ಮೀರಬಾರದು; ನ್ಯಾಯಕ್ಕೆ ನಡೆದು ಕೊಳ್ಳತಕ್ಕದ್ದು, ದಾನಧರ್ಮ ಮಾಡತಕ್ಕದ್ದು. ಹೀಗಾದರೆ ಎಂಥ ಕಷ್ಟದಲ್ಲೂ ಭೂತ ಕಾಪಾಡುವುದು; ಅಂಜಿಕೆ ಬೇಡ! ಭೂತವನ್ನು ನಂಬದಿದ್ದರೆ ಅದು ಇಲ್ಲಿಂದ ಕಾಲು ತೆಗೆಯುವುದು ಕಂಡಿತ! ಮೂಲಕ್ಕೆ ಭೂತವಿಲ್ಲದ ಬೀಡು ಸಹಾಯಕ್ಕೆ ದೈವವನ್ನು ಎಣಿಸಲಾರದು. ಭೂತ ಮುನಿದರೆ ಅದರ ಕೈಯ ಕತ್ತಿಯ ಧಾರೆ ಅನುಭವಕ್ಕೆ ಬಂದೀತು! ತಿಳಿನೀರು ಕೆಸರಾದೀತು. ಓಡುವ ಕಾಲು ಕಡಿದು ಬಿದ್ದೀತು, ಹಿಡಿಯುವ ಕೈ ಕತ್ತರಿಸಿ ಉದುರೀತು, ಬೀಡು ಬೂದಿಯಾದೀತು, ಬೀಡವರು ಕಡೆಕಣ್ಣಿಂದ ಕಡುದುಃಖದ ಕಣ್ಣೀರು ಸುರಿಸಿ ಯಾರು, ಜೋಕೆ!" ಎಂದು ಗದ್ದರಿಸಿ ಹೇಳಿದುದನ್ನು ಎಲ್ಲರೂ ಹೆದರಿ ಹೆದರಿ ಆಲಿಸಿದರು.

ಅವನು ಹೀಗೆ ಹೇಳುವಾಗ ಅದು ಅವನ ಎಂದಿನ ದನಿಯಲ್ಲ; ಹಿಂದೆಂದೂ ಕೇಳದ ಗಂಡು ಗಡಸು ಗಟ್ಟಿ ದನಿ. ಅವನ ಒಂದೊಂದು ಮಾತಿಗೂ ದೂರದ ಯಾವುದೋ ಗಂಟೆ ಉಲಿಯುವುದು; ಕಣ್ಣಿಗೆ ಕಾಣದ ಕೊರಳುಗಳು ಹೂ ಗುಟ್ಟುವವು; ಜೋರಿಂದ ತೆಂಬರೆ ಬಡಿದದ್ದು ಕೇಳುವುದು; ನಡುವೆ ದುಡಿಯ ಮಿಡಿತ, ಕೊಂಬಿನ ಕೂಗು, ಡೆಣಡೆಣ್ಣವೆಂಬ ಮೊರೆತ. ಪೆರ್ಗಡೆಗೆ ಹೇಳ ಬೇಕಾದುದನ್ನು ಹೇಳಿ ಭೂತದ ಮಾನಿಯುನ್ನು ಮೈವೆತ್ತ ಮನುಷ್ಯ, ಪೆರ್ಗ ಡೆಯ ಕೈಹಿಡಿದು ದಡದಡನೆ ಚಾವಡಿಯ ಕಡೆ ಓಡಿದನು. ಅವನ ಹಿಂದೆ ಬೀಡವರೂ ಭಯಭಕ್ತಿಗಳಿಂದ ನಡೆದರು. ಚಾವಡಿಗೆ ಬಂದಾಗ ಚಾವಡಿಯ

ಹೆಬ್ಬಾಗಿಲು ತಾನೇ ತೆರೆದುಕೊಂಡಿತು ; ವೊಗಸಾಲೆಯ ತೂಗುಯ್ಯಾಲೆಯ ಮೇಲೆ ಕತ್ತಿ, ಕಡಸಲೆ, ಗಂಟೆಗಳಿದ್ದುವು. ಭೂತದ ಮಾನಿಯನ್ನು ತಳೆದು ಪೆರ್ಗಡೆಯ ಕೈಹಿಡಿದು ಬಂದವನು ಪೆರ್ಗಡೆಯನ್ನು ಆ ತೂಗುಯ್ಯಾಲೆಯ ಮೇಲೆ ಕುಳ್ಳಿರಿಸಿ, ಅವನ ಕೈಗೆ ಅಲ್ಲಿರಿಸಿದ್ದ ಕತ್ತಿಯನ್ನು ಕೊಟ್ಟನು. ಅಲ್ಲಿದ್ದ ನಂದಾದೀಪ ತಾನೇ ಹೊತ್ತಿಕೊಂಡಿತು.

ಮತ್ತೆ ಪೆರ್ಗಡೆಯನ್ನು ದಿಟ್ಟಿಸಿ ನೋಡುತ್ತ "ಓss ಪೆರ್ಗಡೇ ! ಇದು ದೈವಗಳ ಪಟ್ಟದ ಕತ್ತಿಯೆಂದು ತಿಳಿ ! ಅದು ನಿನ್ನ ಕೈಯಲ್ಲಿರುವಾಗ ದೈವಗಳೇ ನಿನ್ನಲ್ಲಿರುವರೆಂದು ನಂಬು ! ಈಗ ಈ ಚಾವಡಿ ದೈವಗಳ ನೆಲೆವೀಡು. ನೀನು ತೋರಿದ ಆದರಕ್ಕೆ ಒಲಿದು ದೈವಗಳು ಇಲ್ಲಿಯೇ ಕಾಲು ಊರಿದ್ದಾರೆ. ಇದೇ ಆದರವನ್ನು ಎಲ್ಲರಿಗೂ ತೋರುವೆಯಾದರೆ ದೈವಗಳು ಇಲ್ಲೇ ಉಳಿದಾರು, ನಿನ್ನನ್ನು ಎಚ್ಚರದಿಂದ ನೋಡಿಕೊಂಡಾರು, ಬೀಡಿಗೆ ಭಾಗ್ಯವನ್ನು ತಂದಾರು, ಬರುವ ತೊಡಕನ್ನೆಲ್ಲ ಒಡನೆಯೇ ಬಿಡಿಸಿಯಾರು, ಕಾಣದ ಕಷ್ಟ ಕಾಡದಂತೆ ಕಾಪಾಡಿಯಾರು, ನಿಂತಲ್ಲಿ ನೆಮ್ಮದಿಯನ್ನು ನೆಲೆಗೊಳಿಸಿಯಾರು ! ಅರಿಯದೆ ಆದ ಅಪಚಾರವನ್ನು ಮುನಿಯದೆ ಮನ್ನಿಸಿಯಾರು. ಆದರೆ ಅರಿತೂ ಅಡ್ಡ ದಾರಿ ಹಿಡಿದರೆ ಒಡಲ ನೆತ್ತರನ್ನು ನೆತ್ತಿಗೆ ಹತ್ತಿಸಿಯಾರು ! ನೆತ್ತಿಯ ನೆತ್ತರನ್ನು ಬತ್ತಿಸಿಯಾರು ; ಕೈಯಲ್ಲಿ ಹಿಡಿದ ಎಣ್ಣೆಯನ್ನು ಕಣ್ಣಿಗೆ ಸಿಡಿಸಿಯಾರು ! ಕಾಲು ಕಾಸಿಯುವುದು ಕಾಣದಂತೆ ನೆಲಕ್ಕೆ ಬೀಳಿಸಿಯಾರು ! ಬೆಳಕಿನ ಬೀಡನ್ನು ಕತ್ತಲೆಯ ಕಾಡು ಮಾಡಿಯಾರು ! ಎಚ್ಚರಿಕೆ ! ನ್ಯಾಯದಂತೆ ನಡೆದರೆ ಅಂಜುವ ಕಾರಣವಿಲ್ಲ ; ಅನ್ಯಾಯದಲ್ಲಿ ಅಡಿಯಿಟ್ಟರೆ ಉಳಿಯುವ ನೆಚ್ಚಿಗೆಯಿಲ್ಲ !" ಎಂದು ಅಬ್ಬರಿಸಿದನು.

(14)

ಪೆರ್ಗಡೆಯ ಚಾವಡಿ ಈಗ ದೈವಗಳ ನೆಲೆವೀಡು. ಅದರ ಒಳಗೆಲ್ಲ ಹಗಲಿರುಳೂ ಬೆಳ್ಳಂಬೆಳಕು, ಹೊರಗೆ ಉರಿಯ ಬೇಲಿ. ಅದರ ಹತ್ತಿರ ಹೋಗುವ ಎದೆಗಾರಿಕೆ ಯಾರಿಗುಂಟು ? ಒಳಗೇನಿದೆಯೆಂದು ನೋಡುವ ಹುಚ್ಚು ಕೆಚ್ಚು

ಯಾರಿಗೆ ? ಅತ್ತಣಿಂದ ಎಡೆಬಿಡದ ಸೆಳವು ಬೀಡವರಿಗೆಲ್ಲ ; ಆದರೆ ಅತ್ತ ಅಡಿಯಿಡಲು ಅಂಜುವರು. ಒಡಲು ಆ ಕಡೆ ಹೊರಡುವುದು ; ಆದರೆ ಕಾಲು ಅಲ್ಲಿಂದ ಹಿಂದೆಗೆಯುವುದು. ತಮ್ಮ ನೆರೆಯಲ್ಲೇ ದೈವಗಳು ಇರುವುವೆಂಬ ಅರಿವಷ್ಟೆ ಅವರಿಗುಂಟು. ದೈವಗಳನ್ನು ಕಣ್ಣಾರೆ ಕಂಡವರಿಲ್ಲ, ದೈವಗಳು ಅಲೆದಾಡುವುದನ್ನು ಗುರುತಿಸಿದವರಿಲ್ಲ, ದೈವಗಳೊಂದಿಗೆ ಮಾತಾಡಿದವರಿಲ್ಲ. ಆದರೆ ದೈವಗಳ ಬೀಡಲ್ಲಿ ತೂಗುಯ್ಯಾಲೆಯ ಮೇಲೆ ಬತ್ತಿಯಿರದ ನಂದಾದೀಪ ನಂದದೆ ಇರುವುದನ್ನು ನೋಡುವರು ; ಅಲ್ಲಿಂದ ಗಗ್ಗರದ ಸದ್ದು ಇರುಳಲ್ಲಿ ಗಾಳಿಯನ್ನು ಸೀಳಿಕೊಂಡು ಬರುವುದನ್ನು ಗುರುತಿಸುವರು ; ಹಿಂಗಾರದ ಪರಿಮಳ ಸುತ್ತಲೂ ಹರಡಿಕೊಂಡು ತಮ್ಮೆಡೆಗೆ ಬರುವುದನ್ನು ಮೂಸುವರು. ದೈವಗಳು ಬೀಡೊಳಗೆ ಓಲಗವಾಗಿರುವಾಗ ಬೀಡವರಿಗೆ ಕಡೆಗೂ ಬೇರು ಬಿಟ್ಟು ನೆಲೆಗೊಂಡೆವೆಂಬ ನೆಮ್ಮದಿ. ಆದರೆ ತಾವು ಮಾಡುವ ಎಲ್ಲ ಮಾಟವನ್ನೂ ದೈವಗಳು ತಪ್ಪದೆ ಬಿರುಗಣ್ಣಿಂದ ನೋಡಿಯಾರೆಂಬ ದಿಗಿಲೂ ಉಂಟು.

ಈಗ ಬೀಡಿನ ಪೆರ್ಗಡೆ ಚಾವಡಿಯಲ್ಲಿ ಇರುವುದಿಲ್ಲ. ಬೆಳಕಿನ ದೈವಗಳೊಟ್ಟಿಗೆ ಮಣ್ಣಿನ ಮನುಷ್ಯರು ಬಾಳಬಹುದೆ ? ಕಡೆ ಕಾಣದ ಕಡಲಲ್ಲಿ ಗಡಿಗೆ ಈಡಾಡಬಹುದೆ ? ನೀರಿನ ನೆರೆ ಮೇಲೇರಿ ಮೆರೆಯುವಾಗ, ಅಲೆ ಅಬ್ಬರಿಸಿ ಬರುವಾಗ ಆರಾಟಕ್ಕೆ ಎಡೆಯುಂಟೆ ? ಚಾವಡಿಯನ್ನು ದೈವಗಳಿಗೇ ಕೊಡಿಕಟ್ಟಿ ಬಿಟ್ಟು ಪೆರ್ಗಡೆ ಬೇರೊಂದೆಡೆ ನೆಲೆಗೊಂಡಿದ್ದಾನೆ. ದೈವಗಳು ಕರೆಸಿದಾಗ ಮಾತ್ರ ಅಲ್ಲಿಗೆ ಹೋಗುವನು ; ಉಳಿದಹಾಗೆ ಆ ಕಡೆ ಹಾಯುವುದಿಲ್ಲ. ಅಲ್ಲಿಗೆ ಹೋಗುವಾಗ ಎಚ್ಚರದಿಂದ, ಅಂಜಿಕೆಯಿಂದ, ಆದರದಿಂದ ಹೋಗುವನು. ಮೈಯ ಕೊಳೆಯನ್ನು ಕಳೆದು ಮಿಂದು, ಮೈಲಿಗೆ ತೆಗೆದು ಮಡಿಯುಟ್ಟು, ಕೈಕಟ್ಟಿಕೊಂಡು ದೈವಗಳ ಬೀಡೊಳಗೆ ಕಾಲಿಡುವನು. ತಲೆಬಾಗಿ ಕೈಜೋಡಿಸಿ ದೈವಗಳ ನುಡಿಯನ್ನು ಆಲಿಸುವನು. ಮಾತಾಡದೆ ಪೊಡಮಟ್ಟು ಅಲ್ಲಿಂದ ಹಿಂದಿರುಗುವನು. ಕಾಲಕಾಲಕ್ಕೆ ದೈವಗಳಿಗೆಂದು ಕೋಲ, ನೇಮ, ಪರ್ವ, ಪೂಜೆಗಳನ್ನು ನಡೆಸುವನು.

ಪೆರ್ಗಡೆಯಲ್ಲದೆ ಬೀಡವರು ಯಾರೂ ಅಲ್ಲಿಗೆ ಕಾಲು ಇರಿಸುವುದಿಲ್ಲ. ಬೀಡವರಿಗೂ ದೈವಗಳಿಗೂ ನೆಂಟು ಪೆರ್ಗಡೆಯ ಮೂಲಕವೇ. ಪೆರ್ಗಡೆಯನ್ನು

ದೈವಗಳ ಬಂಟನೆಂದೇ ಕಾಣುವರು ; ತಮ್ಮ ಕಷ್ಟ ಕಾರ್ಪಣ್ಯಗಳನ್ನು ಪೆರ್ಗಡೆ ಯೆದುರೇ ತೋಡಿಕೊಳ್ಳುವರು ; ತಮ್ಮ ಬಯಕೆ ಹರಕೆಗಳನ್ನು ಪೆರ್ಗಡೆಯ ಮಡಿಲಿಗೇ ಹಾಕುವರು ; ಪೆರ್ಗಡೆಯ ಮಾತನ್ನು ದೈವಗಳ ಮಾತೆಂದೇ ಬಗೆಯುವರು ; ಪೆರ್ಗಡೆ ಒಲಿದರೆ ದೈವಗಳೇ ಒಲಿದುವೆಂದುಕೊಳ್ಳುವರು. ಪೆರ್ಗಡೆಯೂ ದೈವಗಳ ಊಳಿಗದವನು ತಾನೆಂದು ತಿಳಿದು, ಬೀಡಿನ ಒಳಿತಿಗೆ ಬೇಕಾದುದನ್ನೆಲ್ಲ ಮಾಡುವನು. ದೈವಗಳನ್ನೇ ನಂಬಿ ನೆನೆಯುತ್ತ, ಅವು ಗಳನ್ನೆ ಮುಂದಿರಿಸಿಕೊಂಡು, ಅವು ಕೊಡಮಾಡಿಕೊಟ್ಟ ನುಡಿಕಟ್ಟನ್ನು ತಪ್ಪದೆ ನಡೆಸುತ್ತ, ಬೀಡನ್ನು ನೋಡಿಕೊಳ್ಳುವನು. ಬೀಡವರೂ ಅವನನ್ನು ನಂಬಿ, ಅವನಲ್ಲಿ ಗೌರವಬುದ್ಧಿಯಿಂದ ಅವನ ಮಾತನ್ನು ನಡೆಸುವರು.

ದೈವಗಳನ್ನು ಬೀಡೊಳಗೆ ಬರಮಾಡಿಕೊಂಡ ಮೊದಲ ಪೆರ್ಗಡೆ ದೈವ ಗಳನ್ನು ಅಸಡ್ಡೆ ಮಾಡುವಂತಿರಲಿಲ್ಲ. ಸಹಾಯಕ್ಕೆ ದೈವಗಳು ಇರದಿದ್ದ ಕಾಲ ವನ್ನೂ ಕಂಡಿದ್ದವನು ತಾನೆ ? ದೈವಗಳು ಬೀಡೊಳಗೆ ಕಾಲಿರಿಸಿದ ಮೇಲೆ ಬೀಡಿನ ಭಾಗ್ಯ ಬೆಳೆದುದನ್ನು ಕಣ್ಣಾರೆ ಕಂಡವನು ; ದೈವಗಳಿಗೆ ತನ್ನ ಚಾವಡಿ ಯನ್ನೇ ಬಿಟ್ಟುಕೊಟ್ಟುವನು. ಆದರೆ ಅವನ ಕಾಲ ಮುಗಿದು ಎಷ್ಟೋ ತಲೆ ಮೊರೆಗಳು ಕಳೆದಮೇಲೆ, ಪಟ್ಟಕ್ಕೆ ಬಂದ ಪೆರ್ಗಡೆಯರಿಗೆ ದೈವಗಳು ಬೀಡೊ ಳಗೆ ಬಂದುದು ಹಳೆಯದೊಂದು ಕತೆಯಷ್ಟೆ. ಪೆರ್ಗಡೆಯಿಂದಮೇಲೆ ದೈವಗಳ ನೆರವು ಇದ್ದದ್ದೇ ತಾನೆ ? ತನಗಲ್ಲದೆ ದೈವಗಳು ಇರುವುದು ಯಾತಕ್ಕೆ ? ದೈವ ಗಳಿಗಾಗಿ ತಾನೋ, ತನಗಾಗಿ ದೈವಗಳೋ ಎಂಬ ಶಂಕೆಯೇ ಬರುವಂತಿರಲಿಲ್ಲ. ಬೀಡ ಒಡೆತನವಂತೂ ಗಟ್ಟಿಯಾಯಿತು. ದೈವದ ಕತೆ ಬೀಡವರನ್ನು ಮರುಳು ಮಾಡಿ ಪೆರ್ಗಡೆಯ ಹೆಗ್ಗಳಿಕೆಯನ್ನು ಹೆಚ್ಚಿಸುವುದಾದರೆ ಸರಿ !

ಕಾಲಕಾಲಕ್ಕೆ ಪದ್ಧತಿಯಂತೆ ದೈವಗಳಿಗೆ ಕೋಲ, ನೇಮ, ಪರ್ವ, ನಡಾ ವಳಿ ನಡೆಯುವುದು. ಆದರೆ ಮೊದಲ ಪೆರ್ಗಡೆಗಳಲ್ಲಿರುತ್ತಿದ್ದ ನಂಬಿಕೆ, ಅಂಜಿಕೆಗಳು ಈಗ ಸಡಿಲವಾಗಿದ್ದುವು. ನಂಬಿಕೆಯಿಲ್ಲದಿದ್ದರೆ ಇವೆಲ್ಲ ನಾಟಕ ವಷ್ಟೆ ? ಅಂಜಿಕೆಯಿಲ್ಲದಿದ್ದರೆ ಮನಸ್ಸಿನ ಆಸೆ ಮೋಸಕ್ಕೆ ಮಿತಿಯುಂಟೆ ? ಕಾಣದ ದೈವಗಳನ್ನು ಬೀಡ ಒಡೆಯ ನಂಬುವ ಕಾರಣವೇನು ? ನಂಬಿದ ನಾಟಕ ನಡೆದರೆ ಸಾಕು. ಬೀಡವರು ಮಾತ್ರ ನಂಬಬೇಕು ! ಅವರು ನಂಬ

ದಿದ್ದರೆ ಪೆರ್ಗಡೆಯ ಅಂಕೆಯೊಳಗೆ ಹೇಗಿದ್ದಾರು ? ಕಣ್ಣಿಗೆ ಕಾಣುವ ದೈವ ಪೆರ್ಗಡೆಯೆಂದು ಅವರು ಬಗೆದರೆ ತಾನೆ ಪೆರ್ಗಡೆಯ ಉಳಿವು ? ಕಣ್ಣಿಗೆ ಕಾಣುವ ಮಣ್ಣಿನ ಮನುಷ್ಯನನ್ನು ದೈವವೆಂದು ಬಗೆಯಬೇಕಾದರೆ ಕಣ್ಣಿಗೆ ಕಾಣದ ದೈವವನ್ನು ನೆರೆನಂಬಬೇಕು.

ದೈವಗಳಿಗೆಂದು ಪಟ್ಟಕ್ಕೆ ಬಂದ ಪೆರ್ಗಡೆ ಮಾಡುವುದೆಲ್ಲ ಹಿಂದಿನಿಂದ ನಡೆದುಬಂದ ಪದ್ಧತಿಯಾಯಿತು, ಹಿರಿಯರು ಅನುಸರಿಸಿದ ಆಚಾರವಾಯಿತು ; ಪೆರ್ಗಡೆ ತನ್ನನ್ನು ಬೀಡವರೆದುರು ದೈವದ ನೆಂಟರುವವನೆಂದು ತೋರಿಸಿ ಕೊಳ್ಳಲು ಆಟವಾಯಿತು. ದೈವಗಳ ಕಟ್ಟು ಕಟ್ಟಳೆ ಆಡಳಿತದ ಹವಣಿಕೆ ಯಾಯಿತು ; ದೈವದ ನುಡಿಕಟ್ಟು ಮನುಷ್ಯನ ಬಾಯಿಮಾತಾಯಿತು. ದೈವ ಬೀಡೊಳಗೆ, ಪೆರ್ಗಡೆಯ ಒಡಲಲ್ಲಿ ಅಲ್ಲ. ಪೆರ್ಗಡೆಯ ಒಡಲಲ್ಲಿ ದೈವಗಳ ಮೇಲೂ ತನ್ನ ಅಂಕೆ ಉಂಟೆಂದು ಹೆಮ್ಮೆ ತುಂಬಿರುವಾಗ ದೈವಗಳಿಗೆ ಎಡೆ ಯುಂಟೆ ?

ಎಲ್ಲವನ್ನೂ ಅರಿಯುವ ದೈವಗಳಿಗೆ ಇದು ಅರಿವಿಗೆ ಬಾರದೆ ಇರುವು ದುಂಟೆ ? ಪೆರ್ಗಡೆಯ ಸಹಾಯಕ್ಕೆಂದೇ ದೈವಗಳು ಇಲ್ಲಿಗೆ ಬಂದುದು ದಿಟ. ಆದರೆ ಪೆರ್ಗಡೆಗೆ ಸಹಾಯವೆಂದರೆ ಬೀಡವರಿಗೆ ಹಿತಕ್ಕಾಗಿ ತಾನೆ ? ದೈವಗಳಿಂದ ಬೀಡವರನ್ನು ದೂರವಿರಿಸಿ, ತಾನು ನಡುವೆ ಇದ್ದುಕೊಂಡು, ದೈವಗಳಿಗೆ ಬೀಡ ವರ ಬಂಟನೆಂದೂ, ಬೀಡವರಿಗೆ ದೈವಗಳ ಬಂಟನೆಂದೂ ತೋರಿಸಿಕೊಳ್ಳುವುದು ಪೆರ್ಗಡೆಯ ನೀತಿಯಾದರೆ, ಅತ್ತ ಬೀಡವರನ್ನೂ ಇತ್ತ ದೈವಗಳನ್ನೂ ಕಡೆ ಗಾಣಿಸುವುದು ಅವನ ರೀತಿಯಾದರೆ ಬೀಡವರೂ ಸುಮ್ಮನಿರರು, ದೈವಗಳೂ ಸುಮ್ಮನಿರವು. ದೈವಗಳಿಗೆ ಬೇಕಾದುದು ಬೀಡವರ ಹಿತ. ಬೀಡವರಿಗೆ ಬೇಕಾದುದು ದೈವಗಳ ನೆರವು. ಎರಡನ್ನೂ ಕೂಡಿಸುವಂತಿದ್ದರೆ ಮಾತ್ರ ಪೆರ್ಗಡೆಯ ಸಹಾಯಕ್ಕೆ ದೈವಗಳು.

ಅಷ್ಟಲ್ಲದೆ, ಪೆರ್ಗಡೆಯ ಸಹಾಯಕ್ಕೆ ದೈವಗಳಾದರೂ ಬೀಡಿನ ಮೂಲಕ್ಕೆ ಭೂತವಿದೆಯಲ್ಲ ? ದೈವಗಳನ್ನು ಕುಕ್ಕೇದೇವರ ಎಡೆಯಿಂದ ಕುಡುಮದ ಕಾಡಿಗೆ ಕರೆತಂದು ಬೀಡೊಳಗೆ ನೆಲೆ ನಿಲ್ಲಿಸಿದ ಅಣ್ಣಪ್ಪುಪಂಜುರ್ಲಿ ತಾನು

ಬೀಡ ಚಾವಡಿಯ ಹತ್ತಿರವಿದ್ದ ಗುಡ್ಡದ ಮೇಲೆ ನೆಲೆಗೊಂಡಿತ್ತು. ಗುಡ್ಡದ ಮೇಲಿದ್ದ ಗುಳಿಗಭೂತದ ಉಪದ್ರವವನ್ನು ತಪ್ಪಿಸಿ ಅದು ಅಲ್ಲಿಂದ ಓಡಿ ಹೋದಮೇಲೆ, ಗುಡ್ಡ ಅಣ್ಣಪ್ಪುಭೂತದ್ದಾಯಿತು. ಆದರೆ ತಾನು ಮನುಷ್ಯ ನಾಗಿರುವಾಗ ತನ್ನ ಬಾಳನ್ನು ತಿದ್ದಿ, ಭೂತವಾದ ಮೇಲೂ ದಾರಿ ತೋರಿಸು ತ್ತಿದ್ದ ಜೋಗಿಪುರುಷದೈವ ಕಡಲತೀರದ ಕದಲಿಗುಡ್ಡದ ಮೇಲೆ ಇದ್ದಿತಾಗಿ, ಆಗಾಗ ಅಣ್ಣಪ್ಪು ಅಲ್ಲಿಗೆ ಹೋಗಿಬರುತ್ತಿತ್ತು.

ತನ್ನ ಗುಡ್ಡದ ನೆರೆಯಲ್ಲಿದ್ದ ಬೀಡಲ್ಲಿ ದೈವಗಳು, ಪೆರ್ಗಡೆ ತಮಗೆ ನಡೆದುಕೊಳ್ಳುತ್ತಿದ್ದ ರೀತಿಗೂ ಬೀಡವರನ್ನು ನಡೆಸಿಕೊಳ್ಳುತ್ತಿದ್ದ ನೀತಿಗೂ ಬೇಸತ್ತು, ಬೀಡವರ ನಡುವೆಯೇ ಇದ್ದರಾಯಿತೆಂದು ನಿರ್ಧರಿಸಿದುವು. ತಾವಿರುವ ಬೀಡೊಳಗೆ ಪೆರ್ಗಡೆಯೊಬ್ಬ ಮಾತ್ರ ಬಂದಾನು, ತಮ್ಮೊಂದಿಗೆ ಅವನೊಬ್ಬ ಮಾತ್ರ ಮಾತನಾಡಿಯಾನು ; ಬೀಡವರು ದೂರವೇ. ತಮಗೂ ಬೀಡವರಿಗೂ ನೇರವಾದ ನೆಂಟು ಉಂಟಾಗುವುದು ಹೇಗೆಂದು ದೈವಗಳು ಅಣ್ಣಪ್ಪುಭೂತದ ಜೊತೆ ಆಲೋಚಿಸಿದುವು. ಅಣ್ಣಪ್ಪುಭೂತ ಕಡಲತೀರದ ಕದಲಿಗುಡ್ಡಕ್ಕೆ ಹೋಗಿ ಎಲ್ಲವನ್ನೂ ಬಲ್ಲ ಜೋಗಿಪುರುಷ ದೈವವನ್ನು ಕೇಳಿ ಬರುವುದಾಗಿ ಹೇಳಿ ಹೊರಟಿತು.

(15)

ಅಣ್ಣಪ್ಪು ಕದಲಿಗುಡ್ಡಕ್ಕೆ ಬಂದಾಗ ಅಲ್ಲಿ ಕಾಳಕತ್ತಲೆ. ಎಲ್ಲೆಲ್ಲಿ ನೋಡಿದರೂ ಬೆಳಕಿನ ಒಂದು ಸಣ್ಣ ತುಣುಕೂ ಕಾಣಿಸದು. ಹೀಗೇಕೆಂದು ಅದಕ್ಕೆ ಅಚ್ಚರಿಯಾಯಿತು. ದೈವ ಇರುವೆಡೆ ಬೆಳಕಿನ ಹೊಳೆಯೇ ಹರಿಯ ಬೇಕು, ಅಲ್ಲಿ ಬೀಸುವ ಗಾಳಿಯೂ ಬೆಳ್ಳಗೆ ಬೆಳಗಬೇಕು. ಜೋಗಿಪುರುಷ ದೈವವಂತೂ ಮಣ್ಣಿನ ಮೈಯಿರುವಾಗಲೇ ಒಡಲಲ್ಲಿ ಬೆಳಕಿದ್ದು, ಬಾಳೇ ಬೆಳಗುತ್ತಿದ್ದಿತು. ಇನ್ನು ದೈವವಾದಮೇಲೆ ಕೇಳಬೇಕೆ ? ಈಗ ಹೀಗೇಕೆ ಕತ್ತಲೆ ? ಕಪ್ಪುಕಾಡಿಗೆಯ ನಡುವೆ ಕಣ್ಣು ಕಾಣಿಸುವಂತೆ ಕತ್ತಲೆಯ ಒಳ ಗಿಂದ ಸೊಲ್ಲು ಕೇಳಿಬಂತು—'ಜೋಗಿಪುರುಷದೈವ ಜೋಗವನ್ನು ಕಳೆದು



ಮಾಯವಾಗಿ, ಮಾಯವನ್ನೂ ಮೀರಿ, ಸಿದ್ಧ ಶಿಲೆಯು ಕೋಡುಗಲ್ಲಾಗಿ ಉಳಿದಿದೆ !' ಗುಡ್ಡದ ಮೇಲೆ ಕಾಡಕತ್ತಲೆಯಲ್ಲೇ ಇನ್ನಷ್ಟು ಕಪ್ಪಾಗಿ ಈ ಕೋಡುಗಲ್ಲು ಕಾಣಿಸಿಕೊಂಡಿತು.

ಇನ್ನು ಲೋಕದ ನೆಂಟು ಅದಕ್ಕೆ ಏನೇನೂ ಇರದು. ಇನ್ನು ಅದರ ಜೋಗವನ್ನು ಮನುಷ್ಯರು ನೋಡಲಾರರು, ಅದರ ಮಾಯವನ್ನು ದೈವಗಳು ಕಾಣಲಾರವು ! ಇನ್ನು ಜೋಗಿಪುರುಷದೈವದ ದರ್ಶನ ತನಗೆ ಆಗಲಿಕ್ಕಿಲ್ಲ ಎಂದು ತಿಳಿದು ಅಣ್ಣಪ್ಪ ಬಿಕ್ಕಿ ಬಿಕ್ಕಿ ದುಃಖಿಸಿತು ; ಕಡೆಕಣ್ಣಿಂದ ಕಡು ದುಃಖದ ಕಣ್ಣೀರು ಸುರಿಸಿತು. ತಾನೂ ಮನುಷ್ಯನಾಗಿ ಇರುವಾಗ ತನ್ನ ಓರೆಕೋರೆಗಳನ್ನು ತಿದ್ದಿ ಬಾಳನ್ನು ಬೆಳಗಿ, ಭೂತವಾದ ಮೇಲೂ ನೇರವಾದ ದಾರಿಯನ್ನು ತೋರಿಸಿದ ಜೋಗಿಪುರುಷ ಇನ್ನು ತನ್ನ ಕಣ್ಣಿಗೆ ಕಾಣುವುದಿಲ್ಲ, ಮಾತಿಗೆ ಮೂಡುವುದಿಲ್ಲ, ಕರೆದರೆ ಓಯೆಂದು ಬರುವುದಿಲ್ಲ, ಬಂದರೆ ಬಾಯೆಂದು ಕರೆಯುವುದಿಲ್ಲ ! ಇನ್ನೇನು ಮಾಡುವುದು ? ಮುಂದೇನು ಗತಿ ? ಎಂದು ಅಣ್ಣಪ್ಪ ಚಿಂತಿಸಿತು.

ಅಷ್ಟರಲ್ಲಿ ಗುಡ್ಡದ ಮೇಲಿಂದ ಮಂಜಿನಂಥ ತಿಳಿಬೆಳಕು ಹರಡಿಕೊಂಡು, ಆ ಬೆಳಕಿನೊಳಗಿಂದ "ಯಾಕೆ ಅಳುವುದು ?" ಎಂಬ ಸೊಲ್ಲು ಹೊರಹೊಮ್ಮಿತು. ಒಡನೆಯೇ ಅಣ್ಣಪ್ಪನ ದುಗುಡ ದೂರವಾಗಿ, ಕಿವಿಗೊಟ್ಟು ಕೇಳಿತು. "ಹುಟ್ಟಿದ್ದು ಚಂದ್ರಗಿರಿಯಲ್ಲಿ, ಬೆಳೆದದ್ದು ಮಂಜಿನ ಬೆಟ್ಟದ ನಾಥ ಜೋಗಿಗಳ ನಡುವೆ, ಬಂದದ್ದು ತೆಂಕಣದ ಕಡೆಗೆ, ಇಳಿದದ್ದು ಗಟ್ಟವನ್ನು, ಜೋಗ ಹೋದದ್ದು ಕುಡುಮದ ಕಾಡಿನಲ್ಲಿ, ಮಾಯವಾದದ್ದು ಕದಲಿಯಲ್ಲಿ. ಮಣ್ಣಿನ ಮೈಯವನು ಜೋಗಿಗಳ ಸಂಗದಲ್ಲಿ ಮರುಳಾದ ; ಮರುಳಾದವನು ಮತ್ತೆ ಮತ್ತೆ ನೋಂಪಿ ನಡೆಸಿ ಗಾಳಿಯಾದ ; ಬಾಳ ಹೊಳೆಯಲ್ಲಿ ಹರಿದಾಡುವ ಮೀನಿನ ಮೈಯೊಳಗೆ ಸುಳಿದಾಡಿ, ಆದಿನಾಥನ ಉಪದೇಶವನ್ನು ಆಲಿಸಿದ ; ಆದಿನಾಥಶಿವನ ಅರಿವಿನಲ್ಲೇ ಮರೆಯಾಗಿ ತಾನೂ ಶಿವನಾದ. ಬಿಳಿಬಣ್ಣದ ಆಕಾಶದೊಳಗೆ ಕೆಂಪುಬಣ್ಣದ ಪ್ರಕಾಶವಾದ, ಕೆಂಪುಬಣ್ಣದ ಪ್ರಕಾಶದೊಳಗೆ ಹೊಗೆ ಬಣ್ಣದ ಅವಕಾಶವಾದ, ಹೊಗೆಬಣ್ಣದ ಅವಕಾಶದೊಳಗೆ ಕಪ್ಪು ಬಣ್ಣದ ತತ್ತ್ವಪ್ರಕಾಶವಾದ, ಭೋಗಿಯಾಗಿದ್ದವನು ನಿದ್ದೆಯಿಂದ ಎದ್ದು ಯೋಗಿಯಾದ ;

ಯೋಗಿಯಾದವನು ಎಚ್ಚರವಾಗಿದ್ದು ಸಿದ್ಧನಾದ, ಸಿದ್ಧನಾಗಿ ನಿದ್ದೆ ಎಚ್ಚರ ಗಳೆರಡನ್ನೂ ಕಳೆದು ನಾಥನಾದ ; ನಾಥನಾಗಿ ಎರಡನ್ನೂ ಒಂದಾಗಿಸಿ ದೈವ ವಾದ. ಗಾಳಿಯಾಗಿ ಬೆಳಕಾದ ; ಬೆಳಕಾಗಿ ಭೂತವಾದ ; ಭೂತವಾಗಿ ದೈವ ವಾದ ; ದೈವವಾಗಿ ಪರತತ್ತ್ವವಾದ ; ದೈವಗಳಿಗೂ ದೈವನೆನಿಸಿದ.

ಜೋಗದಲ್ಲಿ ಮತ್ಸ್ಯ, ಮಾಯದಲ್ಲಿ ಇಂದ್ರ ; ಸ್ವಭಾವದಲ್ಲಿ ಚಂದ್ರ, ಪ್ರಭಾವದಲ್ಲಿ ನಾಥ ; ಸಾಧನೆಯಲ್ಲಿ ಜಿನ, ಕಾರಣಿಕದಲ್ಲಿ ಶಿವ. ಇರಬೇಕಾ ದಂತೆ ಇದ್ದು, ಬಿಡಬೇಕಾದುದನ್ನು ಬಿಟ್ಟು, ಮಾಡಬೇಕಾದುದನ್ನು ಮಾಡಿ, ಪಡೆಯಬೇಕಾದುದನ್ನು ಪಡೆದು ಈಗ ಬಟ್ಟ ಬಯಲಾಗಿದೆ ಜೋಗಿಪುರುಷ ದೈವ ; ಕೆಸರಿನ ಹಳ್ಳದಲ್ಲಿದ್ದು ಬೆಳಕಿನ ಗುಡ್ಡವನ್ನೇರಿ, ಗುಡ್ಡದ ಬಯಲ ತುದಿಯಲ್ಲಿ ಗಾಳಿಗೆ ಕದಲದ ಕೋಡುಗಲ್ಲಾಗಿ ನಿಂತಿದೆ. ಹೀಗೆ ಶಿವಲಿಂಗದಲ್ಲಿ ಮುಗಿಯಿತು ಅದರ ಕತೆ !

ಇನ್ನು, ನೀನು ಬಂದಿರುವುದು ಯಾತಕ್ಕೆಂಬ ವಿಚಾರ. ಚಾವಡಿ ಯೊಳಗೆ ಈವರೆಗೆ ಅಡಗಿರುವ ದೈವಗಳು ಇನ್ನು ಮುಂದೆ ಬೀಡವರ ಬದುಕಿನಲ್ಲಿ ಬೆರೆತುಕೊಳ್ಳುವುದು ಸರಿಯೇ. ಚಾವಡಿಯನ್ನು ಪೆರ್ಗಡೆ ದೈವಗಳಿಗೆ ಕೊಡ ಕಟ್ಟಿ ಬಿಟ್ಟಿರುವುದರಿಂದ ದೈವಗಳ ನೆಲೆ ಅಲ್ಲಿಯೇ ಇರಲಿ. ಪೂರ್ವಪದ್ಧತಿಯಂತೆ ಪೆರ್ಗಡೆ ದೈವಗಳಿಗೆ ಕೋಲ, ನೇಮ, ಪರ್ವ, ನಡಾವಳಿಗಳನ್ನು ಅಲ್ಲಿಯೇ ನಡೆಸಲಿ. ಬೀಡವರು ತಂತಮ್ಮ ಹರಕೆ, ಕೋರಿಕೆ, ಬಲಿ, ಪೂಲಿ ಸಲಿಸಲು ಬೀಡಬದಿಯ ದಿಣ್ಣೆಯ ಮೇಲೆ ದೈವಗಳಿಗೊಂದು ದೇಗುಲ ಆಗಲಿ. ದೈವಗಳು ಮಾಯದಿಂದ ಚಾವಡಿಯಲ್ಲಿರಲಿ ; ಜೋಗದಿಂದ ದೇಗುಲದಲ್ಲಿರಲಿ. ದೇಗುಲಕ್ಕೆ ಕಾರಣಿಕ ಕೂಡಿಬರಲು, ಈಗ ಇಲ್ಲಿ ಕೋಡುಗಲ್ಲಾಗಿ ನಿಂತಿರುವ ಜೋಗಿ ಪುರುಷದೈವವನ್ನು ಇಲ್ಲಿಂದ ಅಲ್ಲಿಗೆ ಕೊಂಡುಹೋಗಿ ದೈವಗಳ ನೆರೆಯಲ್ಲಿ ಶಿವ ಲಿಂಗವೆಂದು ನೆಲೆಗೊಳಿಸು. ಬೀಡವರ ಭಕ್ತಿ ಬೆಳೆದೀತು ; ಬೀಡಿನ ಭಾಗ್ಯ ಬಲಗೊಂಡೀತು, ಪೆರ್ಗಡೆಗೊಂದು ಕಟ್ಟುಪಾಡು ಕೂಡಿಕೊಂಡೀತು !"

ಈ ಮಾತನ್ನು ಕೇಳಿದೊಡನೆ ಅಣ್ಣಪ್ಪುವಿಗೆ ತಾನು ಏಳೇಳು ಜನ್ಮಗಳಲ್ಲಿ ಜೋಗಿಪುರುಷದೈವದ ಬಂಟನಾಗಿದ್ದುದು ನೆನಪಿಗೆ ಬಂತು. ಇನ್ನು ಎಂದೆಂದಿಗೂ

ತನ್ನ ಗುಡ್ಡದ ಹತ್ತಿರವೇ ಅದರ ನೆಲೆ! ಒಂದು ಗಳಿಗೆಗೆ ಮೊದಲು ಕಡೆಗಣ್ಣಿಂದ ಕಣ್ಣೀರು ಸುರಿಸುತ್ತಿದ್ದ ಅಣ್ಣಪ್ಪ ಈಗ ಸಂತೋಷದಿಂದ ಕುಣಿದಾಡಿತು. ಜೋಗಿಪುರುಷದೈವದ ಇರವೇ ಗಟ್ಟಿಯಾಗಿ ವೈದಳೆದ ಆ ಕೋಡುಗಲ್ಲಿಗೆ ಕೈ ಮುಗಿದು ಪೊಡಮಟ್ಟು, ಅದರ ಸುತ್ತ ಮೂರು ಸಲ ಬಲವಂದು ಸುತ್ತಿ, ಎದುರಿಗೆ ಬಂದು ನಿಂತಾಗ, ಕೋಡುಗಲ್ಲು ಗುಡ್ಡದ ತುದಿಯಿಂದ ಕದಲಿತು.

ಅಣ್ಣಪ್ಪ ತಲೆಬಾಗಿಸಿ ನಿಲ್ಲಲು ಅದು ಅಣ್ಣಪ್ಪವಿನ ಕಡೆಗೆ ಸರಿದು ಬಂದು, ಅದರ ಮಂಡೆಯ ಮೇಲೆ ಮೂಡಿಕೊಂಡಿತು.

ಆಗ ಅಣ್ಣಪ್ಪನಿನ ಮೈಯಿಲ್ಲದ ಮೈಯಲ್ಲಿ ಅರಿವನ್ನೂ ಮೀರಿದ ಅರಿ ವೊಂದು ತೋರಿಕೊಂಡಿತು. ಜೋಗಿಪುರುಷದೈವವು ಜೋಗವನ್ನೂ ಮಾಯ ವನ್ನೂ ಕಳೆದು ಕೋಡುಗಲ್ಲಾಗಿ ಉಳಿದುಕೊಂಡಿದ್ದರೂ ಅದರ ಬಲ ಎಷ್ಟೆಂದು ಅಣ್ಣಪ್ಪನಿಗೆ ಅಚ್ಚರಿಯಾಯಿತು ; ಅಚ್ಚರಿಯಿಂದ ಮೈಮರೆ ಯಿತು. ಮೈಮರೆತಾಗ ಅಣ್ಣಪ್ಪನಿಗೆ ತನ್ನ ಜೋಗ—ಮಾಯಗಳೆರಡನ್ನೂ ಕೂಡಿಸುವ ಕೊಂಡಿಯಾಗಿ ಈ ಕೋಡುಗಲ್ಲು ಜೋಗಿಪುರುಷದೈವದ ಕಾರಣಿ ಕವೇ ಎಂದು ಅರಿವಿಗೆ ಬಂತು. ಕುಡುಮದ ಕಾಡಿನಲ್ಲಿ ಕಾರಣಿಕವುಳ್ಳ ಈ ಕೋಡುಗಲ್ಲು ನೆಲೆಗೊಂಡರೆ, ಬೀಡು ನೆಮ್ಮದಿಯಿಂದ ನಿಂತೀತು ; ಬೀಡಿನ ಒಡೆತನ ಮಾಡುವ ಪೆರ್ಗಡೆಗೆ ನೀತಿಯ ನೆಲಗಟ್ಟು ಗಟ್ಟಿಯಾದೀತು ; ಪೆರ್ಗಡೆಯ ನೆರವಿಗೆಂದು ನಿಂತಿರುವ ದೈವಗಳ ಕೈಬಲ ಇನ್ನಷ್ಟು ಬಲ ಗೊಂಡೀತು ; ದೈವಗಳ ಬಂಟನಾಗಿ ಬಂದಿರುವ ತನಗೆ ಈ ಕಾರಣಿಕದ ಕೋಡು ಗಲ್ಲನ್ನು ಮುಡಿಯ ಮೇಲೇರಿಸಿಕೊಂಡು ಕೊಂಡುಹೋಗುವ ಕಾಯಕ ಸಂದೀತು.

ಹೀಗಂದುಕೊಂಡು ಅಣ್ಣಪ್ಪ ಕಾರಣಿಕದ ಕೋಡುಗಲ್ಲನ್ನು ತಲೆಯ ಮೇಲೆ ಹೊತ್ತು, ಕುಡುಮದ ಕಡೆ ಮೈಮರೆತು ಕುಣಿಯುತ್ತ ಅಡಿ ಯಿಟ್ಟಿತು.

ಕೆಲವು ಮಾತುಗಳಿಗೆ ಅರ್ಥ

ಇಲ್ಲಿ ಬಳಸಿರುವ ಮಾತುಗಳಲ್ಲಿ ಕೆಲವು ವಿಶೇಷವಾಗಿ ತುಳುನಾಡಿನ ಕಡೆ ಬಳಕೆಯಲ್ಲಿರುವಂಥವು. ಕನ್ನಡಪದಗಳೇ ಆದರೂ ಉಳಿದೆಡೆ ಅವುಗಳ ಬಳಕೆ ಅಷ್ಟಾಗಿ ಇಲ್ಲದಿರುವುದರಿಂದ ಅವಕ್ಕೆ ಅರ್ಥಗಳನ್ನು ಇಲ್ಲಿ ಸೂಚಿಸಿದೆ.

ಅಣಿ—ಅಲಂಕಾರ ; ಮುಖ್ಯವಾಗಿ ತಲೆಗೆ ಸೇರಿಸಿಕೊಳ್ಳುವ ಪ್ರಭಾವಳಿಯಂಥ ತೊಡುಗೆ

ಆರಾಟ—ಸ್ನಾನ, ಅವಭೃತಸ್ನಾನ

ಆಲೆಡೆ—ನಾಗ ಮತ್ತು ಭೂತಗಳು ವಾಸಮಾಡುವ ಸ್ಥಳ

ಆವು—ಹಸು

ಆಸರು—ಬಾಯಾರಿಕೆ

ಈರಣದೋಲು—ಮೇಲಿನ ಸ್ವರವನ್ನೆಬ್ಬಿಸುವ ಒಂದು ವಾದ್ಯ

ಕಡಸಲೆ—ಆಯುಧ ವಿಶೇಷ ; ಕಡಿತಲೆ ; ಚರ್ಮದ ಗುರಾಣಿ

ಕದಲಿ—ಮಂಗಳೂರಿನ ಕದರಿಗುಡ್ಡ

ಕಲ್ಲೇರಿ—ಒಂದು ಊರು ; ಆ ಊರಲ್ಲಿ ನೆಲಸಿದ ದೈವ ಕಲ್ಲೇರಿತ್ತಾಯ ಅಣ್ಣಪ್ಪನಿಗೆ ಬಲಗೈ ಬಂಟನೆಂದು ನಂಬಿಕೆ

ಕಳ್ಳು—ಹೆಂಡ

ಕಿಸುಗಾರ—ಒಂದು ಜಾತಿಯ ಕೆಂಪು ಹೂ, *Ixora coccinea* ; ಕೇಪುಳ

ಕುಕ್ಕೇದೇವರು—ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪೂಜೆಗೊಳ್ಳುವ ಸರ್ಪಾಕೃತಿಯ ಕುಮಾರಸ್ವಾಮಿ. 'ಅತ್ತಾವರ ದೈವಂಗುಳೆ ಪಾಡ್ದನ'ದಲ್ಲಿ ಕುಕ್ಕೆ ಸುಬ್ರಾಯ ದೇವರ ಪ್ರಸ್ತಾಪ ಬರುತ್ತದೆ. ಗಟ್ಟವಿಳಿದು ಬಂದ ಪಂಜುರ್ಲಿಭೂತ ಧರ್ಮಸ್ಥಳಕ್ಕೆ ಬರುವ ಮೊದಲು ಸುಬ್ರಹ್ಮಣ್ಯದಲ್ಲಿ ನೆಲೆಗೊಂಡಿತ್ತೆಂದು ಪಾಡ್ದನವೊಂದು ಹೇಳುತ್ತದೆ

ಕೇಪುಳ—ಒಂದು ಜಾತಿಯ ಕೆಂಪು ಹೂ, ಕಿಸುಗಾರ

ಕೊಡಕಟ್ಟಿಬಿಡು—ಮೀಸಲಾಗಿರಿಸು

ಕೊಪ್ಪ—ಮನೆ, ಗುಡಿಸಲು

ಕೊರಗರು—ದಕ್ಷಿಣ ಕನ್ನಡ ಜಿಲ್ಲೆಯ ಒಂದು ಆದಿವಾಸಿ ಪಂಗಡ ; ತೀರ ಹಿಂದುಳಿದ ಜನ, ಆದರೆ ಅಷ್ಟೂ ಅಮಾಯಕರು, ಸಾಧು

ಕೋಲ—ಭೂತಕುಣಿತ ; ಭೂತಗಳಿಗೆ ಸಲ್ಲುವ ಒಂದು ಪೂಜಾ ವಿಶೇಷ

ಗಗ್ಗರ—ಕಾಲಿಗೆ ತೊಡುವ ಗೆಜ್ಜೆ ; ಭೂತದ ವೇಷದಲ್ಲಿ ಮುಖ್ಯವಾದುದು ; ಇದನ್ನು ತೊಟ್ಟರೆ ಆವೇಶ ಬರುವುದೆಂದು ನಂಬಿಕೆ

ಗುರಿಕಾರ—ಜನರ ಗುಂಪಿಗೆ ಒಡೆಯ

ಗುಳಿಗ—ತಾಮಸಗುಣವೇ ಹೆಚ್ಚಾಗಿರುವ ಒಂದು ಭೂತ

ಗೋಳಿ—ಒಂದು ಮರ (ಆಲದ ಮರದ ಜಾತಿಯದು) *Ficus elastica*

ಜೋಗ—ಮನುಷ್ಯರೂಪ ; ಕಣ್ಣಿಗೆ ಕಾಣುವಂಥ ಮೈಯಿರುವುದು ; 'ಜೋಗ ಕಳೆದು ಮಾಯ'ವಾಗುವುದೆಂದರೆ ಕಣ್ಣಿಗೆ ಕಾಣುವ, ಗುರುತಿಸುವ ಆಕಾರವಿಲ್ಲದೆ ಹೋಗುವುದು, ಮೈ ಮರೆಸಿಕೊಳ್ಳುವುದು

ತಿಂಗಳು—ಚಂದ್ರ

ತೆಂಬರೆ—ಸಣ್ಣ ಡೋಲು ; ಪಾಡ್ದನಗಳನ್ನು ಹಾಡುವಾಗ ಒಂದು ಕಡೆ ಕೈಯಿಂದ ಇನ್ನೊಂದು ಕಡೆ ಕಡ್ಡಿಯಿಂದ ಬಾಜಿಸುತ್ತಾರೆ; ಸ್ವರಗಳ ವಿಚಿತ್ರವಾದ ಏರಿಳಿತ ಇದರಲ್ಲಿ ಮುಖ್ಯವಾದುದು

ದುಡಿ—ಬಡಿಯುವ ಒಂದು ವಾದ್ಯ

ದೂಪೆ—ಹೆಣವನ್ನು ಒಪ್ಪಮಾಡುವ ಮಣ್ಣುಗುಡ್ಡೆ

ನಡಾವಳಿ—ಹನ್ನೆರಡು ವರ್ಷಕ್ಕೊಮ್ಮೆ ಭೂತಗಳಿಗೆ ನಡೆಯುವ ಕಟ್ಟಳೆ

ನೆರೆ—ಪ್ರವಾಹ

ನೇಮ—ಭೂತಗಳ ಆರಾಧನೆಯ ಒಂದು ಬಗೆ ; ಅಯನವೆಂದೂ ಕರೆಯುತ್ತಾರೆ

ನೋರೆಕತ್ತಿ—ಆಯುಧ ವಿಶೇಷ

ಪಂಜುರ್ಲಿ—ಹಂದಿಮೊಗದ ಒಂದು ಭೂತ ; ತುಂಬ ಕಾರಣಿಕವುಳ್ಳದ್ದೆಂದು ಪ್ರಸಿದ್ಧಿ

ಪಿಂಗಾರ—ಅಡಕೆ ಮರದ ಹೂ, ಮಾದಕವಾದ ವಾಸನೆಯಿರುತ್ತದೆ ; ಭೂತದ ಆವೇಶಕ್ಕೆ ಅನುಕೂಲವಾದುದು ; ಹಿಂಗಾರವೆಂದೂ ಹೆಸರು

ಪೆರ್ಗಡೆ—ಹೆಗ್ಗಡೆಯೆನ್ನಲು ಪಾಡ್ದನಗಳಲ್ಲಿ ಬರುವ ತುಳು ಮಾತು

ಪೊಲಿ—ಪೂಜೆಯ ಒಂದು ಬಗೆ; ದೀಪಾವಳಿಯಂದು ಬಲೀಂದ್ರನಿಗೆ ನಡೆಯುವಂಥದು

ಬದಿ—ನಿವಾಸ, ಎಡೆ

ಬಳಿ—ವಂಶ

ಬೀಡು—ಜನವಸತಿ, ಊರು

ಬೆಳ್ಳಿ—ಸೂರ್ಯೋದಯವಾಗುವ ಮೊದಲು ಮೂಡಲ ದಿಕ್ಕಿನಲ್ಲಿ ತೋರಿ ಕೊಳ್ಳುವ ಬೆಳಕು

ಬೈರೂಪ—ಹೊರಗಣ ಆಕಾರ ; ಬಹಿರೂಪ

ಭೂತಗಳು—ಸತ್ತ ಹಿರಿಯರು, ವೀರರು ಮಾಯಕವಾಗಿ ಇದ್ದವರನ್ನು ಕಾಡಲು, ಕಾಪಾಡಲು ಉಳಿದುಕೊಳ್ಳುವ ಬಗೆ; ಕೆಲವು ಭೂತಗಳು ಕಾಲ್ಪನಿಕವೇ. ಇವಕ್ಕೆ ಬಗೆಬಗೆಯ ರೂಪಗಳು, ಕುದುರೆ ಮುಖದ ಜಾರಂದಾಯ, ಎಮ್ಮೆ ಮೋರೆಯ ಮಹಿಸಂದಾಯ, ಹಂದಿ ಮೊಗದ ಪಂಜುರ್ಲಿ, ಮನುಷ್ಯ ರೂಪದ ಜೋಗಿಪುರುಷ, ಕಲ್ಲುರ್ಟಿ ಇತ್ಯಾದಿ

ಮಾಗಣೆ—ಪ್ರದೇಶದ ಒಂದು ಭಾಗ ; ಆಡಳಿತ ವ್ಯವಸ್ಥೆಯ ಅಂಗ

ಮಾನಿ—ಭೂತದ ಆವೇಶ

ಮುಟ್ಟಾಳೆ—ಅಡಕೆ ಹಾಳೆಯ ಟೊಪ್ಪಿಗೆ

ಸಿದ್ಧಶಿಲೆ—ಜೈನಸಿದ್ಧಾಂತದಲ್ಲಿ ಮುಕ್ತಾತ್ಮರು ಸರ್ವಕರ್ಮ ಬಂಧನವನ್ನೂ ಕಳಚಿ, ತಮ್ಮ ಅನಂತ ಚತುಷ್ಟಯದಿಂದ ಮೇಲೇರಿ ಲೋಕಾಗ್ರಭಾಗ ದಲ್ಲಿ ವಿಹರಿಸುವ ಸ್ಥಳ ; ಅಲ್ಲಿಂದ ಮತ್ತೆ ಭವಕ್ಕೆ ಹಿಂದಿರುಗುವಂತಿಲ್ಲ.

ಸಿರಿ—ಎಳೆ ತೆಂಗಿನ ಗರಿ

ಸುರುಗಿ—ಕತ್ತಿ

ಹದಿನಾಲ್ಕು ಕಟ್ಟು—ಭೂತಾಳ ಪಾಂಡ್ಯನು ಬ್ರಾಹ್ಮಣರ ಹೊರತು ತ್ರಿವರ್ಣ ಜಾತಿಗಳಿಗೆ ಮಾಡಿದ ಕಟ್ಟುಗಳು—ಜಾತಿ, ನೀತಿ, ಮಾನ, ಮರ್ಯಾದಿ, ಹುಟ್ಟು, ಕಟ್ಟು, ಹಿಂದೆ, ಮುಂದೆ, ಹೆಚ್ಚು, ಕಮ್ಮಿ, ಬಳಿ, ಬಣ್ಣ, ಅಳಿ, ಉಳಿ ಇವು ಹದಿನಾಲ್ಕು ವಿವರಗಳು

ಹನಗರಿಯ ಕೊಡೆ—ಓಲೆಗರಿಯಿಂದ ಮಾಡಿದ ಛತ್ರಿ

ಅನುಬಂಧ

ಹಿನ್ನೆಲೆಯನ್ನು ಕುರಿತು

ಅಣ್ಣಪ್ಪ ದೈವಕ್ಕೂ ಧರ್ಮಸ್ಥಳಕ್ಕೂ ನಿಕಟವಾದ ನೆಂಟು. ಧರ್ಮಸ್ಥಳವನ್ನು ಕುರಿತು ಗಟ್ಟಿಯಾದ ವಿವರಗಳು ಇಷ್ಟು. ಊರಿಗೆ ಮೊದಲ ಹೆಸರು ಕುಡುಮವೆಂದು. ಊರು ದಾನಧರ್ಮಗಳಿಗೆ ಹೆಸರಾದ ಮೇಲೆ ಧರ್ಮಸ್ಥಳವೆಂದಾಯಿತು. ಊರ ದೇವರು ಮಂಜುನಾಥ ; ಇದು ಶಿವಲಿಂಗ. ಶಿವಾಲಯವಾದರೂ ಅಲ್ಲಿನ ಅರ್ಚಕರು ಮಾಧ್ವ ಸಂಪ್ರದಾಯದ ವೈಷ್ಣವರು. ಊರಿನ ಒಡೆಯರೂ ಗುಡಿಗೆ ಹಿರಿಯರೂ ಆದ ಹೆಗ್ಗಡೆಯೆಂಬ ಅಳಿಯಸಂತಾನ ಕಟ್ಟಿನ ಮನೆತನದವರು ದಿಗಂಬರ ಜೈನ ಸಂಪ್ರದಾಯಕ್ಕೆ ಒಲಿದವರು. ಇವರ ಮನೆದೇವರು ಇಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಎಂಟನೆಯವನಾದ ಚಂದ್ರನಾಥ. ಈ ತೀರ್ಥಂಕರನಿಗಾಗಿ ಬಸದಿಯೂ ಒಂದಿದೆ. ಈ ಜಿಲ್ಲೆಯಲ್ಲಿ ಎಲ್ಲೆಲ್ಲೂ ಇರುವಂತೆ ಇಲ್ಲಿಯೂ ಭೂತಾರಾಧನೆಯದೇ ಮೇಲುಗೈ. ಗ್ರಾಮದ ಕಾರಣಿಕ ಭೂತ ಅಣ್ಣಪ್ಪಸ್ವಾಮಿ ; ಊರ ನಡುವಣ ಬೆಟ್ಟದ ಮೇಲೆ ಇದರ ತಾಣ. ಹೆಗ್ಗಡೆಗೂ ಅಣ್ಣಪ್ಪ ಭೂತಕ್ಕೂ ಹಿಂದಿನಿಂದಲೂ ನೆಂಟು. ಮಂಜುನಾಥನ ಪೂಜೆ ವೇದೋಕ್ತ ಕ್ರಮದಲ್ಲಿ ನಡೆಯುತ್ತದೆ ; ಧರ್ಮದೇವತೆಗಳೆಂಬ ದೈವಗಳಿಗೂ ಅಣ್ಣಪ್ಪ ಭೂತಕ್ಕೂ ತುಳುನಾಡಿನ ಭೂತಾರಾಧನೆಯ ಬಗೆಯಲ್ಲೇ ಪೂಜೆ ಸಲ್ಲುತ್ತದೆ ; ಚಂದ್ರನಾಥ ಬಸದಿಯಲ್ಲಿ ಜೈನಾಗಮವನ್ನು ಅನುಸರಿಸಿ ಆರಾಧನೆ. ವೈವಿಧ್ಯವಿದ್ದರೂ ವಿರಸವಿಲ್ಲ ; ದೇವಸ್ಥಾನ, ದೈವಸ್ಥಾನ, ಜಿನಸ್ಥಾನಗಳಿಗೆ ಸಮಾನವಾದ ಆದರ.

ಈ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತೀತಿಗಳೂ ಕೆಲವಿವೆ. ಪಯಣಿಗರಾಗಿ ಈ ಹಾದಿ ಹಿಡಿದ ನಾಲ್ವರು ಧರ್ಮದೇವತೆಗಳು (ಕನ್ಯಾಕುಮಾರಿ, ಕಾಳರ್ಕಾಯಿ, ಕಾಳರಾಹು, ಕುಮಾರಸ್ವಾಮಿ) ಆಗಿನ ಹೆಗ್ಗಡೆ ಬರ್ಮಣ್ಣ ಮತ್ತು ಅವನ ಹೆಂಡತಿ ಅಮ್ಮು ಬಲ್ಲಾಳತಿ ಇವರ ಆದರಾತಿಥ್ಯವನ್ನು ಮೆಚ್ಚಿಕೊಂಡು ಅವರ

ಸಹಾಯಕ್ಕೆಂದು ಇಲ್ಲಿಯೇ (ನೆಲ್ಯಾಡಿಬೀಡಿನಲ್ಲಿ) ನೆಲೆಯಾದರೆಂದು ಒಂದು. ಈ ಧರ್ಮದೇವತೆಗಳ ದೂತನೆಂದಾದ ಅಣ್ಣಪ್ಪಭೂತ ಗಟ್ಟವನ್ನಿಳಿದು ಬಂದಾಗ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮೊದಲು ನಿಂತನೆಂದೂ, ಆಮೇಲೆ ಕುಡುಮಕ್ಕೆ ಬಂದು ನಿಂತನೆಂದೂ, ಇನ್ನೊಂದು. ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದೆಮಠದ ವಾದಿರಾಜಸ್ವಾಮಿಗಳ ಆಣತಿಯಂತೆ ಅಣ್ಣಪ್ಪನು ಮಂಜುನಾಥ ನೆಂಬ ಹೆಸರಿನ ಶಿವಲಿಂಗವನ್ನು ಮಂಗಳೂರಿನ ಕದರಿಯಿಂದ ಇಲ್ಲಿಗೆ ತಂದನೆಂದು ಮತ್ತೊಂದು. ಮಂಜುನಾಥ ದೇವರನ್ನು ಇಲ್ಲಿಗೆ ಕರೆತರಲು ಕಾರಣ ಧರ್ಮ ದೇವತೆಗಳೇ ಎಂದೂ, ಮೊದಲೇ ಭೂತ ತಂದು ಇರಿಸಿದ್ದ ಶಿವಲಿಂಗವನ್ನು ವಾದಿರಾಜಸ್ವಾಮಿಗಳು ವಿಧಿವತ್ತಾಗಿ ಪ್ರತಿಷ್ಠೆ ಮಾಡಿದರೆಂದೂ ಇನ್ನೊಂದು ಒಕ್ಕಣೆ.

ಈ ವಿವರಗಳನ್ನೂ ಪ್ರತೀತಿಗಳನ್ನೂ ಗಮನಿಸುವಾಗ ಕೆಲವು ತೊಡಕು ಗಳು ತೋರಿಕೊಳ್ಳುವುದು ಸಹಜವೇ. ಊರ ದೇವರಿಗೆ ಮಂಜುನಾಥನೆಂದೇನು ಹೆಸರು ? ಶಿವನಿಗೆ ಈ ಹೆಸರಿರುವುದು ಬೇರೆಲ್ಲಿಯೂ ಕಾಣೆವಲ್ಲ ! ಆ ಕದರಿಗೂ ಈ ಕುಡುಮಕ್ಕೂ ಏನು ನಂಟು ? ಅಲ್ಲಿನ ಮಂಜುನಾಥ ಇಲ್ಲಿ ಬರಲೇಕೆ ? ಮೇಲಾಗಿ, ಕದರಿಯಲ್ಲಿರುವುದು ಬೌದ್ಧವಿಹಾರ ; ಅಲ್ಲಿ ಶಿವಲಿಂಗವಿರುವುದೇನು ? ತುಳುನಾಡಿನಲ್ಲಿ ಜೈನಧರ್ಮ ಹರಡಿಕೊಂಡಿರುವುದೇನೋ ಉಂಟು. ಆದರೆ ಜೈನಧರ್ಮ ಶೈವಧರ್ಮದೊಂದಿಗೆ ಬೆರೆತುಕೊಂಡುದು ಹೇಗೆ ? ಯಾವಾಗ ? ತೀರ್ಥಂಕರರಲ್ಲಿ ಚಂದ್ರನಾಥನೇ ಇಲ್ಲಿ ಪೂಜೆಗೊಳ್ಳುವುದರಲ್ಲಿ ಸ್ವಾರಸ್ಯವೇನು ? ಇನ್ನು, ಅಣ್ಣಪ್ಪಭೂತದ ಹಿನ್ನೆಲೆ ಏನಿದ್ದೀತು ? ಧರ್ಮದೇವತೆಗಳೆಂಬುವರು ಯಾರು ? ದೈವಗಳೇ ಆದರೆ ಬೇರೆಲ್ಲೂ ಇರದ ಧರ್ಮದೇವತೆಗಳೆಂಬ ಹೆಸರೇಕೆ ? ಇತ್ಯಾದಿ, ಇತ್ಯಾದಿ.

ಈ ತೊಡಕುಗಳಲ್ಲಿ ಕೆಲವನ್ನಾದರೂ ಬಿಡಿಸಲು ತೊಡಗಿದವರುಂಟು. ಆದರೆ ಕೊನೆಯ ಮಾತೆಂದು ಯಾರದೂ ಮೂಡಿಬಂದಿಲ್ಲ. ತೊಡಕಿನ ಎಳೆ ಗಳನ್ನೆಲ್ಲ ಬಿಡಿಬಿಡಿಯಾಗಿ ಬೇರ್ಪಡಿಸಿದರೆ ತಾನೆ ತೊಡಕು ಬಗೆ ಹರಿದೀತು ? ಹೀಗೆ ಈ ಸಮಸ್ಯೆಯನ್ನು ತಲೆಗೆ ಹಚ್ಚಿಕೊಂಡು ಹೆಣಗಾಡಿದವರು ಕೆಲವರೇ. ಅವರಲ್ಲಿ ಮಂಜೇಶ್ವರದ ಗೋವಿಂದ ಪೈಯವರು ಪ್ರಮುಖರು. ಅವರು ಕೆಲವು

ಎಳೆಗಳನ್ನು ಬಿಡಿಸಿದ್ದಾರೆ[1]. ಕದರಿ(ಕದಿರೆ)ಗೂ ಧರ್ಮಸ್ಥಳಕ್ಕೂ ಸಂಬಂಧವನ್ನು ಹೇಳಹೊರಟು, ಮಂಜುನಾಥನ ಮೂಲಸ್ಥಾನವಾದ ಕದರಿಕಾ ವಿಹಾರ ಮೊದಲಿಗೆ ವಜ್ರಯಾನ ಸಂಪ್ರದಾಯದ ಬೌದ್ಧರದೆಂದೂ, ನಾಥ-ಶೈವಪಂಥದ ಮತ್ಸ್ಯೇಂದ್ರನಾಥನೇ ಅಲ್ಲಿರುವ ಲೋಕೇಶ್ವರನೆಂದೂ ಕೆಲವೊಂದು ಆಧಾರಗಳಿಂದ ನಿರ್ಧರಿಸಿದ್ದಾರೆ. ಈ ಬೌದ್ಧಧರ್ಮದ ಮಂಜುಶ್ರೀ ಬೋಧಿಸತ್ವನಿಂದಲೇ ಮಂಜುನಾಥನೆಂಬ ಹೆಸರು ಅಲ್ಲಿನ ಶಿವಲಿಂಗಕ್ಕೆ ಬಂತೆಂದೂ ಸೂಚಿಸಿದ್ದಾರೆ. ಅವರ ವಾದದಲ್ಲಿ ಹುರುಳಿಲ್ಲದೆ ಇಲ್ಲ.

ಆದರೆ ಅವರು ಈ ಸಮಸ್ಯೆಯನ್ನು ಸಾಕಷ್ಟು ಆಳವಾಗಿ ಹೋಗಿ ಕೆದಕಲಿಲ್ಲ. ಬಹುಮಟ್ಟಿಗೆ ತಮ್ಮ ಪ್ರತಿಭೆಯಿಂದ ಪರಿಹಾರವನ್ನು ಸೂಚಿಸಿದರು ; ಅದು ಸಮರ್ಪಕವಾಗಿಯೇ ಇದೆ. ಆದರೆ ಇತಿಹಾಸದ ಕೆಲವು ವಿವರಗಳನ್ನು ಕಾಣಿಸಿದರೆ ಪರಿಹಾರದ ದಾರಿ ಇನ್ನಷ್ಟು ಸ್ಪಷ್ಟವಾದೀತು. ಅಲ್ಲದೆ, ಜೈನ ಧರ್ಮದ ಚಂದ್ರನಾಥ ತೀರ್ಥಂಕರನು ನಾಥ ಶೈವಪಂಥದ, ಬೌದ್ಧ ಪ್ರಭಾವದ ಮಂಜುನಾಥನೊಟ್ಟಿಗೆ ಇರುವುದು ಹೇಗೆಂದು ಅವರು ಹುಡುಕುತ್ತ ಹೊರಡಲಿಲ್ಲ. ಭೂತಾರಾಧನೆಯ ಚೌಕಟ್ಟು ಇವೆಲ್ಲವನ್ನೂ ಕೂಡಿಸಿಕೊಂಡುದು ಹೇಗೆಂದಾಗಲೀ ಅವರು ಕುತೂಹಲಪಡಲಿಲ್ಲ. ಈಗ ತೊಡಕಿನ ಕೆಲವು ಎಳೆಗಳನ್ನು ಕಾಣುವುದಾದರೆ, ಅವರು ಹಿಡಿದ ಜಾಡು ಸರಿಯೆಂದು ತೋರದೆ ಇರದು.

ತುಳುನಾಡಿನಲ್ಲಿ ಬೌದ್ಧ, ಜೈನ ಧರ್ಮಗಳೆರಡೂ ಹೊರಗಿನಿಂದ ಬಂದವು. ಎಲ್ಲಿಂದ ಬಂದುವು, ಯಾವಾಗ ಬಂದುವು, ಹೇಗೆ ಬಂದುವು, ಎನ್ನುವ ಸಮಸ್ಯೆಗಳಿಗೆ ಸರಿಯಾದ ಪರಿಹಾರ ದೊರೆತಿಲ್ಲ. ಶ್ರವಣಬೆಳಗೊಳದಿಂದ ಜೈನಧರ್ಮ ಕ್ರಿಸ್ತಾಬ್ದ ನಾಲ್ಕು-ಐದನೆಯ ಶತಮಾನಗಳಲ್ಲಿ ಇಲ್ಲಿಗೆ ಬಂದಿರಬಹುದಾದರೂ ಅದು ಹರಡಿಕೊಂಡುದು, ಪ್ರಭಾವಶಾಲಿಯಾದುದು ಹತ್ತನೆಯ ಶತಮಾನದ ಸುಮಾರಿಗೇ. ಹೊಂಬುಚ್ಚದ ಸಾಂತಾರರು ಈ ಧರ್ಮವನ್ನು ಕೈಹಿಡಿದು ನಿಲ್ಲಿಸಿದವರು. ಕಾರ್ಕಳದ ಅರಸನೊಬ್ಬ ಚಾರುಕೀರ್ತಿಪಂಡಿತದೇವರ ಗುಡ್ಡನೆನಿಸಿಕೊಂಡು 'ಮಹಾಮಂಡಲೇಶ್ವರ ಲೋಕನಾಥದೇವರಸ'ನೆಂದು ತನ್ನನ್ನು ಕರೆದುಕೊಂಡುದು ಕಾರ್ಕಳದ ಹಿರಿಯಂಗಡಿ ಶಾಸನವೊಂದರಲ್ಲಿ ಕಾಣುತ್ತದೆ ; ಇದು

ಕ್ರಿಸ್ತಾಬ್ದ 1334 ರ ಮಾತು. ಮುಂದೆ ಜೈನಧರ್ಮ ಈ ಕಡೆ ಬೇರೂರಿ ಕೊಂಡು ಬೆಳೆದದ್ದು ಕಾರ್ಕಳ, ಕಾರ್ಕಳ ತಾಲ್ಲೂಕಿನ ವರಾಂಗ, ಮೂಡು ಬಿದರೆ, ಕೆರವಶಿ, ಏಣೂರು, ಬಾರಕೂರು, ಹಟ್ಟಿಯಂಗಡಿ ಈ ಸ್ಥಳಗಳಲ್ಲಿ. ಧರ್ಮಸ್ಥಳವೇನು ಎಂದಾದರೂ ಜೈನಧರ್ಮದ ಕೇಂದ್ರವಾಗಿದ್ದಂತೆ ಉಲ್ಲೇಖ ವಿಲ್ಲ.

ಜೈನಧರ್ಮ ಹರಡಿಕೊಂಡುದನ್ನು ಹೇಳುವಾಗ ತೀರ್ಥಂಕರರಿಗೆಂದು ಕಟ್ಟಿಸಿದ ಬಸದಿಗಳು ಕಣ್ಣ ಮುಂದೆ ಎದ್ದು ನಿಲ್ಲುವುದು ಸಹಜವೇ. ಇಪ್ಪತ್ತು ನಾಲ್ಕು ತೀರ್ಥಂಕರರಲ್ಲಿ ಬೇರೆಡೆ ಸಾಮಾನ್ಯವಾಗಿ ಬಸದಿಗಳಿರುವುದು ಮೊದ ಲನೆಯ ತೀರ್ಥಂಕರ ಆದಿನಾಥನಿಗೆ, ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥ ನಿಗೆ, ಇಪ್ಪತ್ತುಮೂರನೆಯ ತೀರ್ಥಂಕರ ಪಾರ್ಶ್ವನಿಗೆ, ಕಡೆಯ ತೀರ್ಥಂಕರ ಮಹಾವೀರನಿಗೆ. ಆದರೆ ತುಳುನಾಡಿನಲ್ಲಿ ಎಂಟನೆಯ ತೀರ್ಥಂಕರನಾದ ಚಂದ್ರ ನಾಥನಿಗೆ ಬಸದಿಗಳಿರುವುದು ಹೆಚ್ಚು. ಅಜಕಾರು, ಮೂಡುಬಿದರೆ (ಚೂಡಾ ಮಣಿ ಚೈತ್ಯ, ಲೆಪ್ಪದ ಬಸದಿ, ಬಡಗ ಬಸದಿ, ಅಕ್ಕಂಗಳ ಬಸದಿ), ಬೆಳ್ತಂಗಡಿ (ಬಂಗರ ಬಸದಿ), ವರಾಂಗ, ನಂದಿಕೂರು, ಕೆರವಶಿ, ಮುಳಿವಾರು, ನಾರಾವಿ (ಮೇಗಿನನೆಲೆ ಬಸದಿ), ಮಾಳ (ಎಡಬಲ ಬಸದಿ), ಹೊಂಬುಚ್ಚ (ಭೋಗಿ ಬಸದಿ, ಪಂಚಬಸದಿ), ಕಾರ್ಕಳ-ಹಿರಿಯಂಗಡಿ (ಬಲದ ಬಸದಿ, ಗುರುಗಳ ಬಸದಿ, ಶ್ರವಣಬಸದಿ, ಮಠದಬಸದಿ), ಬಯಲಪಾಡಿ, ರೆಂಜಾಳ, ಮರ್ದಾಳ, ನೆರಂಕಿ, ಕಾಡುಬೆಟ್ಟು, ಮೂಲ್ಕಿ (ಬಯಲಂಗಡಿ ಬಸದಿ, ಅರಮನೆಬಸದಿ), ಪಣಂತಬೈಲು, ಬಯಲುಬಳ್ಳ, ಮಧುರಪಟ್ಣ, ಇರುವತ್ತೂರು (ಬಡಗ ಬಸದಿ), ಮಂಜೇಶ್ವರ (ಚತುರ್ಮುಖ ಬಸದಿಯಲ್ಲಿ) ಇಲ್ಲೆಲ್ಲ ಚಂದ್ರನಾಥನ ಬಸದಿಗಳೇ. ಧರ್ಮಸ್ಥಳದಲ್ಲೂ ಚಂದ್ರನಾಥ ಬಸದಿಯೇ ಇರುವುದು. ಉಡುಪಿಯ ಚಂದ್ರೇಶ್ವರ ದೇವಸ್ಥಾನವೂ ಮೊದಲಿಗೆ ಚಂದ್ರನಾಥ ಬಸದಿಯೇ ಆಗಿದ್ದಿತು. [2]

ಚಂದ್ರನಾಥ ತೀರ್ಥಂಕರನು ಹುಟ್ಟಿದ್ದು ಚಂದ್ರಗಿರಿಯಲ್ಲೆಂದು ಪ್ರತೀತಿ. ಚಂದ್ರಗಿರಿಯಲ್ಲೇ ಹುಟ್ಟಿದ ನಾಥಸಿದ್ಧನೊಬ್ಬನಿದ್ದಾನೆ—ಮತ್ಸ್ಯೇಂದ್ರನಾಥ. ಈ ನಾಥನಿಗೂ ತುಳುನಾಡಿಗೂ ನಿಕಟವಾದ ಸಂಬಂಧವಿದೆ. ನಾಥಸಿದ್ಧ ಸಂಪ್ರ

ದಾಯ ತುಳುನಾಡಿಗೆ ಬಂದದ್ದು ಯಾವಾಗ ? ಮಂಗಳೂರಿನ ಕದರಿಗುಡ್ಡದ ಮೇಲೆ ಈ ಸಂಪ್ರದಾಯದ ಮಠವೊಂದು ಇಂದಿಗೂ ಇದೆ ; ಪುತ್ತೂರು ತಾಲ್ಲೂಕಿನ ವಿಟ್ಲದಲ್ಲೂ ಇದೆ. ಕದರಿಯ ಮಂಜುನಾಥನ ಗುಡಿಯಲ್ಲಿ ಲೋಕೇಶ್ವರನೆಂಬ ದೇವರ ಲೋಹಬಿಂಬವಿದೆ. ಇದರ ಪಾದಪೀಠದಲ್ಲಿ ಬಿಂಬದ ಪ್ರತಿಷ್ಠೆಯಾದ ಒಕ್ಕಣೆಯನ್ನು ಸಂಸ್ಕೃತ ಶ್ಲೋಕದಲ್ಲಿ ಕಂಡರಿಸಿದ್ದಾರೆ. 'ಲೋಕೇಶ್ವರಸ್ಯ ದೇವಸ್ಯ ಪ್ರತಿಷ್ಠಾಮಕರೋತ್ಪ್ರಭುಃ । ಶ್ರೀಮತ್ ಕದರಿಕಾ ನಾಮ್ನಿವಿಹಾರೇ ಸುಮನೋಹರೇ' ಎಂಬ ಮಾತು ಅಲ್ಲಿ ಬರುತ್ತದೆ[3]. ಪ್ರತಿಷ್ಠೆ ಯಾದ ವರ್ಷ ಕ್ರಿಸ್ತಾಬ್ದ 968 ಎಂದು ಕೆಲವರ ಅಭಿಪ್ರಾಯ ; 1068 ಎಂದು ಗೋವಿಂದಪೈಯವರ ಎಣಿಕೆ[4]. ಲೋಕೇಶ್ವರನಲ್ಲದೆ ಮಂಜುಶ್ರೀ ಬೋಧಿಸತ್ತ್ವನ ಬಿಂಬವೂ ಅಲ್ಲಿದೆ, ಬುದ್ಧನ ಪುತ್ಥಳಿಯೂ ಇದೆ. ಬೌದ್ಧ ಸಂಪ್ರದಾಯದ ವಿಹಾರವೆನ್ನುವುದಕ್ಕೆ ಅಡ್ಡಿಯಿಲ್ಲ. ಆದರೆ ಅಲ್ಲಿಯೇ ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಶೃಂಗಿನಾಥ (ಚತುರಂಗಿನಾಥ) ಎಂಬ ನಾಥ ಸಿದ್ಧರ ಶಿಲಾಮೂರ್ತಿಗಳೂ ಇವೆ. ಮತ್ಸ್ಯೇಂದ್ರನಾಥನ ಶಿಲಾಮೂರ್ತಿಯೊಂದು ಮಂಗಳೂರು ಮ್ಯೂಸಿಯಂನಲ್ಲಿಯೂ ಇದೆ.

ಮತ್ಸ್ಯೇಂದ್ರನಾಥನಿಗೆ ಲೋಕೇಶ್ವರನೆಂಬ ಹೆಸರಿದ್ದುದಕ್ಕೂ ಉಲ್ಲೇಖ ವಿದೆ. ನೇಪಾಳೀ ಶಾಸನವೊಂದು 'ಮತ್ಸ್ಯೇಂದ್ರಂ ಯೋಗಿನಾಂ ಮುಖ್ಯಾಃ ಶಾಕ್ತಾಃ ಶಕ್ತಿಂ ವದಂತಿ ಯಂ । ಬೌದ್ಧಾ ಲೋಕೇಶ್ವರಂ ತಸ್ಮೈ ನಮೋ ಬ್ರಹ್ಮಸ್ವರೂಪಿಣೇ' ಎನ್ನುತ್ತದೆ[5]. ಬೌದ್ಧರು ಮತ್ಸ್ಯೇಂದ್ರನಾಥನನ್ನೇ ಅವ ಲೋಕಿತೇಶ್ವರ (ಅಥವಾ ಲೋಕೇಶ್ವರ)[6] ಎಂದು ಕರೆದು, ಮಳೆ ಬಾರದಿದ್ದಾಗ ಈ ದೈವವನ್ನು ಪೂಜೆ ಮಾಡುವ ಪದ್ಧತಿಯಿದ್ದಿತು. ಆ ದೈವದ ಕಾರಣಿಕದಿಂದ ಮಳೆಯಾಗುವುದೆಂದು ಜನ ನಂಬುತ್ತಿದ್ದರು.

ಮತ್ಸ್ಯೇಂದ್ರನಾಥನನ್ನು ಕಾಲಜ್ಞಾನ ನಿರ್ಣಯ 'ಮಚ್ಛಿಂದನಾಥ'ನೆಂದು ಕರೆದಿದೆ ; ಅಭಿನವಗುಪ್ತನ ತಂತ್ರಾಲೋಕ 'ಮಚ್ಛಂದ್ರ ಪ್ರಭು' ಎನ್ನುತ್ತದೆ; ಗೋರಕ್ಷನಾಥನು ದೋಹಗಳಲ್ಲಿ ತನ್ನನ್ನು 'ಭಣಂತ ಗೋರಖ ಮಚ್ಛಂದ್ರ ಕಾ ದಾಸಾ' ಎಂದು ಬಣ್ಣಿಸಿಕೊಂಡಿದ್ದಾನೆ, 'ಮಛೀಂದ್ರ' ಎಂದೂ ತನ್ನ ಗುರು ವನ್ನು ಕರೆದಿದ್ದಾನೆ[7]. ಇದನ್ನು ನೋಡುವಾಗ ಕದರಿಯ ಗುಡಿಯಲ್ಲಿರುವ

ಶಾಸನಗಳು (1386ರ ಸುಮಾರಿನವು)[8] 'ಮಂಜಿನಾಥ ದೇವರ'ನ್ನು ಉಲ್ಲೇಖಿಸಿರುವುದರ ಹಿನ್ನೆಲೆ ತಿಳಿಯುತ್ತದೆ. ಮಂಜುನಾಥ ಮೊದಲಿಗೆ ಮಂಜಿನಾಥನೇ ; ಮಂಜಿನಾಥ ಎನ್ನುವುದು ಮ-ಛೀಂದ್ರನಾಥ ಎನ್ನುವ ಪ್ರಾಕೃತಮಾತಿಗೆ ಕನ್ನಡ ರೂಪ.

ಎಂದರೆ, ಕದರಿಯಲ್ಲಿ ಮೂಲಸ್ಥಾನ ಮಂಜುನಾಥನದು. ತೀರ ಹಳಿಯದು ಎಂಬ ಶಾಸನದಲ್ಲಿ 'ಮಂಛಿನಾಥ' ದೇವರೆನ್ನುವ ಪಾಠವಿದೆ[9]. ಎಂದರೆ ಮತ್ಸ್ಯೇಂದ್ರನಾಥನ ಪ್ರಭಾವದಿಂದ ವೈದಳೆದದ್ದು ಎಂದರ್ಥವಾದೀತು. ಮತ್ಸ್ಯೇಂದ್ರನಾಥನ ಮೂರ್ತಿಗಳೇನೋ ಅಲ್ಲಿವೆ. ಈ ನಾಥಸಿದ್ಧನ ವಿಚಾರ ಯೋಗಿಸಂಪ್ರದಾಯಾವಿಷ್ಕೃತಿ, ಕಾಲಜ್ಞಾನನಿರ್ಣಯ, ಧರ್ಮಮಂಗಳ ಮೊದಲಾದ ಹಲವು ಆಕರ ಗ್ರಂಥಗಳಲ್ಲಿ ದೊರೆಯುತ್ತದೆ[10]. ಅವನು ಹುಟ್ಟಿದ್ದು ಚಂದ್ರಗಿರಿಯಲ್ಲೆಂದು ವಿವರ. ಗೋದಾವರಿ ತೀರದ ಚಂದ್ರಗಿರಿಯಲ್ಲೆಂದು ಒಂದು ವಿವರಣೆ. ಉತ್ತರ ಕರ್ನಾಟಕ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿರುವ ಚಂದ್ರಪುರಿ (ಚಂದಾವರ) ನಾಥಪಂಥದ ಕೇಂದ್ರವಾಗಿದ್ದಿತೆಂದು ಮರೆಯುವಂತಿಲ್ಲ. ಶಿವನೇ ಆದ ಆದಿನಾಥನು (ಮತ್ಸ್ಯೇಂದ್ರನಾಥನ ಗುರು) ನೆಲೆಗೊಂಡಿದ್ದ ಸ್ಥಳ ಅದು. ಹುಟ್ಟಿದೂರನ್ನು ಹಿಡಿದು ಅವನನ್ನೇ ಚಂದ್ರನಾಥನೆಂದಿರುವುದೂ ಉಂಟು. ಮುಂದೆ ಎಂದೋ ಜೈನ ತೀರ್ಥಂಕರರಲ್ಲಿ ಎಂಟನೆಯವನಾದ ಚಂದ್ರಪ್ರಭ ಅಥವಾ ಚಂದ್ರನಾಥನೊಂದಿಗೆ ಇವನನ್ನು ಸಮೀಕರಣ ಮಾಡಿದ್ದರೆ ಆಶ್ಚರ್ಯವೇನಿಲ್ಲ. ಹೀಗಾಗಿ ಮತ್ಸ್ಯೇಂದ್ರನಾಥನ ಪ್ರಭಾವ ತುಳುನಾಡಿನಲ್ಲಿ ವಿಶೇಷವಾಗಿದ್ದುದು ಚಂದ್ರನಾಥನ ಬಸದಿಗಳ ಹೆಚ್ಚಳಕ್ಕೆ ಕಾರಣವಾಗಿದ್ದೀತು.

ಮತ್ಸ್ಯೇಂದ್ರನಾಥನ (ಮಂಜಿನಾಥನ) ಪ್ರಭಾವ ಈ ನಾಡಿನಲ್ಲಿ ಬೇರೂರಿದ್ದುದೇನೋ ದಿಟ. ಮೇಲೆ ಕಾಣಿಸಿದ ಆಕರ ಗ್ರಂಥಗಳಂತೆ, ಅವನು ಮೀನಾಗಿಯೋ ಮೀನಿನ ಹೊಟ್ಟೆಯಲ್ಲಿಯೋ ಕಾಣಿಸಿಕೊಂಡು, ಶಿವನ ಅನುಗ್ರಹದಿಂದ ಸಿದ್ಧನಾಗಿ ಬೇತಾಳ, ವೀರಭದ್ರ, ಮಹಾಕಾಳಿ, ಚಾಮುಂಡಿ ಮೊದಲಾದ ದುಷ್ಟದೈವಗಳನ್ನು ಗೆದ್ದು ಯೋಗಮಾರ್ಗವನ್ನು ಎಲ್ಲೆಡೆ ಹರಡಿದನು. ಅವನ ಯೋಗಮಾರ್ಗದಲ್ಲಿ ಸ್ತ್ರೀಸಾಹಚರ್ಯ ಪ್ರಮುಖವಾಗಿದ್ದುದರಿಂದ ಸ್ತ್ರೀದೇಶವೆಂದು

ಹೆಸರಾಗಿದ್ದ ಕದಳೀಬನಕ್ಕೆ ಬಂದನಂತೆ[11]. ಕದಳೀಬನವೇ ಈಗಿನ ಕದರಿ. ಅವನ ಶಿಷ್ಯ ಗೋರಕ್ಷನಾಥನು ಕೇರಳಕ್ಕೆ ಹೋಗಿ ಅಲ್ಲಿನ ಅರಸುಗುವರಿ ಮಂಗಳೆ ಯೆಂಬುವಳೊಂದಿಗೆ ಈ ಪ್ರದೇಶಕ್ಕೆ ಹಿಂದಿರುಗಿದನೆಂದೂ, ಈ ಮಂಗಳೆ ಯಿಂದಲೇ ಮಂಗಳೂರು ಎಂದಾಯಿತೆಂದೂ ಉಲ್ಲೇಖವಿದೆ. ಹದಿನಾಲ್ಕನೆಯ ಶತಮಾನದ ಶಾಸನಗಳೂ ಊರನ್ನು ಮಂಗಳಾಪುರವೆಂದೇ ಕರೆಯುತ್ತವೆ. ಕೇರಳದ ತಿರುವನಂತಪುರದಲ್ಲಿಯೂ ಮಂಗಳಾದೇವಿಯ ಗುಡಿಯಿದೆ. ಇಲ್ಲಿ ಆಕೆಯನ್ನು ಕನ್ನಕಿಯೆಂದು ನಿರ್ದೇಶಿಸುತ್ತಾರೆ.

ಮೊದಲು ಈ ಊರಿಗೆ ಕುಡಲವೆಂದು ಹೆಸರಿದ್ದಿತಂತೆ. ಕೆಲವು ಅರಬ್ಬೀ ಉಲ್ಲೇಖಗಳಲ್ಲಿ ಈ ಊರನ್ನು 'ಮಂಜರೂರು' ಎಂದು ಕರೆದಿರುವುದಾಗಿ ಒಂದು ಒಕ್ಕಣೆಯಿದೆ[12]. ಆರನೇ ಶತಮಾನದಲ್ಲಿ ಸಿದ್ಧವಾದ 'ಕ್ರಿಶ್ಚಿಯನ್ ಟೋಪೋ ಗ್ರಫಿ' (ಕಾಸ್ಮಾಸ್ ಇಂದಿಕೋಪ್ಲೂಯ್‌ಸ್ಟಸ್ ಎಂಬುವನು ಬರೆದದ್ದು) ಎಂಬ ಪುಸ್ತಕದಲ್ಲಿ ಈ ಊರನ್ನೇ 'ಮಂಗರೂತ್' ಎಂದು ಕರೆದಿರುವುದು ಕಾಣುತ್ತದೆ. 'ಮಂಜರೂರು' ಎಂಬುದೇ 'ಮಂಗರೂತ್' ಎನ್ನುವುದರ ಮೂಲವೋ ? 'ಮಂಜಿನಾಥ' ಎನ್ನುವುದೇ 'ಮಂಗರೂತ್' ಆಯಿತೋ ?

ಮಂಗಳೂರಿನಲ್ಲಿ ಮಂಗಳಾದೇವಿಯ ಗುಡಿಯೇನೋ ಇದೆ ; ಆದರೆ ಇದು ಕದರಿ ಗುಡ್ಡಕ್ಕೆ ಸ್ವಲ್ಪ ದೂರವೇ. ಗೋರಕ್ಷನಾಥನೊಂದಿಗೆ ಬಂದ ಮಂಗಳಾ ದೇವಿ ಅಲ್ಲೆಲ್ಲ ಹರಡಿಕೊಂಡಿರುವ ಶಕ್ತಿಪ್ರಧಾನವಾದ ಧರ್ಮದೊಂದಿಗೆ ಬೆರೆತು ಕೊಂಡಿದ್ದರೆ ಆಶ್ಚರ್ಯವಲ್ಲ. ಆದರೆ ಗೋರಕ್ಷನಾಥನಿಗೆ ಗುರುವೆಂದು ಹೆಸರಾದ 'ಮಂಜುನಾಥ' ನ ಪ್ರಭಾವ ಇನ್ನೂ ಹಳಿಯದು ತಾನೆ ? ಮೇಲಾಗಿ, ಮಂಗ ಳೂರು ರಾಜ್ಯಕ್ಕೆ ಕದರಿಯೇ ಅಧಿಷ್ಠಾನವಾಗಿತ್ತೆಂದು ೧೪೭೫ ರ ಸುಮಾರಿನ ಶಾಸನವೊಂದು ತಿಳಿಸುತ್ತದೆ[13]. ಅದಕ್ಕೂ ಹಿಂದೆ ೧೩೮೬ ರ ಶಾಸನವೊಂದು 'ಕದಳಿಯ ಮಂಜುನಾಥ' ಎಂದು ಒಕ್ಕಣಿಸಿದೆ[14]. ಕದರಿಯ ಮಂಜಿನಾಥ ನಿಂದಲೇ ಊರ ಹೆಸರು ಮೊದಲಿಗೆ ಮೈದಳೆದಿರಬಹುದು.

ಆದರೆ ಇಲ್ಲಿ ಗಮನಿಸಬೇಕಾದ ಇನ್ನೂ ಒಂದು ವಿವರವಿದೆ. ಕದರಿ ಯಲ್ಲಿಯೇ ಜೋಗಿಮಠದ ಹತ್ತಿರವಿರುವ ಶಿಲಾಶಾಸನವೊಂದು (ಮೇಲೆ ಹೇಳಿದ

ಕ್ರಿಸ್ತಾಬ್ದ ೧೪೭೫ ರದ್ದು), 'ಕದರಿಯ ಆಳು ಅರಸುಗಳಾ'ದ ಮಂಗಳನಾಥ ಒಡೆಯರು ಗೋರಕ್ಷನಾಥನ ಬಿಂಬಕ್ಕೆ ದೀಪ-ಪಡಿಗಳಿಗೆಂದು ದಾನಮಾಡಿದುದನ್ನು ಹೇಳುತ್ತದೆ [15]. ಕದರಿಯ 'ಆಳು ಅರಸಂ'ದರೆ ಮಠದ ಒಡೆಯನೆಂದಷ್ಟೇ. ಇವನು ಗೋರಕ್ಷನಾಥನಿಗೆ ಭಕ್ತಿಯಿಂದ ನಡೆದುಕೊಂಡಿರುವುದನ್ನು ನೋಡಿದರೆ ಗೋರಕ್ಷನಾಥನೊಂದಿಗೆ ಇಲ್ಲಿಗೆ ಬಂದ ಮಂಗಳಾದೇವಿಯ ನೆನಪೇ ಇವನ ಹೆಸರಿಗೆ ಮೂಲವೆಂದಿದ್ದೀತು. ಮೇಲಾಗಿ ತಾನು 'ಚಂದ್ರನಾಥ-ಒಡೆಯರ' ಶಿಷ್ಯನೆಂದು ಶಾಸನದಲ್ಲಿ ಒಕ್ಕಣೆಯಿದೆ. ಈ ಚಂದ್ರನಾಥನೆಂಬ ಹೆಸರಿಗೆ ಮೂಲ, ಮತ್ಸ್ಯೇಂದ್ರನಾಥನ ನೆನಪಿರಲಾರದೆ ? ಮತ್ಸ್ಯೇಂದ್ರನಾಥನಿಗೆ ಚಂದ್ರನಾಥನೆಂಬ ಹೆಸರಿದ್ದುದು ಹಿಂದೆಯೇ ಬಂದಿದೆ.

ನಾಥಪಂಥ ಬೌದ್ಧಧರ್ಮದ ಪ್ರಭಾವವನ್ನು ಮೈಗೂಡಿಸಿಕೊಂಡಿತೆಂದು ಸಾಮಾನ್ಯವಾಗಿ ಬಳಕೆಯಲ್ಲಿರುವ ಕಲ್ಪನೆ. ಆದರೆ ಬೌದ್ಧಧರ್ಮವೇ ನಾಥಪಂಥದ ಪ್ರಭಾವವನ್ನು ಅಳವಡಿಸಿಕೊಂಡು ವಜ್ರಯಾನವಾಗಿ ಕವಲೊಡೆಯಿತೆಂದು ಬಹುಮಟ್ಟಿಗೆ ಜನ ಅರಿಯರು. ನಾಥಪಂಥದ ಚಿಗುರೊಡೆದದ್ದು ದಕ್ಷಿಣದೇಶದಲ್ಲಿಯೇ. ಶಿವನೆಂದಾದ ಆದಿನಾಥನನ್ನು ಬಿಡಿ. ಎರಡನೆಯವನಾದ ಮತ್ಸ್ಯೇಂದ್ರನಾಥ ಚಂದ್ರಗಿರಿಯಲ್ಲಿ (ಅಥವಾ ಹೊನ್ನಾವರದ ಚಂದ್ರಪುರದಲ್ಲಿ) ಹುಟ್ಟಿ, ದೇಶದಲ್ಲೆಲ್ಲ ಅಲೆದಾಡಿ, ಕಡೆಗೆ ಕದರಿಯಲ್ಲಿ ನೆಲೆಸಿದವನು. ಮೂರನೆಯವನಾದ ಗೋರಕ್ಷನಾಥ ಗೋದಾವರೀತೀರದ ಬಡವ ದೇಶದ ಚಂದ್ರಗಿರಿಯಲ್ಲಿ ಹುಟ್ಟಿ (ಯೋಗಿಸಂಪ್ರದಾಯಾವಿಷ್ಕೃತಿಯ ಪ್ರಕಾರ), ಕೊಲ್ಲಾಪುರಕ್ಕೆ ಹೋಗಿ, ನೇಪಾಳ ಮೊದಲಾದೆಡೆ ಸಂಚರಿಸಿ, ಕಡೆಗೆ ಕೇರಳಕ್ಕೆ ಬಂದು ಅಲ್ಲಿಂದ ಕದರಿಗೆ ಬಂದವನು. ಗೋದಾವರೀ ತೀರ ಆಗಿನ ಕನ್ನಡನಾಡಿನ ಹರವಿನೊಳಗೇ ಇದ್ದುದನ್ನು ಮರೆಯಬಾರದು. ಚೌರಾಸೀಸಿದ್ಧರಲ್ಲಿ ಒಬ್ಬನಾದ ಕೃಷ್ಣಪಾದನು (ಕಾಣ್ಹಪಾ) ಕನ್ನಡನಾಡವನೇ [16], ಇನ್ನೊಬ್ಬ ನಾಗಾರ್ಜುನ ಶ್ರೀಶೈಲದವನು. ನಮ್ಮ ಅಲ್ಲಮಪ್ರಭುವನ್ನೂ ನಾಥರ ಪಟ್ಟಿಯಲ್ಲೇ ಹಠಯೋಗಪ್ರದೀಪಿಕೆಯು ಎಣಿಸುತ್ತದೆ ; ರೇವಣಸಿದ್ದನಂತೂ ಕನ್ನಡನಾಡಿನವನೇ. ಚೌರಂಗಿನಾಥ ಶಾತವಾಹನ ರಾಜನ ಮಗ ; ಶಾತವಾಹನ ರಾಜರು ಈ ಕಡೆ ಆಳುತ್ತಿದ್ದವರು.

ಬೌದ್ಧಧರ್ಮದ ವಜ್ರಯಾನಕ್ಕೆ ಮೊಟ್ಟಮೊದಲ ಆಕರಗ್ರಂಥ ಆರ್ಯ ಮಂಜುಶ್ರೀಮೂಲಕಲ್ಪವೆಂಬುದು. ಇದು ದಕ್ಷಿಣದೇಶದ ಕೃತಿಯೇ. ಇದರ ಒಂದೇ ಮಾತೃಕೆ ಉಪಲಬ್ಧವಾಗಿರುವುದು ಕೇರಳದಲ್ಲಿಯೇ ದೊರೆತದ್ದು[17]. ಇದರಲ್ಲಿ "ಶ್ರೀಧಾನ್ಯಕಟಕೇ ಚೈತ್ಯೇ, ಶ್ರೀ ಪರ್ವತೇ ಮಹಾಶೈಲೇ ದಕ್ಷಿಣಾಪಥ ಸಂಜ್ಞಕೇ" ಎನ್ನುವ ಸ್ಪಷ್ಟ ಉಲ್ಲೇಖವೇ ಇದೆ. ವಜ್ರಯಾನ ಮೈದಳೆದದ್ದು ಬಹುಮಟ್ಟಿಗೆ ನಾಗಾರ್ಜುನನ ಪ್ರಭಾವದಿಂದ; ನಾಗಾರ್ಜುನ ಶ್ರೀಶೈಲದವನು ತಾನೆ? ನಾಗಾರ್ಜುನನ ಹೆಸರು ನಾಥಸಿದ್ಧರ ಪಟ್ಟಿಯಲ್ಲೂ ಕಾಣಸಿಗುತ್ತದೆ. ಮಂಜುಶ್ರೀಬೋಧಿಸತ್ವ ಮಹಾಯಾನ ಸಂಪ್ರದಾಯದಲ್ಲಿ, ಅದರಲ್ಲೂ ವಜ್ರಯಾನದವರಲ್ಲಿ, ತುಂಬ ಆದರಣೀಯನಾದ ದೇವತೆ. ಮಂಜುಶ್ರೀಯ ಅಥವಾ (ಮಂಜುನಾಥನ) ಕಲ್ಪನೆ ನಾಥಪಂಥದ ಮತ್ಸ್ಯೇಂದ್ರ (ಮಚ್ಛೇಂದ್ರ, ಮಂಜಿನಾಥ) ನಿಂದ ಹೊರಹೊಮ್ಮಿತು, ಎಂದು ತೋರುತ್ತದೆ. ತಿಬತ್‌ನಲ್ಲೂ ಬಳಕೆಯಲ್ಲಿರುವುದು ವಜ್ರಯಾನ ಬೌದ್ಧಪಂಥವೇ; ಅವರಲ್ಲಿ ನಾಥಸಿದ್ಧ ಸಂಪ್ರದಾಯದ ಹೆಗ್ಗಳಿಕೆಯನ್ನು ಗುರುತಿಸುವ ಪದ್ಧತಿ ಉಳಿದು ಬಂದಿದೆ. ಅಲ್ಲಿನ ಧಾರ್ಮಿಕ ವಿವರಗಳಲ್ಲಿ ಈ ಸಂಪ್ರದಾಯದ ನೇರವಾದ ಪ್ರಭಾವವನ್ನು ಗುರುತಿಸಬಹುದು.

ನಾಥಸಿದ್ಧ-ಬೌದ್ಧಸಂಪ್ರದಾಯಗಳ ಸಂಬಂಧ ಏನೇ ಇರಲಿ, ಎರಡೂ ಶೈವಧರ್ಮಕ್ಕೆ ಹೊಂದಿಕೊಳ್ಳುವುವೆನ್ನುವುದು ನಿರ್ವಿವಾದವಾದುದು. ಬೆಟ್ಟಗುಡ್ಡಗಳನ್ನೂ, ಕೋಡುಗಲ್ಲುಗಳನ್ನೂ, ಲಿಂಗಗಳನ್ನೂ ದೈವಸನ್ನಿಧಿಯೆಂದು ಬಗೆದು ಪೂಜಿಸುವುದು ಎರಡೂ ಸಂಪ್ರದಾಯಗಳಲ್ಲಿ ಉಂಟು. ಬೌದ್ಧರ ತ್ರಿರತ್ನಗಳಾದ ಬುದ್ಧ-ಧರ್ಮ-ಸಂಘ ಈ ಮೂರರಲ್ಲಿ ಧರ್ಮಕ್ಕೇ ಆದ್ಯತೆ ಕೊಡುವುದು ಎರಡೂ ಸಂಪ್ರದಾಯಗಳಿಗೆ ಸಮಾನವಾದುದೇ. 'ಧರ್ಮಾಯ ನಮಃ' ಎನ್ನುವ ಮಂತ್ರ ವಜ್ರಯಾನದವರಲ್ಲೂ ಉಂಟು, ನಾಥಸಿದ್ಧರಲ್ಲೂ ಉಂಟು. ನಾಥಸಿದ್ಧರಲ್ಲಿ ಧರ್ಮನಾಥನೊಬ್ಬ; ರಾಜನಾಗಿದ್ದು ವಿರಕ್ತನಾಗಿ ಜೋಗಿಯಾದನಂತೆ. ಧರ್ಮನಾಥ ತೀರ್ಥಂಕರನ ಬಸದಿಗಳೂ ತುಳುನಾಡಲ್ಲಿ ಕೆಲವೆಡೆ ಇವೆ (ಕಾರ್ಕಳ-ಹಿರಿಯಂಗಡಿಯ ಧರ್ಮಾಧಿಕಾರಿ ಬಸದಿ ಮತ್ತು ನಾರಾವಿಯ ದೊಡ್ಡ ಬಸದಿ).

ಮೇಲಾಗಿ ವಜ್ರಯಾನವು ಪ್ರಚಲಿತವಾಗಿರುವ ತಿಬ್ಬತೀಯ ಧರ್ಮದಲ್ಲೂ, ನಾಥಸಿದ್ಧಪಂಥವು ಬೇರೂರಿರುವ ತುಳುನಾಡಿನ ಧಾರ್ಮಿಕ ವಾತಾವರಣದಲ್ಲೂ ಭೂತಾರಾಧನೆಯ ಪಾತ್ರ ವಿಶಿಷ್ಟವಾದುದು. ಭೂತಗಳನ್ನು ಶಿವಗಣವೆಂದು ಬಗೆದು, ಸಾಧನೆಗೆ ನೆರವಾಗುವ ಶಕ್ತಿಗಳೆಂದು ಭಾವಿಸಿ, ಧರ್ಮವನ್ನು ಉಳಿಸಿ ಬೆಳೆಸುವುದೇ ಈ ಶಕ್ತಿಗಳ ಪ್ರಯೋಜನವೆಂದು ನಂಬುವುದು ಎರಡೂ ಕಡೆ ಇದೆ. ಇನ್ನು ಭೂತಗಳ ಆಕಾರ, ಆರಾಧನೆ, ಸ್ವಭಾವ, ಸಮಾಧಾನಗಳಲ್ಲೂ ತುಂಬ ಸಾದೃಶ್ಯಗಳಿವೆ. ವಜ್ರಯಾನದ ಹರವಿನಲ್ಲೇ ತೋರಿಕೊಂಡ ತಾರಾಭಗವತಿಯ ಪೂಜೆಗೆ ತುಳುನಾಡಿನಲ್ಲಿನ ಅಮ್ಮನವರ ಪೂಜೆಯೇ ಮೂಲವೆಂದರೂ ತಪ್ಪಾಗದು. ಶಿವನೊಂದಿಗೆ ಶಕ್ತಿಯನ್ನು ಕೂಡಿಸಿಕೊಳ್ಳುವುದೂ, ಶಕ್ತಿಗೇ ಹಿರಿಯಪಟ್ಟ ಕಟ್ಟುವುದೂ, ಎರಡೂ ಕಡೆ ಕಾಣಸಿಗುತ್ತವೆ. ಸ್ತ್ರೀಸಾಹಚರ್ಯವಿರುವ ಸಾಧನೆಗೆ ಎರಡೂ ಕಡೆ ಪುರಸ್ಕಾರವಿದ್ದಿತು. ಸ್ತ್ರೀಪ್ರಧಾನವಾದ ಪ್ರದೇಶಕ್ಕೆ ಕದಳೀಬನವೆಂಬ ಹೆಸರು ಬಂದುದು ನಾಥಸಿದ್ಧರ ಮನೋಧರ್ಮದಿಂದಲೇ. ಕದಳಿಯೆಂದರೆ ಸಂಸ್ಕೃತದಲ್ಲಿ ಬಾಳೆಯ ಗಿಡವೂ ಆಗುತ್ತದೆ ; ಬಳುಕುವ ಹೆಂಗಳೆಯೆಂಬ ಅರ್ಥವೂ ಇದೆ. ಅಲ್ಲಮಪ್ರಭುವಿನ, ಅಕ್ಕಮಹಾದೇವಿಯ ಕದಳೀಬನವನ್ನು ನೆನಪಿಗೆ ತಂದುಕೊಳ್ಳಿ.

ತುಳುನಾಡಿನಲ್ಲಿ ಮೊದಲಿಂದ ಹರಡಿಕೊಂಡಿರುವುದು ಭೂತಾರಾಧನೆಯೇ. ಹೊರಗಿಂದ ಬಂದ ಬೌದ್ಧಧರ್ಮವಾಗಲೀ, ಜೈನಧರ್ಮವಾಗಲೀ, ನಾಥಸಿದ್ಧಪಂಥವಾಗಲೀ ಭೂತಾರಾಧನೆಯ ಚೌಕಟ್ಟಿಗೆ ಅಳವಡಿಸಿಕೊಂಡಾಗಲೇ ಆಯಾ ಧರ್ಮಗಳ ವಿವರಗಳು ಉಳಿದುಕೊಂಡಾವು ತುಳುನಾಡಿನ ಧಾರ್ಮಿಕ ಚರಿತ್ರೆಯನ್ನು ಖಚಿತವಾಗಿ ಗುರುತಿಸುವುದಾದರೆ ಇದೇ ಎದ್ದು ನಿಲ್ಲುವ ಮಾತು. ಮೊದಲ ನೆರೆಯಲ್ಲೇ ತೋರಿಕೊಂಡ ಶೈವಧರ್ಮದ ಕುರುಹುಗಳು ಗೋಕರ್ಣದ ಶಿವಾಲಯದಲ್ಲಿಯೂ, ಶಿವಳ್ಳಿಯ ಅನಂತೇಶ್ವರ ದೇಗುಲದಲ್ಲಿಯೂ, ಉದ್ಯಾವರದ ಶಂಭುಕಲ್ಲು ಶಿವಾಲಯದಲ್ಲಿಯೂ ಕಾಣಸಿಗುತ್ತವೆ. ಇವೆಲ್ಲ ಏಳೆಂಟನೆಯ ಶತಮಾನದವೆಂದು ಗುರುರಾಜಭಟ್ಟರ ಎಣಿಕೆ. ಕಾಳಾಮುಖ ಸಂಪ್ರದಾಯದ ಪ್ರಭಾವವೂ ಇದ್ದಿತೆನ್ನುತ್ತಾರೆ. ಬೌದ್ಧಧರ್ಮದ ವಜ್ರಯಾನಪಂಥ ಎಂಟನೆಯ ಶತಮಾನದ ಸುಮಾರಿಗೆ ಬಂದಂತೆ ತೋರುತ್ತದೆ ; ಅದಕ್ಕೆ ಮೊದಲೋ,

ಅದರ ನಂತರವೋ ನಾಥಸಿದ್ಧ ಸಂಪ್ರದಾಯ ಕದರಿಗೆ ಬಂದು ಬೇರೂರಿತು; ಸುತ್ತಮುತ್ತ ಹರಡಿತು. ಈ ಸಂಪ್ರದಾಯದ ಜೋಗಿ-ಒಡೆಯರು ಆಳರಸ ರಂತೆ ಅಧಿಕಾರ ಮಾಡಿದುದೂ ಉಂಟು. ಶೈವಧರ್ಮವನ್ನೇ ಇವರು ಎತ್ತಿ ನಿಲ್ಲಿಸಿದುದು ಸಹಜವೇ. ಇದಾದ ಮೇಲೆ ಬಂದದ್ದು ಜೈನಧರ್ಮದ ನೆರೆ. ಕದರಿಯ ಕಡೆ ಆಳುತ್ತಿದ್ದವರು ಬಂಗವಾಡಿಯ (ನಂದಾವರದ) ಬಂಗರು; ಹದಿನಾಲ್ಕನೆಯ ಶತಮಾನದ ಆದಿಭಾಗದಿಂದ ಹತ್ತೊಂಬತ್ತನೆಯ ಶತಮಾನದ ವರೆಗೂ ಅವರ ಆಳ್ವಿಕೆ ಸಾಗಿತು. ಒಲುಮೆಯಲ್ಲಿ ಜೈನರಾದರೂ ಅವರ ಕುಲ ದೇವರು ಸೋಮನಾಥ; ಅವರ ಮುದ್ರೆಯುಂಗುರದ ಮೇಲೆ ಇದ್ದುದು ಆ ಚಿಹ್ನೆಯೇ. ಅವರ ಒತ್ತಾಸೆಯಿಂದಲೇ ಅವರ ಸೀಮೆಯಲ್ಲೆಲ್ಲ ಶಿವಾಲಯಗಳು ಎದ್ದುಕೊಂಡುವು. ವಿಟ್ಟಲದ ಶಾಲೆ ಬಳಿಯ ರಾಜರು (ಡೊಂಬ ಹೆಗ್ಗಡೆಯರು) ಜೈನರಾದರೂ ಪಂಚಲಿಂಗೇಶ್ವರನ ಒಕ್ಕಲು. ಮೂಲ್ಕಿಯ ಸಾವಂತರು ಪಟ್ಟಿ ಹೊಂಬುಚ್ಚದ ಜಿನದತ್ತರಾಯನ ವಂಶಕ್ಕೆ ಸೇರಿದವರಾದರೂ ಜನಾರ್ಧನನ ಭಕ್ತರು. ಈ ಬಗೆಯ ಸಮನ್ವಯ ಸಾಧ್ಯವಾದುದು ಭೂತಾರಾಧನೆಯ ಬಲದಿಂದಲೇ.

ಅದಿರಲಿ, ಬಂಗವಾಡಿಯ ಬಂಗ ಅರಸರ ಪ್ರಸ್ತಾಪ ಬಂದಿತಷ್ಟೆ. ಮಂಗ ಳೂರು ಸುತ್ತಮುತ್ತ ಒಡೆತನ ಮಾಡಿದ ಇವರ ಆಳ್ವಿಕೆಗೆ ಎಪ್ಪತ್ತೆರಡು ಮಾಗಣೆ ಗಳು ಸೇರಿದ್ದುವು: ಪುತ್ತೂರು (27 ಗ್ರಾಮಗಳು), ಉಪ್ಪಿನಂಗಡಿ (22 ಗ್ರಾಮಗಳು), ಸುಬ್ರಹ್ಮಣ್ಯ (18 ಗ್ರಾಮಗಳು), ವಿಟ್ಟಲ (14 ಗ್ರಾಮಗಳು), ಬೆಳ್ತಂಗಡಿ (13 ಗ್ರಾಮಗಳು), ಬಂಟವಾಳ (5 ಗ್ರಾಮಗಳು) ಇತ್ಯಾದಿ[18]. ಬೆಳ್ತಂಗಡಿ ಮಾಗಣೆಗೆ ಸೇರಿದಂತೆ ಇದ್ದುದು ಕುಡುಮ (ಧರ್ಮಸ್ಥಳ). ಮಂಗ ಳೂರು-ಕದರಿಯಿಂದ ಸುಮಾರು ಎಪ್ಪತ್ತೈದು ಕಿಲೋಮೀಟರ್ ದೂರದಲ್ಲಿ ರುವ ಈ ಗ್ರಾಮಕ್ಕೊಂದು ಚಾವಡಿಯೂ ಚಾವಡಿ ಮನೆತನದ ಹೆಗ್ಗಡೆಯೂ ಮಂಗಳೂರು ಅರಮನೆಯ ಬಂಗ ಅರಸರಿಗೆ ನಡೆದುಕೊಳ್ಳುತ್ತ ಹಿಂದಿನಿಂದ ಇದ್ದಿರಬೇಕು. ಗ್ರಾಮದಲ್ಲಿನ ದೈವಸ್ಥಾನ, ಜಿನಸ್ಥಾನಗಳ ಆಡಳಿತ ನೋಡಿ ಕೊಳ್ಳುತ್ತ, ಅಲ್ಲೇ ನ್ಯಾಯಾ ನ್ಯಾಯಗಳನ್ನು ತೀರ್ಮಾನಿಸುತ್ತ, ಕಾಲಕಾಲಕ್ಕೆ ತಪ್ಪದೆ ಕಪ್ಪಕಾಣಿಕೆ ಕೊಡುತ್ತ, ಗ್ರಾಮಪದ್ಧತಿಯನ್ನು ನಡೆಸಿಕೊಂಡು

ಹೋಗುವುದು ಹೆಗ್ಗಡೆಯ ಹೊಣೆ. ನೊಂದಳ್ಗಿ ಶೀನಪ್ಪ ಹೆಗ್ಡೆಯವರು ಸಂಗ್ರಹಿಸಿದ ಹಳೆಯ ಪಟ್ಟಿಗಳಲ್ಲಿ ಕುಡುಮದ ಪ್ರಸ್ತಾಪ ಬರುವುದಿಲ್ಲ, ಅದರ ಹೆಗ್ಗಡೆಯ ವಿವರಗಳೂ ದೊರೆಯುವುದಿಲ್ಲ.

ಹಳೆಯ ಆಡಳಿತಕ್ರಮದಂತೆ ನಾಡನ್ನು ಮಂಡಲ, ರಾಜ್ಯ, ದೇಶ, ಮಾಗಣೆ, ಸ್ಥಳ, ಗುತ್ತು, ಗ್ರಾಮ, ಊರು, ಎಂದು ಮೊದಲಾಗಿ ವಿಭಾಗ ಮಾಡುತ್ತಿದ್ದ ಪದ್ಧತಿ ತುಳುನಾಡಿನಲ್ಲಿ ಇತ್ತು. ಇಡೀ ನಾಡು ಮಂಡಲ ಅಥವಾ ರಾಜ್ಯವಾದರೆ, ಮಾಗಣೆಗಳು ಹಲವಾರು ಗ್ರಾಮಗಳನ್ನೊಳಗೊಂಡಂತೆ, ಗ್ರಾಮವು ಗುತ್ತುಗಳನ್ನೊಳಗೊಂಡಂತೆ ಇರುತ್ತಿದ್ದುವು. ಗ್ರಾಮಕ್ಕಿಂತ ದೊಡ್ಡದಾಗಿದ್ದು, ಮಾಗಣೆಗಿಂತ ಸಣ್ಣದಾಗಿದ್ದರೆ ಅದನ್ನು 'ಸ್ಥಳ' ಎಂದು ಕರೆಯುವ ವಾಡಿಕೆ ಇದ್ದಂತೆ ತೋರುತ್ತದೆ. ಮಂಗಳೂರು ರಾಜ್ಯವನ್ನು ಮಂಗರಸ-ಒಡೆಯರು ಆಳುತ್ತಿರುವಾಗ ಬಿದಿರೆಯ-ಸ್ಥಳವನ್ನು ಮಂಜಣ್ಣ-ಅಧಿಕಾರಿ ನೋಡಿಕೊಳ್ಳುತ್ತಿದ್ದುದು ಕ್ರಿ. ಪೂ. 1390ರ ಒಂದು ಶಾಸನದಲ್ಲಿ ಬರುತ್ತದೆ. ಮಂಗಳೂರು-ಸ್ಥಳ, ಬಾರಕೂರು-ಸ್ಥಳ ; ಮುಂತಾಗಿ ಶಾಸನಗಳಲ್ಲಿ ಪ್ರಸ್ತಾಪವಿದೆ. ಕಡಬ ಸ್ಥಳಕ್ಕೆ ಸೇರಿದ್ದೆಂಬಂತೆ ಕುಕ್ಕೆಗ್ರಾಮದ ಉಲ್ಲೇಖವೂ ಇದೆ (1406). ಹೀಗೆ ಕೆಲವಾರು ಗ್ರಾಮಗಳ ಆಡಳಿತ ಕೂಡಿಕೊಂಡರೆ ಸ್ಥಳವೆಂಬ ಮಾತು ಬಳಕೆಗೆ ಬರುತ್ತಿತ್ತೆನ್ನಬಹುದು. ಕುಡುಮದ ಹೆಗ್ಗಡೆಯ ಆಡಳಿತಕ್ಕೆ ನೆರೆಯ ಗ್ರಾಮಗಳೂ ಗುತ್ತುಗಳೂ ಸೇರಿಕೊಂಡಾಗ ಅದು ಸ್ಥಳವಾಗಬೇಕಾಯಿತೇನೋ. ಕುಡುಮ-ಸ್ಥಳವೆಂದಿದ್ದುದು ಸಂಸ್ಕೃತಮಾತಿಗೆ ಒಲಿದು ಧರ್ಮ (ಕುಡುಮ, ಕೊಡುವ, ದಾನಧರ್ಮಗಳ) ಸ್ಥಳವಾಯಿತೋ ?

ಬಳಕೆಯಲ್ಲಿರುವ ಪ್ರತೀತಿಯಂತೆ, ದೇವರಾಜ-ಹೆಗ್ಗಡೆ (1503ರ ನಂತರ) ಎಂಬುವರು ಕುಡುಮದ ಅಧಿಕಾರಿಗಳಾಗಿರುವಾಗ, ಉಡುಪಿಯ ವಾದಿರಾಜ ಸ್ವಾಮಿಗಳು ನಡ್ಯಂತಾಡಿ ಮಠದಿಂದ ಬೊಳ್ಯಾರುಮಠಕ್ಕೆ ಹೋಗುವ ಹಾದಿಯಾಗಿ ಅಲ್ಲಿಗೆ ಬಂದರೆಂದೂ, ಗ್ರಾಮದಲ್ಲಿ ದೈವಸ್ಥಾನವಷ್ಟೇ ಇದ್ದು, ದೇವಸ್ಥಾನವಿಲ್ಲದುದನ್ನು ಕಂಡು ಅಣ್ಣಪ್ಪದೈವದ ಮೂಲಕ ಕದರಿಯಿಂದ ಮಂಜುನಾಥ ಶಿವಲಿಂಗವನ್ನು ತರಿಸಿ ಅಲ್ಲಿ ಪ್ರತಿಷ್ಠೆಮಾಡಿ, ಹೆಗ್ಗಡೆಯ ಆತಿಥ್ಯವನ್ನು ಪಡೆದುಕೊಂಡು, ಹೆಗ್ಗಡೆಯ ಕೊಡುಗೈ ಸ್ವಭಾವವನ್ನು ಮೆಚ್ಚಿಕೊಂಡು ಊರನ್ನು

'ಧರ್ಮಸ್ಥಳ'ವೆಂದು ಕರೆದರು. ಈ ಪ್ರತೀತಿಗೆ ಆಧಾರವೇನೋ ತಿಳಿಯದು. ಇನ್ನೊಂದು ಪ್ರತೀತಿಯಂತೆ, ತಮ್ಮ ಕಾಲಕ್ಕೆ ಮೊದಲೇ ಅಲ್ಲಿ ದೈವಗಳು ತಂದು ನೆಲೆಗೊಳಿಸಿದ್ದ ಮಂಜುನಾಥ ಶಿವಲಿಂಗವನ್ನು ಆಗಮಾನುಸಾರವಾಗಿ ಪ್ರತಿಷ್ಠೆ ಮಾಡಿ, ಪೂಜಾಕ್ರಮವನ್ನು ನಿರ್ದೇಶಿಸಿದರು ಎಂಬುದು. ಇದು ಇದ್ದರೂ ಇದ್ದೀತು. ತುಳುನಾಡಿನಲ್ಲಿ ಮಧ್ವಾಚಾರ್ಯರನ್ನು ಬಿಟ್ಟರೆ ಅತ್ಯಂತ ಪ್ರತಿಭಾವಂತರೂ ಪ್ರಭಾವಶಾಲಿಗಳೂ ಆದ ವಾದಿರಾಜರು ಕುಡುಮಕ್ಕೆ ಬಂದುದಾಗಲೀ, ಅಲ್ಲಿನ ಹೆಗ್ಗಡೆಗೆ ಮಾರ್ಗದರ್ಶನ ಮಾಡಿದುದಾಗಲೀ ಅಸಂಭವವೇನಲ್ಲ. ಅಲ್ಲದೆ, ವಾದಿರಾಜಸ್ವಾಮಿಗಳಿಗೂ ಅಣ್ಣಪ್ಪಭೂತಕ್ಕೂ ನೆಂಟಿದ್ದುದೂ ಪ್ರತೀತಿಯಿದೆ. ತಮ್ಮ ಮಠವಾದ ಸೋದೆಯಲ್ಲಿ ತಾವು ಪ್ರತಿಷ್ಠೆ ಮಾಡಿದ ತ್ರಿವಿಕ್ರಮ ಮೂರ್ತಿಯನ್ನು ಈ ಭೂತದ (ಭೂತರಾಜನ) ಮೂಲಕವೇ ಬದರಿಯಿಂದ ತರಿಸಿದರಂತೆ ; ಕದರಿಯಿಂದ ಮಂಜುನಾಥಲಿಂಗವನ್ನು ಕುಡುಮಕ್ಕೆ ತರಿಸಿದಂತೆ. ಧರ್ಮಸ್ಥಳವನ್ನು ಬಿಟ್ಟರೆ, ಅಣ್ಣಪ್ಪಭೂತಕ್ಕೆ ಪೂಜೆ ಸಲ್ಲುವುದು ಸೋದೆಮಠದಲ್ಲಿ.

ಆದರೆ ವಾದಿರಾಜಸ್ವಾಮಿಗಳು ಬರೆದ ತೀರ್ಥಪ್ರಬಂಧದಲ್ಲಿ ಧರ್ಮಸ್ಥಳದ, ಅಥವಾ ಮಂಜುನಾಥನ ಪ್ರಸ್ತಾಪ ಬಂದಿಲ್ಲ. ನೇತ್ರಾವತೀನದಿಯ ವರ್ಣನೆಯೇನೋ ಇದೆ, ಆದರೆ ಅದು ಕುಮಾರಧಾರೆಗೆ ಪೀಠಿಕೆಯಂತೆ ಅಷ್ಟೆ ; ಮುಂದೆ ಸುಬ್ರಹ್ಮಣ್ಯಕ್ಷೇತ್ರಕ್ಕೆ ಅವತರಣಿಕೆಯಾಗಿ. ಪ್ರಾಯಶಃ, ಅವರ ಕಾಲದಲ್ಲಿ ಅದು ಅಷ್ಟಾಗಿ ಪ್ರಸಿದ್ಧವಾಗಿರಲಿಲ್ಲವೇನೋ. ತುಳುನಾಡಿನ ಸಪ್ತಕ್ಷೇತ್ರಗಳ ಎಣಿಕೆಯಲ್ಲೂ ಧರ್ಮಸ್ಥಳ ಸೇರುವುದಿಲ್ಲವಷ್ಟೆ. ಆದರೆ ಇಷ್ಟರಿಂದ ಪ್ರತೀತಿಯನ್ನು ಅಲ್ಲಗೆಳೆಯುವಂತಿಲ್ಲ. ಅವರ ಕಾಲದಲ್ಲೇ ಕುಡುಮ 'ಸ್ಥಳ'ವಾಗಿರಬಹುದು ; 'ಧರ್ಮಸ್ಥಳ' ವೆಂದು ಅವರೇ ಕರೆದಿರಬಹುದು. ಕುಡುಮದ ಭೂತಕ್ಕೆ ನೆರವಾಗಿ ನೆರೆಯ ಕಲ್ಲೇರಿತ್ತಾಯಭೂತ ಸೇರಿಕೊಂಡುಬಂದ ಐತಿಹ್ಯವೂ ಇದೆಯಲ್ಲವೆ ? ಕುಡುಮಕ್ಕೆ ಕಲ್ಲೇರಿಗ್ರಾಮವೂ ಸೇರಿಕೊಂಡಿತೆಂದು ಇದರ ಅರ್ಥವಿದ್ದೀತೆ? ಗ್ರಾಮ 'ಸ್ಥಳ' ವಾಗುವುದು ಹೀಗೆಯೇ. ಕಲ್ಲೇರಿತ್ತಾಯ ಭೂತ ಕುಡುಮಕ್ಕೆ ಸೇರಿದ್ದು ಪದ್ಮಯ್ಯ ಹೆಗ್ಗಡೆಯವರ ಕಾಲದಲ್ಲಂತೆ ; ಇವರು ತೀರಿಕೊಂಡದ್ದು 1432 ರಲ್ಲಿ.

ಇವರನಂತರ ಪಟ್ಟಕ್ಕೆ ಬಂದ ಚಂದಯ್ಯ ಹೆಗ್ಗಡೆ ತಮ್ಮ ದೀರ್ಘಕಾಲದ ಅಧಿಕಾರಾವಧಿಯಲ್ಲಿ (1432 ರಿಂದ 1503 ರವರೆಗೆ) ಮಾಡಿದ ಕೆಲಸವೆಂದು ಉಲ್ಲೇಖವಿರುವುದು ಮಂಜುನಾಥನಿಗೆ ನಾಗಾಭರಣವನ್ನು ಮಾಡಿಸಿಕೊಟ್ಟು 1470ರಲ್ಲಿ ಉತ್ಸವವೊಂದನ್ನು ನಡೆಸಿದುದು. ಎಂದರೆ ಮಂಜುನಾಥನ ಆಲಯು ಆಗಲೇ ಇದ್ದಿರಬೇಕು. ಇದು ದೇವರಾಜ ಹೆಗ್ಗಡೆ ಪಟ್ಟಕ್ಕೆ ಬರುವ ಮೊದಲೇ, ವಾದಿರಾಜಸ್ವಾಮಿಗಳು ಅಲ್ಲಿಗೆ ಬರುವ ಮೊದಲೇ, ಕುಡುಮ ಧರ್ಮಸ್ಥಳವಾಗುವ ಮೊದಲೇ. ಅಲ್ಲಿಂದ ಮುಂದೆ ಹೆಗ್ಗಡೆಯರೆಲ್ಲ ಮಂಜುನಾಥನಿಗೆ ನಡೆಸಿದ ಕೈಂಕರ್ಯಗಳೇ ಉಲ್ಲೇಖಕ್ಕೆ ಬಂದಿವೆ. ಧರ್ಮದೇವತೆಗಳ ಪ್ರಭಾವ ಉಳಿದೇ ಇರಬೇಕು. ಆದರೆ ಚಂದ್ರನಾಥ ಬಸದಿಯು ಕಡೆ ಗಮನ ಹರಿಸಿ ಜೀರ್ಣವಾಗಿದ್ದ ಅದನ್ನು ಉದ್ಧಾರಮಾಡಿದ ಕೀರ್ತಿ ಇಮ್ಮಡಿ ಮಂಜಯ್ಯ ಹೆಗ್ಗಡೆಗೆ ಸಲ್ಲುತ್ತದೆ. ಇವರು ಪಟ್ಟಕ್ಕೆ ಬಂದುದು 1849ರಲ್ಲಿ. ಅಲ್ಲಿಯವರೆಗೆ ಚಂದ್ರನಾಥ ಬಸದಿ ಅಲ್ಲಿದ್ದುದೇ ತಿಳಿಯುವುದಿಲ್ಲ! ಮುಂದೆ ಚಂದ್ರನಾಥ ಬಸದಿಯಲ್ಲಿ ಪಂಚ ಕಲ್ಯಾಣ ಮಹೋತ್ಸವವನ್ನು ನಡೆಸಿದರೆಂಬ ಒಕ್ಕಣೆಯಿರುವುದು ಐದನೆಯ ಚಂದಯ್ಯ ಹೆಗ್ಗಡೆಯವರ ಕಾಲದಲ್ಲಿ (1884-1914); ಈಗಿನ ಹೆಗ್ಗಡೆ ಯವರ ಅಜ್ಜಂದಿರು ಇವರು.

ನಾವು ಹಿಡಿದಿರುವ ಹಾದಿಯನ್ನೇ ಹಿಡಿದು ನೋಡಿದರೆ, ಮಂಜು ನಾಥನೂ ಮತ್ಸ್ಯೇಂದ್ರನಾಥನೇ, ಚಂದ್ರನಾಥನೂ ಮತ್ಸ್ಯೇಂದ್ರನಾಥನೇ. ಮಂಜುನಾಥನಲ್ಲಿ ಶೈವ ಕಳೆಯಿದ್ದರೆ ಚಂದ್ರನಾಥನಲ್ಲಿ ಜೈನಕಳೆ; ಎರಡರ ಸತ್ತ್ವ ಒಂದೇ, ನಾಥಪಂಥದ್ದು. ಆದರೆ ಭೂತಾರಾಧನೆಯ ಚೌಕಟ್ಟಿನಲ್ಲಿ ಶೈವ ಧರ್ಮ ಸುಲಭವಾಗಿ, ನೇರವಾಗಿ ಸೇರಿಕೊಳ್ಳುತ್ತದೆ. ಚಂದ್ರನಾಥಬಿಂಬವನ್ನು ಯಾವ ಭೂತವೂ ಅಲ್ಲಿ ತಂದಿರಿಸಲಿಲ್ಲ, ಮಂಜುನಾಥನನ್ನಾದರೆ ಭೂತರಾಜನಾದ ಅಣ್ಣಪ್ಪನೇ ಹೊತ್ತು ತಂದನಷ್ಟೆ? ಅಷ್ಟಲ್ಲದೆ, ಮಂಜುನಾಥ ಲಿಂಗದಲ್ಲಿ ಮತ್ಸ್ಯೇಂದ್ರನಾಥನು ಮಾತ್ರವಲ್ಲದೆ ಅವನ ಗುರುವಾದ ಆದಿನಾಥ-ಶಿವನೂ ಕೂಡಿಕೊಂಡಿದ್ದಾನೆ. ಹಾಗಾಗಿ ಮಂಜುನಾಥ ರೂಪದ ಮೇಲ್ಮೆ.

ಭೂತಾರಾಧನೆಗೂ ಮಂಜುನಾಥನಿಗೂ ನೆಂಟು ಉಳಿದುಬಂದಿರುವು ದನ್ನು ಕಾಣಬಹುದು. ಮಂಜುನಾಥನ ನೆರೆಯಲ್ಲೇ, ಅದೇ ಆವರಣದಲ್ಲೇ,

ದೈವಗಳಿಗೂ ಎಡೆಯಿದೆ, ಅಣ್ಣಪ್ಪನಿದ್ದಾನೆ, ಕಲ್ಲೇರಿತ್ತಾಯ ಭೂತವೂ ಇದೆ. ನೆಲ್ಯಾಡಿಬೀಡಿನಲ್ಲಿ ನೆಲೆಗೊಂಡಿರುವ ದೈವಗಳು ಹೆಗ್ಗಡೆಯ ಮನೆತನದ ದೈವಗಳು ; ಅಲ್ಲಿ ಹೆಗ್ಗಡೆಯೊಂದಿಗೆ ದೈವಗಳ ಸಂಪರ್ಕ. ಅದೇ ದೈವಗಳು ಮಂಜುನಾಥನ ನೆರೆಯಲ್ಲಿರುವಾಗ ಎಲ್ಲ ಜನರಿಗೂ ಅವುಗಳ ಸಂಪರ್ಕವುಂಟು. ಹೊಸ ಹೆಗ್ಗಡೆಯ ಪಟ್ಟವಾಗುವುದು ಧರ್ಮದೇವತೆಗಳು ನೆಲೆಗೊಂಡಿರುವ ನೆಲ್ಯಾಡಿ ಬೀಡಿನಲ್ಲೇ ; ದೈವಗಳ ದರ್ಶನವಾಗುವಾಗ ನುಡಿಕಟ್ಟು ಹೆಗ್ಗಡೆಗೆ ಮಾತ್ರ. ಆದರೆ ಪಟ್ಟದ ಗದ್ದುಗೆ ಮಂಜುನಾಥನ ಗುಡಿಯಿಂದ ಬರಬೇಕು. ನೆಲ್ಯಾಡಿ ಬೀಡಿನಲ್ಲಿ ಪಟ್ಟವಾದೊಡನೆ ಹೆಗ್ಗಡೆ ಮಂಜುನಾಥನ ಗುಡಿಗೇ ಬರಬೇಕು. ಭೂತಗಳಿಂದ ಪಡೆದುಕೊಂಡ ಪಟ್ಟ ಜನರಿಗೆ ಮನದಟ್ಟಾಗುವುದು ಮಂಜುನಾಥನ ಸನ್ನಿಧಿಯಲ್ಲೇ.

ಮಂಜುನಾಥ ಎನ್ನುವುದು ಮೊದಲಿಂದ ಹಾಗೆಯೇ ಸಂಸ್ಕೃತ ಮಾತೇ ? ಸಂಸ್ಕೃತದಲ್ಲಿ ಮಂಜು ಎಂದರೆ ಮನೋಜ್ಞ. ಹಾಗೆಂದು ಅಮರಕೋಶಕಾರನೇ ಹೇಳಿದ್ದಾನೆ. 'ಮಂಜ ಧ್ವನೌ ಸೌತ್ರಧಾತುಃ' ಎನ್ನುವ ಆಧಾರದ ಮೇಲೆ ಮಂಜಧಾತುವಿಗೆ 'ಕುಃ' ಪ್ರತ್ಯಯ ಸೇರಿ 'ಮಂಜು' ಎಂದಾಗಿ ಮನೋಹರ ಎಂದರ್ಥವನ್ನು ಕೊಡುತ್ತದೆ (ಉಣಾದಿ ಸೂತ್ರ). ಮಂಜುಶ್ರೀ, ಮಂಜುಘೋಷ, ಮಂಜುವೀರ ಮೊದಲಾಗಿ ಕೆಲವು ಬೌದ್ಧದೇವತೆಗಳ ಹೆಸರುಗಳಿವೆ. ಆದರೆ ಅಷ್ಟಾಗಿ ಈ ಪದವು ಇಲ್ಲಿ ಸಂಸ್ಕೃತಸಾಹಿತ್ಯದಲ್ಲಿ ಬಳಕೆಯಲ್ಲಿರುವುದು 'ಮಂಜುಲ' ಎನ್ನುವ ರೂಪದಲ್ಲಿಯೇ. 'ಮಂಗಲ' ಎನ್ನುವ ಸಂಸ್ಕೃತಮಾತಿಗೆ 'ಮಗಿ' ಧಾತುವಿನಿಂದ ಸರ್ವಾರ್ಥರಕ್ಷಣ ಎನ್ನುವ ಅರ್ಥವಾಗುತ್ತದೆ (ಮೇದಿನೀ ಕೋಶ) ; ಮನೋಹರವೆನ್ನುವ ಒಂದು ವಿಸ್ತೃತಾರ್ಥವೂ ಉಂಟು. ಹೀಗೆ ಮಂಗಲ, ಮಂಜುಲ ಎರಡೂ ಪದಗಳು ಏಕಾರ್ಥವಾಚಿಯಾಗುವ ಸಂಭವವಿದ್ದರೂ ಮಂಜುನಾಥನನ್ನು ಮಂಗಳನಾಥನೆಂದು ಸಮೀಕರಿಸುವುದಾಗದು. 'ಮತ್ಸ್ಯೇಂದ್ರನಾಥ' ಎನ್ನುವ ಮಾತೇ ಮಚ್ಛೇಂದ್ರನಾಥ, ಮಛಿಂದ್ರನಾಥ, ಮಚ್ಛನಾಥ, ಮಂಚಿನಾಥ, ಮಂಜಿನಾಥ ಎಂಬ ರೂಪಾಂತರಗಳನ್ನು ಹೊಂದಿ ಮಂಜುನಾಥ ಆಯಿತೆಂಬುದಾಗಿ ಭಾವಿಸುವುದು ಸರಿಯಾದೀತೆಂದು ತೋರುತ್ತದೆ.

ಇನ್ನು ಅಣ್ಣಪ್ಪದೈವದ ವಿಚಾರವೇನು ? ಈಗಿನ ವ್ಯವಸ್ಥೆಯಲ್ಲಿ ಅಣ್ಣಪ್ಪ ದೈವಕ್ಕೂ ಮಂಜುನಾಥನಿಗೂ ಸಂಬಂಧವಿದೆ ; ಚಂದ್ರನಾಥನಿಗೂ ಅಣ್ಣಪ್ಪನಿಗೂ ಸಂಬಂಧವಿರುವಂತೆ ತೋರುವುದಿಲ್ಲ. ಅಣ್ಣಪ್ಪದೈವಕ್ಕೆ ನಡೆಯುವ ಕಟ್ಟಳೆಗಳಲ್ಲಿ ಅಣ್ಣಪ್ಪನಿಗೂ ಹಂದಿಯ ಮೊಗದ ಪಂಜುರ್ಲಿಭೂತಕ್ಕೂ ನಂಟಿದೆ. ಎರಡೂ ಒಂದೇ ಎನ್ನುವವರೂ ಇದ್ದಾರೆ. ಆದರೆ ಅಣ್ಣಪ್ಪ ಮೊದಲಿಗೆ ಮಾಂತ್ರಿಕನೆಂದೂ, ಅವನಿಗೆ ಪಂಜುರ್ಲಿಭೂತದ ಸಿದ್ಧಿಯಾಗಿತ್ತೆಂದೂ ಸಂಪ್ರದಾಯದ ಎಣಿಕೆ. ಇದರಲ್ಲಿ ಹೆಚ್ಚಿನ ಸ್ವಾರಸ್ಯವಂತೂ ಇದೆ. ಮಾಂತ್ರಿಕನಾಗಿದ್ದರೆ ನಾಥಸಿದ್ಧ ಪಂಥದ ಪ್ರಭಾವವನ್ನು ತಳೆದವನೇ ಆಗಿರಬಹುದು. ಪಂಜುರ್ಲಿಭೂತದ ಹರವು ಹೆಚ್ಚಿನದು ; ದೂರದ ತಿಬ್ಬತ್, ನೇಪಾಳಗಳವರೆಗೂ ಅದರ ಹಿರಿಮೆ ಹಬ್ಬಿದೆ. ಹಿಮಾಲಯದ ಪರಿಸರದಲ್ಲಿ ಬಹುಮಟ್ಟಿಗೆ ಪೂಜೆಗೊಳ್ಳುವ ದೈವ ಹಂದಿಯ ಮೊಗದ್ದೇ. ನಮ್ಮ ವರಾಹಾವತಾರದ ಮೂಲವೂ ಪಂಜುರ್ಲಿಯ ಕಲ್ಪನೆಯೇ ತಾನೆ ?

ಅದಿರಲಿ, ತಿಬ್ಬತಿನಲ್ಲಿ 'ಅನನ್‌ಪ್ಪೊ' ಎಂಬ ಹೆಸರಿನ ದೈವವೂ ಇದೆ. ಆ ದೇಶದ ಭಾಷೆಯಲ್ಲಿ 'ಅನನ್' ಎಂದರೆ ಸಣ್ಣಮನುಷ್ಯ, ಕುಳ್ಳ ; 'ಅಪ್ಪೊ' ಎಂದರೆ ತಂದೆ, ಹಿರಿಯ. ಎರಡೂ ಪದಗಳು ಕೂಡಿಕೊಂಡು 'ಅನನ್‌ಪ್ಪೊ' ಎಂದಾಗಿದೆ. 'ಅಣ್ಣಪ್ಪ'ನಿಗೂ 'ಅನನ್‌ಪ್ಪೋ'ವಿಗೂ ಎಷ್ಟು ದೂರ ? ಆದರೆ ಅಲ್ಲಿನ 'ಅನನ್‌ಪ್ಪೊ' ಬೇರೆ ಯಾವ ದೈವದ ಬಂಟನೂ ಅಲ್ಲ ; ಸ್ವತಂತ್ರವಾದ ದೈವ. ಮೇಲಾಗಿ, ಕ್ಷುದ್ರದೈವ ; ಅದಕ್ಕೆ ಅಷ್ಟಾಗಿ ಪ್ರಸಿದ್ಧಿಯಿರದು. ತಿಬ್ಬತಿಗೂ ನಾಥಸಿದ್ಧಪಂಥ ಹೋದುದನ್ನೂ, ಅಲ್ಲಿ ಹರಡಿಕೊಂಡುದನ್ನೂ ಮರೆಯುವ ಹಾಗಿಲ್ಲ. ಇಂದಿಗೂ ಅವರಲ್ಲಿ ಎಂಬತ್ತುನಾಲ್ಕು ಸಿದ್ಧರ ಎಣಿಕೆಯಿದೆ ; ಮತ್ಸ್ಯೇಂದ್ರನಾಥನಿಗೆ ಹಿರಿಮೆಯ ಸ್ಥಾನವಿದೆ ; ಬೋಧಿಸತ್ತ್ವ ಮಂಜುಘೋಷನೊಂದಿಗೆ ಅವನನ್ನು ಸಮೀಕರಿಸುವುದೂ ಇದೆ. ಹೀಗಾಗಿ ತುಳುನಾಡಿಗೂ ಹಿಮಾಲಯದ ನೆರೆಯ ತಿಬ್ಬತಿಗೂ ಒದಗಿಬಂದ ವಜ್ರಯಾನದ ನಂಟು ಅಣ್ಣಪ್ಪನನ್ನು ಇಲ್ಲಿಂದ ಅಲ್ಲಿಗೆ ಒಯ್ದಿತೋ ? ನಾಥಸಿದ್ಧ ಸಂಪ್ರದಾಯದ ನೆರೆ ಈ ಕಡೆ ಬಂದಾಗ ಮಂಗಳೆಯೊಂದಿಗೆ ಕೇರಳದಿಂದಲೇ ಅಣ್ಣಪ್ಪನೂ ಬಂದವನೋ ?

ಅಂತೂ, ಇದರಲ್ಲಿ ಇನ್ನೂ ಬಗೆಹರಿಯದ ತೊಡಕುಗಳಿವೆಯೆಂಬು ದೇನೋ ಕಂಡಿತ. ಆದರೆ ಇದನ್ನು ಕುರಿತು ವ್ಯವಸ್ಥಿತವಾದ, ಸಮಗ್ರವಾದ ಸಂಶೋಧನೆ ನಡೆದರೆ ತುಂಬ ಸ್ವಾರಸ್ಯವಾದ ವಿವರಗಳು ಹೊರಬರುವುವು. ತುಳುನಾಡಿನಲ್ಲಿ ನಾಥಸಿದ್ಧ, ಶೈವ, ಬೌದ್ಧ, ಜೈನ ಧರ್ಮಗಳು ಭೂತಾರಾಧ ನೆಯ ಚೌಕಟ್ಟಿನಲ್ಲಿ ಕೂಡಿಕೊಂಡ ಬಗೆಯನ್ನು ಗುರುತಿಸುವುದಾದರೆ ನಾಡಿನ ಧಾರ್ಮಿಕ ಇತಿಹಾಸದ ಮೇಲೆ ಹೊಸ ಬೆಳಕು ಬೀಳಬಹುದು.

ಇನ್ನು ನಾನು ಬರೆದಿರುವ ಬರಹದ ವಿಚಾರ. ಇದರಲ್ಲಿ ಕಲ್ಪನೆಯೇ ಮುಖ್ಯವಾದದ್ದೆಂದು ಮೊದಲಲ್ಲೇ ಅರಿಕೆಮಾಡಿಕೊಂಡಿದ್ದೇನೆ. ಆದರೆ ಮಾನವ ಇತಿಹಾಸದ ಎಳೆಗಳನ್ನು ನಾನು ಕಂಡುಕೊಂಡಂತೆ ಅದರಲ್ಲಿ ಅಳವಡಿ ಸುವ ಯತ್ನವೂ ಇದೆಯೆನ್ನಿ. ಇದರ ವಿವರಣೆಯಾಗಿ ಈ ಕೆಲವು ಮಾತುಗಳನ್ನು ಹೇಳಬಹುದೇನೋ.

ಭೂತಗಳು ನೆನ್ನೆ-ಮೊನ್ನೆಯವಲ್ಲ ; ಮಾನವ ಸಂಸ್ಕೃತಿ ಮೊದಲಾದಾ ಗಲೇ ಭೂತಗಳ ಸಂಚಾರವೂ ಮೊದಲಿಟ್ಟಿತು. ಪ್ರಾಕ್ತನ ಇತಿಹಾಸವನ್ನು ಅಧ್ಯಯನ ಮಾಡುವಾಗ, ಭೂತಗಳ ಕಲ್ಪನೆ ಎಷ್ಟು ಮೂಲಭೂತವಾದುದು ಎನ್ನುವುದು ಸ್ಪಷ್ಟವಾಗುತ್ತದೆ. ಮನುಷ್ಯನ ಸಮಾಜ ಜೀವನ, ಸಮುದಾಯ ಧೋರಣೆ, ಸಂಘಪ್ರವೃತ್ತಿ ಇವುಗಳಿಗೂ ವ್ಯಕ್ತಿಯ ಒಡಲೊಳಗೆ ಅಡಗಿರುವ ವ್ಯಕ್ತ, ವ್ಯಕ್ತಾವ್ಯಕ್ತ, ಅವ್ಯಕ್ತ ಮನೋವೃತ್ತಿಗಳಿಗೂ ನಿಕಟವಾದ ನೆಂಟದೆಯಷ್ಟೆ? ಈ ಮನೋವೃತ್ತಿಗಳಲ್ಲಿ ಅಂಜಿಕೆ ಮುಖ್ಯವಾದುದು ; ಹಲವಾರು ಮುಖಗಳು ಈ ಅಂಜಿಕೆಗೆ. ಒಂದು ಮುಖದಿಂದಲೇ ಸಮುದಾಯ ಜೀವನ ಹೊರಹೊಮ್ಮಿತು ; ಇನ್ನೊಂದು ಮುಖದಿಂದ ಅಧ್ಯಾತ್ಮ ಪ್ರವೃತ್ತಿ ಚಿಗುರೊಡೆಯಿತು. ಸಮಾಜದ ಕಟ್ಟು-ಕಟ್ಟಳೆಗಳಿಗೂ ಧರ್ಮದ ಆಚಾರ-ವಿಚಾರಗಳಿಗೂ ಅಂಜಿಕೆಯೇ ಆಸರೆಯೆನ್ನುವುದು ಈಗೀಗ ನಡೆದಿರುವ ಅಧ್ಯಯನ ಗಳಿಂದ ತಿಳಿದುಬರುತ್ತಿದೆ. ಆದರೆ ಈ ಅಂಜಿಕೆ ನಮ್ಮ ದಿನನಿತ್ಯದ ಹೆದರಿಕೆ ಯಂತಲ್ಲ ; ಇದು ಬಾಳುವೆಯ ತಳದಲ್ಲೇ ಎರಕ ಹೊಯ್ದಿರುವ ಮನೋವೃತ್ತಿ ; ನಮ್ಮ ಎಚ್ಚರದ ಅರಿವಿಗೆ ಬಾರದಿದ್ದರೂ ನಿಂತು ಆಡಿಸುತ್ತಿರುವುದು.

ವ್ಯಕ್ತಿಯ ಅಂಜಿಕೆ ಬೀಡಿನ (ಎಂದರೆ ಸಮುದಾಯದ) ಅಭಯವನ್ನು ಕಲ್ಪಿಸಿಕೊಂಡು ನೆಮ್ಮದಿಯ ದಾರಿಯನ್ನು ಹಿಡಿದಾಗ ನೆಮ್ಮದಿಯ ದಾರಿಯಲ್ಲಿ ಮೊದಮೊದಲು ಮನುಷ್ಯನಿಗೆ ನೆರವಾದ ವಿವರ ಭೂತವೇ. ಭೂತಾಳ ಪಾಂಡ್ಯನ ಹದಿನಾಲ್ಕು ಕಟ್ಟುಗಳು (ಜಾತಿ, ನೀತಿ, ಮಾನ, ಮರ್ಯಾದಿ, ಹುಟ್ಟು, ಕಟ್ಟು, ಹಿಂದೆ, ಮುಂದೆ, ಹೆಚ್ಚು, ಕಮ್ಮಿ, ಬಳಿ, ಬಣ್ಣ, ಅಳಿ, ಉಳಿ) ಮಾನವ ಸಂಸ್ಕೃತಿಯ ಮೊದಲ ಸ್ತರದಲ್ಲೇ ಮೂಡಿಕೊಂಡುಬಂದವು ; ಇಡೀ ಜಗತ್ತಿನಲ್ಲೆಲ್ಲ ಮನುಷ್ಯ ಬೆಳೆದದ್ದು, ಮುಂದರಿದದ್ದು ಈ ಹದಿನಾಲ್ಕು ಕಟ್ಟುಗಳ ಆಧಾರದ ಮೇಲೇ. ಆ ಕಟ್ಟು ಕಟ್ಟಳೆಗಳು ಈ ಕಡೆ ಪಡೆದುಕೊಂಡ ನಿರ್ದಿಷ್ಟ ರೂಪ ಗೌಣ ; ಅದರ ವಿಚಾರ ನಾವು ತಲೆ ಕೆಡಿಸಿಕೊಳ್ಳುವ ಕಾರಣ ವಿಲ್ಲ. ಹದಿನಾಲ್ಕು ಬರಿಯ ವಿವರಗಳನ್ನು ಮಾತ್ರ ಗ್ರಹಿಸಿದರೆ, ಅವು ಮನು ಷ್ಯನ ಸಮಾಜಜೀವನದ ಒಳಹಂದರವೇ ! ಈ ಹದಿನಾಲ್ಕನ್ನು ಬಿಟ್ಟು ಹದಿ ನೈದನೆಯದನ್ನು ಯಾರಾಗಲಿ ಎಣಿಸಬಹುದೆ ?

ಅಣ್ಣಪ್ಪದೈವದ ಕತೆಯನ್ನು ನಾನು ಕಲ್ಪಿಸಿಕೊಳ್ಳುವಾಗ ಬಹುಶಃ ಮಾನವ ಸಂಸ್ಕೃತಿಯ ಮೊದಲ ದಿನಗಳನ್ನು ಊಹಿಸಿಕೊಳ್ಳುವ ಕಾತರವಿದ್ದಿ ತೇನೋ ! ಮನುಷ್ಯನ ಹೊರಗೆ, ಮನುಷ್ಯನ ಒಳಗೆ, ಹೊರಗು ಒಳಗುಗಳ ನಡುವೆ ಆಗ ಏನೆಲ್ಲ ನಡೆಯಿತೋ, ಯಾರು ಹೇಳಿಯಾರು ? ಭಾಷೆ, ಬೆಡಗು, ಬಿನ್ನಾಣ, ಗುಂಪು, ಗೊತ್ತು, ಗುರಿ, ನೀತಿ, ನಯ ಇವೆಲ್ಲ ಬೆಳೆದು ಒಂದು ಘಟ್ಟವನ್ನು ಮುಟ್ಟುವ ಮೊದಲು ಮನುಷ್ಯನ ಬದುಕು ಹೇಗಿದ್ದೀತು ? ಅಂಜಿಕೆಯ ಆಳದಲ್ಲೇ ಉಳಿದಿದ್ದ ಅವನ ಆತಂಕ ಏನಿದ್ದೀತು ? ಹೀಗೆಲ್ಲ ಆಲೋ ಚನೆ ಮಾಡುವಾಗ ಭೂತಗಳ ಕಲ್ಪನೆಯ ಸ್ವಾರಸ್ಯ ಮನದಟ್ಟಾಗುತ್ತದೆ. ಮನು ಷ್ಯನನ್ನು ಭೂತಗಳೇ ನೆಮ್ಮದಿಯ ದಾರಿಯಲ್ಲಿ ಕೈಹಿಡಿದು ನಡೆಸಿದುವೋ ಎನಿಸುತ್ತದೆ.

ಇದು ನನ್ನ ಬರಹದ ಹಿನ್ನೆಲೆ. ಒಡಲೊಳಗಿನ ಶಕ್ತಿಗಳು ಇಡೀ ನಿಸ ರ್ಗದ ಮಡಿಲಿಂದ ಇಳಿದು ಬಂದವೇ ; ಗಟ್ಟವಿಳಿದು ಬಂದ ಭೂತಗಳಂತೆ ! ಇಳಿದು ಬರುವಾಗ, ಮನುಷ್ಯನ ಅರಿವು ಅವನ್ನು ಬರಮಾಡಿಕೊಂಡುದು ಹೇಗೆ

ಎಂಬುದನ್ನು ಈ ಬರಹ ಎತ್ತಿಕೊಂಡಿದೆಯೋ ಏನೋ! ಅಣ್ಣಪ್ಪನ ಗುಡ್ಡದ ಮೇಲೆ ಇದ್ದಕ್ಕಿದ್ದಂತೆ ಈ ನೋಟ ನನ್ನ ಮನಸ್ಸಿಗೆ ದೊರೆಯಿತಾಗಿ ಅದನ್ನು ಅಣ್ಣಪ್ಪದೈವಕ್ಕೇ ಸಲ್ಲಿಸಿದ್ದೇನೆ. ಆದರೆ ದಿಟವಾಗಿ ಇದು ಜಗತ್ತಿನ ಯಾವ ಭೂತಕ್ಕಾದರೂ ಸಲ್ಲುವ ಮಾತೇ, ಯಾವ ಮನುಷ್ಯನ ಒಳಬಾಳಿಗೂ ಸೇರಿ ಬರುವ ಮಾತೇ.

ಭೂತ ಹೊರಗಿರುವ ವಸ್ತುವೋ ಹೇಗೋ ನನಗೆ ತಿಳಿಯದು ; ಆದರೆ ಅದು ಒಳಗಣ ಪ್ರವೃತ್ತಿಯೆಂಬುದೇನೋ ನನಗೆ ಮನದಟ್ಟಾಗಿದೆ. ಭೂತದ ಕತೆಯೆಂದರೆ ಮನುಷ್ಯನ ಒಡಲಲ್ಲಿ ನಡೆದಿರುವ ಹಗರಣವೆಂದೇ ನನ್ನ ಎಣಿಕೆ. ಹಿಂದೆ ಎಂದೋ ನಡೆದದ್ದು ಕತೆಯಾದರೂ ಇಂದಿಗೂ ನಡೆಯುತ್ತಿರುವ ಪ್ರಸಂಗವೇ ಅದು ! ಭೂತಗಳ ಲೋಕದಲ್ಲಿ ಅಂದು, ಇಂದು ಕೂಡಿಕೊಳ್ಳುತ್ತವೆ. ಹಾಗೆ ಕೂಡಿಕೊಂಡರೇ ನಮ್ಮ ಬಾಳು.

ಅಡಿಟಿಪ್ಪಣಿಗಳು

1. 'ಧರ್ಮಸ್ಥಳದ ಶಿವಲಿಂಗಕ್ಕೆ ಮಂಜುನಾಥ ಎಂಬ ಹೆಸರು ಹೇಗೆ ಬಂತು ?', **ಸಮರ್ಪಣೆ** (ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ), 1950, ಪು. 65–77

2. **ತೆಂಕನಾಡು,** ಪು. 26

3. South Indian Inscriptions, 7, ಸಂ. 191, ಪು. 87 ; ಇದು ಕುಂದವರ್ಮ-ಆಳುಪೇಂದ್ರನ ಶಾಸನ

4. **ಸಮರ್ಪಣೆ,** ಪು. 70

5. Indian Antiquary, 1880, 9, ಪು. 192

6. **ತ್ರಿಕಾಂಡಶೇಷ,** 14

7. ಮ. ಸು. ಕೃಷ್ಣಮೂರ್ತಿ, **ಸಿದ್ಧಸಾಹಿತ್ಯ,** ಮೈಸೂರು ವಿಶ್ವವಿದ್ಯಾನಿಲಯ, 1982, ಪು. 189

8. SII, 7 ಸಂ. 189 ಮತ್ತು 190, ಪು. 84–86

9. ಆಳುಪ ಪಿರಿಯರಸಿ ಬಲ್ಲಮಹಾದೇವಿಯ ಶಾಸನ (ಕ್ರಿ. 1277–1292) Archaeological Report, 1929–20, ಸಂ. 584

10. ಹಜಾರೀ ಪ್ರಸಾದ ದ್ವಿವೇದಿ, **ನಾಥ ಸಂಪ್ರದಾಯ್** (ಹಿಂದಿ), ಉತ್ತರಪ್ರದೇಶ ಹಿಂದುಸ್ಥಾನೀ ಅಕಾದಮಿ, 1950

11. ಪಿ. ಗುರುರಾಜಭಟ್ಟ, Studies in Tuluva History and Culture, 1975, ಪು. 181

12. ಇಲಿಯಟ್-ಡಾಸನ್, A History of India as told by Her own Historians, I, ಪು. 42, 68

13. SII, 7, ಸಂ. 194

14. SII, 7, ಸಂ. 189

15. SII, 7, ಸಂ. 194

16. ತಿಬ್ಬತಿನಲ್ಲಿ ಬಳಕೆಯಲ್ಲಿರುವ ವಿವರ, ರಾಹುಲ ಸಾಂಕೃತ್ಯಾಯನರ ಸಂಗ್ರಹ

17. ಅನಂತಶಯನ ಸಂಸ್ಕೃತ ಗ್ರಂಥಮಾಲೆ (ಸಂ. ಟಿ. ಗಣಪತಿ ಶಾಸ್ತ್ರಿ), 1920

18. ನಂದೊಳ್ಗಿ ಶೀನಪ್ಪ ಹೆಗ್ಡೆ, **ದಕ್ಷಿಣ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯಕಟ್ಟು**, ದ್ವಿತೀಯ ಮುದ್ರಣ, ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, 1981, ಪು. 122–123

19. SII, 7. ಸಂ. 229

ಅಣ್ಣಪ್ಪ ದೈವ

ಮನುಷ್ಯನ ಬದುಕಿನಲ್ಲಿ ದೈವಗಳ ಪಾತ್ರವೇನು? ಅವೇನು ಅವನ ಒಳಗಿವೆಯೋ ಹೊರಗಿವೆಯೋ? ವ್ಯಕ್ತಿಗೆ ಆತಂಕವೊದಗಿದಾಗ ನೆಮ್ಮದಿ, ಸಮುದಾಯದ ನೀತಿಗೊಂದು ನೆಲೆ, ಎರಡರ ನಡುವೆ ಹೊಂದಾಣಿಕೆ–ಇದು ದೈವದ ಕೆಲಸವೇ.

ಇತಿಹಾಸದ ಮುಂಜಾನೆಯಲ್ಲಿ ಮನುಷ್ಯನ ಚೇತನ ದೈವಗಳನ್ನು ಕಂಡುಕೊಂಡ ಕತೆ ಇಲ್ಲಿದೆ. ಕಲ್ಪನೆಯ ಮೂಲಪ್ರತಿಮೆಗಳ ಒಳಗಂದಿ ಈ ನಿರೂಪಣೆಯಲ್ಲಿ ಕಾಣಸಿಗುತ್ತದೆ. ಲೇಖಕರೇ ಬಿಡಿಸಿದ ರೇಖಾಚಿತ್ರಗಳು ಕತೆಯ ಅದ್ಭುತರಸವನ್ನು ಹೆಚ್ಚಿಸುತ್ತವೆ.